ಬುಧವಾರ, ಜೂನ್ 19, 2024 | ₹ 7.00
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸೆಲ್ಫಿ ಖುಷಿ**
ನಟಿ ರೈಮಾ ಸೇನ್ ಅವರು ಕೋಲ್ಕತ್ತದಲ್ಲಿ ನಡೆದ ಆಸ್ಟ್ರೇಲಿಯಾದ ಪ್ರವಾಸೋದ್ಯಮ ಪ್ರಚಾರ ಕಾರ್ಯಕ್ರಮವೊಂದರಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಂಡರು



ರೇಣುಕಸ್ವಾಮಿ ನಿವಾಸಕ್ಕೆ ಗೃಹ ಸಚಿವರ ಭೇಟಿ • ಪತ್ನಿ, ಪೋಷಕರಿಗೆ ಸಾಂತ್ವನ • ಸಿಬಿಐ ತನಿಖೆ ಇಲ್ಲ

# ಸಚಿವ, ಶಾಸಕರ ಒತ್ತಡ ಇಲ್ಲ: ಪರಮೇಶ್ವರ

ಪ್ರಜಾವಾಣಿ ವಾರ್ತೆ



ಚಿತ್ರದುರ್ಗದಲ್ಲಿನ ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ಗೃಹ ಸಚಿವ ಡಾ.ಜಿ.ಪರಮೇಶ್ವರ ಎದುರು ರೇಣುಕಸ್ವಾಮಿ ಪತ್ನಿ, ತಂದೆ ಹಾಗೂ ತಾಯಿ ನೋವು ತೋಡಿಕೊಂಡರು

**ಚಿತ್ರದುರ್ಗ:** 'ರೇಣುಕಸ್ವಾಮಿ ಹತ್ಯೆ ಪ್ರಕರಣದ ತನಿಖೆಯನ್ನು ನಮ್ಮ ಪೊಲೀಸರು ಸಮರ್ಥವಾಗಿ ನಡೆಸುತ್ತಿದ್ದಾರೆ. ಪೊಲೀಸರ ಮೇಲೆ ಯಾವುದೇ ಸಚಿವರಾಗಲೀ, ಶಾಸಕರಾಗಲೀ ಒತ್ತಡ ಹಾಕಿಲ್ಲ. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅವಶ್ಯಕತೆ ಇಲ್ಲ' ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ರೇಣುಕಸ್ವಾಮಿ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ರೇಣುಕಸ್ವಾಮಿ ಹತ್ಯೆ ಪ್ರಕರಣದ ಕುರಿತು ಕೆಲವರು ರಾಜಕೀಯ ಹೇಳಿಕೆ ನೀಡುತ್ತಿರುವುದನ್ನು ಗಮನಿಸುತ್ತಿದ್ದೇನೆ. ತನಿಖೆ ನ್ಯಾಯಯುತವಾಗಿ ನಡೆಯುತ್ತಿದೆ. ಇದನ್ನು ರಾಜಕೀಯ ದೃಷ್ಟಿಕೋನದಿಂದ ನೋಡಬಾರದು' ಎಂದರು.

'ಘಟನೆ ನಡೆದು 48 ಗಂಟೆಯೊಳಗೆ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಯಾರ ಮುಲಾಜು, ಒತ್ತಡಕ್ಕೂ ಅವರು ಒಳಗಾಗಿಲ್ಲ. ಇಲ್ಲಿಯವರೆಗೆ 17 ಜನ ಆರೋಪಿಗಳನ್ನು ಬಂಧಿಸಲಾಗಿದೆ. ತ್ವರಿತಗತಿಯಲ್ಲಿ ಎಲ್ಲ ಮಾಹಿತಿಗಳನ್ನೂ ಕಲೆಹಾಕಿದ್ದಾರೆ. ಆರೋಪಿಗಳ ವಿರುದ್ಧ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ರೇಣುಕಸ್ವಾಮಿ ಪತ್ನಿ, ತಂದೆ–ತಾಯಿಯನ್ನು ಭೇಟಿಯಾಗಿ ಸಾಂತ್ವನ ಹೇಳಿದ್ದೇನೆ. ಈ ಘಟನೆ ನಡೆಯಬಾರದಿತ್ತು. ನಮಗೂ ನೋವಾಗಿದೆ. ರೇಣುಕಸ್ವಾಮಿ ಪತ್ನಿಗೆ ಸರ್ಕಾರಿ ಕೆಲಸ ನೀಡುವಂತೆ ಕುಟುಂಬದವರು ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ವೈಯಕ್ತಿಕವಾಗಿ ₹ 2 ಲಕ್ಷ ನೆರವಿನ ಚೆಕ್ ವಿತರಿಸಿದರು.

**ಬಿಜೆಪಿಯಿಂದ ₹ 2 ಲಕ್ಷ ನೆರವು:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರೇಣುಕಸ್ವಾಮಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

'ಪಕ್ಷದ ವತಿಯಿಂದ ಕುಟುಂಬ ಸದಸ್ಯರಿಗೆ ₹ 2 ಲಕ್ಷ ನೆರವು ನೀಡಿದ್ದೇವೆ. ಈ ಅಮಾನುಷ ಕೃತ್ಯದ ಕುರಿತು ರಾಷ್ಟ್ರಮಟ್ಟದಲ್ಲೂ ಚರ್ಚೆಯಾಗುತ್ತಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದರು.

'ಆರೋಪಿಗಳು ಎಷ್ಟೇ ಪ್ರಭಾವಿಗಳಾದರೂ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ತನಿಖೆ ದಿಕ್ಕು ತಪ್ಪದಂತೆ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ನಾವು ರಾಜಕಾರಣ ಮಾಡುವುದಿಲ್ಲ. ರೇಣುಕಸ್ವಾಮಿ ಪತ್ನಿಗೆ ಸರ್ಕಾರಿ ಕೆಲಸ ಕೊಡಿಸಬೇಕು' ಎಂದು ಒತ್ತಾಯಿಸಿದರು.

### ಕಾನೂನು ನೆರವಿಗೆ ಕುಟುಂಬಸ್ಥರ ಮನವಿ

ಆರೋಪಿಗಳ ವಿರುದ್ಧ ರೇಣುಕಸ್ವಾಮಿ ಕುಟುಂಬ ಸದಸ್ಯರೂ ಕಾನೂನು ಹೋರಾಟ ನಡೆಸಲು ನಿರ್ಧರಿಸಿದ್ದಾರೆ. ಇದಕ್ಕಾಗಿ ಸರ್ಕಾರದಿಂದಲೇ ವಕೀಲರೊಬ್ಬರನ್ನು ನೇಮಿಸಿಕೊಡಬೇಕು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿದರು.

'ಪೊಲೀಸರ ಕ್ರಮದ ಬಗ್ಗೆ ಸಮಾಧಾನವಿದೆ. ಆದರೆ, ಆರೋಪಿಗಳು ಪ್ರಭಾವಿಗಳಾಗಿದ್ದಾರೆ. ತನಿಖೆಯ ದಿಕ್ಕು ತಪ್ಪಿಸುವ ಸಾಧ್ಯತೆ ಇದೆ. ಜಾಮೀನಿನ ಮೇಲೆ ಹೊರಬಂದು ಸಾಕ್ಷ್ಯ ನಾಶಪಡಿಸುವ ಸಂಭವವೂ ಇದೆ. ಸರ್ಕಾರಿ ಅಭಿಯೋಜಕರ ಜೊತೆಗೆ ನಮ್ಮ ಕಡೆಯಿಂದ ವಕೀಲರೊಬ್ಬರನ್ನು ನೇಮಿಸಬೇಕು. ಇದಕ್ಕಾಗಿ ಸರ್ಕಾರವೇ ನೆರವು ನೀಡಬೇಕು' ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

**ದರ್ಶನ್ ಪ್ರಕರಣದ ಕುರಿತು ಕೇಂದ್ರ ಸಚಿವನಾಗಿ ನಾನು ಮಾತನಾಡುವುದು ಸರಿಯಲ್ಲ. ಆದರೆ, ಕಾನೂನಿನಡಿ ಯಾರೇ ತಪ್ಪು ಮಾಡಿದರೂ ಶಿಕ್ಷೆ ಅನುಭವಿಸಬೇಕು. ಕಾನೂನು ಧಿಕ್ಕರಿಸಿದಾಗ, ಎಂತಹದ್ದೇ ದೊಡ್ಡ ವ್ಯಕ್ತಿ ಆಗಿದ್ದರೂ ತಲೆ ಬಾಗಬೇಕು. ಕಾನೂನಿನ ಎದುರು ಯಾರೂ ದೊಡ್ಡವರಲ್ಲ**

**ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

**'2021ರಲ್ಲಿ ದರ್ಶನ್ ಅವರ ಒಳ್ಳೆಯದ್ದಕ್ಕೆ ನಾನು ಹೇಳಿದ್ದೆ. ಅವತ್ತು ಸುಧಾರಣೆಯಾಗಿದ್ದರೆ, ಇಂದು ಈ ಅನಾಹುತ ಆಗುತ್ತಿರಲಿಲ್ಲ. ರೇಣುಕಸ್ವಾಮಿ ಪತ್ನಿಗೆ ನ್ಯಾಯ ಕೊಡಿಸಬೇಕು. ವೈಯಕ್ತಿಕವಾಗಿ ₹20 ಸಾವಿರ ನೆರವು ನೀಡುತ್ತೇನೆ. ಚಿತ್ರರಂಗದವರು ಕೂಡ ಆರ್ಥಿಕ ನೆರವು ನೀಡಲಿ**

**ಇಂದ್ರಜಿತ್ ಲಂಕೇಶ್,** ಚಲನಚಿತ್ರ ನಿರ್ದೇಶಕ

## ಸುದ್ದಿ 2 ನಿಮಿಷ

### ಪೊಲೀಸ್ ತನಿಖೆಯಿಂದ ಸತ್ಯ ಹೊರಬರಲಿದೆ: ರಚಿತಾ ರಾಮ್

**ಬೆಂಗಳೂರು:** ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ನಟಿ ರಚಿತಾ ರಾಮ್, 'ಸತ್ಯ ಏನಿದ್ದರೂ ಪೊಲೀಸ್ ತನಿಖೆಯಿಂದ ನಮ್ಮ ಮುಂದೆ ಬರಲಿದೆ' ಎಂದಿದ್ದಾರೆ.

'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಅಡಿಬರಹ ನೀಡಿ ಪತ್ರವೊಂದನ್ನು ರಚಿತಾ ಪೋಸ್ಟ್ ಮಾಡಿದ್ದಾರೆ. 'ಇದನ್ನು ನಾನು ನಟಿಯಾಗಿ ಅಲ್ಲ ಸಾಮಾನ್ಯ ಪ್ರಜೆಯಾಗಿ ಬರೆಯುತ್ತಿದ್ದೇನೆ. ಇತ್ತೀಚೆಗೆ ನಡೆದ ಪ್ರಕರಣದ ಬಗ್ಗೆ ನನ್ನ ಮಾತು ಇವು. ಮೊದಲನೆಯದಾಗಿ ರೇಣುಕಸ್ವಾಮಿ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಕ್ಕೆ ಭಗವಂತ ದುಃಖ ಭರಿಸುವ ಶಕ್ತಿ ನೀಡಲಿ ಎಂಬ ಪ್ರಾರ್ಥನೆ ಮಾಡುತ್ತೇನೆ. ಈ ಹತ್ಯೆಗೆ ಕಾನೂನಾತ್ಮಕವಾಗಿ ನ್ಯಾಯ ಸಿಗುತ್ತದೆಂಬ ಭರವಸೆ ನನಗಿದೆ. ನನ್ನನ್ನು ಚಿತ್ರರಂಗಕ್ಕೆ ಪರಿಚಯಿಸಿದ ನಟ ದರ್ಶನ್ ಸರ್ ನನಗೆ ಗುರು ಸಮಾನರು. ನನ್ನ ಜೀವನದ ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ನೀಡಿದಂತಹ ವ್ಯಕ್ತಿ ಇಂತಹ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವುದು ನಂಬಲು ಸ್ವಲ್ಪ ಕಷ್ಟವಾಗುತ್ತಿದೆ. ಏನಿದ್ದರೂ ಸತ್ಯ ಪೊಲೀಸ್ ತನಿಖೆಯಿಂದ ನಮ್ಮ ಮುಂದೆ ಬರಲಿದೆ ಎನ್ನುವುದೆ ನನ್ನ ನಂಬಿಕೆ. ನನ್ನ ಮಾಧ್ಯಮ ಮಿತ್ರರು ಈ ಕೇಸ್‌ನ ವರದಿಯಲ್ಲಿ ಪಾರದರ್ಶಕವಾಗಿರುತ್ತೀರಿ ಮತ್ತು ನಿಷ್ಪಕ್ಷವಾಗಿ ಕೆಲಸ ಮಾಡುತ್ತೀರಿ ಎಂದು ಆಶಿಸುತ್ತೇನೆ' ಎಂದು ಆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



### 'ದರ್ಶನ್ ವರ್ತನೆ ಒರಟು'

**ಬೆಳಗಾವಿ:** 'ನಟ ದರ್ಶನ್ ವರ್ತನೆ ಒರಟಾಗಿದೆ. ಆದರೆ, ನಮ್ಮೊಂದಿಗೆ ಆ ರೀತಿ ವರ್ತಿಸುತ್ತಿರಲಿಲ್ಲ. ರೇಣುಕಸ್ವಾಮಿ ಕೊಲೆ ಯಾರು ಮಾಡಿದ್ದಾರೆ ಎಂಬುದನ್ನು ನ್ಯಾಯಾಲಯ ತೀರ್ಮಾನಿಸಲಿದೆ. ನಾನು ಏನನ್ನೂ ಹೇಳುವುದಿಲ್ಲ' ಎಂದು ಧಾರವಾಡ ಶಾಸಕ ವಿನಯ ಕುಲಕರ್ಣಿ ಮಂಗಳವಾರ ಹೇಳಿದರು.

'ಪ್ರಕರಣದಿಂದ ದರ್ಶನ್ ಅವರನ್ನು ಕಾಪಾಡಲು ಯಾರೂ ಒತ್ತಡ ಹೇರಿಲ್ಲ. ಈ ಪ್ರಕರಣದ ಬಗ್ಗೆ ಇಡೀ ರಾಜ್ಯಕ್ಕೆ ಗೊತ್ತಿದೆ. ಮಾಧ್ಯಮಗಳಲ್ಲೂ ಸಾಕಷ್ಟು ವರದಿ ಪ್ರಸಾರವಾಗುತ್ತಿದೆ. ಒತ್ತಡ ಹೇರುವ ಪ್ರಶ್ನೆ ಬರುವುದಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

## ಫಾರ್ಮ್‌ಹೌಸ್ ಮೇಲ್ವಿಚಾರಕ ಆತ್ಮಹತ್ಯೆ ಪ್ರಕರಣಕ್ಕೆ ಮರುಜೀವ



ಬಗ್ಗನದೊಡ್ಡಿ ಸಮೀಪದಲ್ಲಿರುವ ದರ್ಶನ್ ಫಾರ್ಮ್‌ಹೌಸ್

ಪ್ರಜಾವಾಣಿ ವಾರ್ತೆ

**ಆನೇಕಲ್:** ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ಚಿತ್ರನಟ ದರ್ಶನ್ ಒಡೆತನದ ಫಾರ್ಮ್‌ಹೌಸ್ ಮೇಲ್ವಿಚಾರಕ ಶ್ರೀಧರ್ ಆತ್ಮಹತ್ಯೆಗೆ ಸಂಬಂಧಿಸಿದ ಕಡತಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಂಗಳವಾರ ತರಿಸಿಕೊಂಡು ಪರಿಶೀಲಿಸಿದರು.

'ಮಗನ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಶ್ರೀಧರ್ ತಂದೆ ಆನೇಕಲ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಹಾಗಾಗಿ ಸಂಬಂಧಿಸಿದ ಕಡತ, ಮರಣೋತ್ತರ ಪರೀಕ್ಷೆ ಮತ್ತು ಎಫ್‌ಎಸ್‌ಎಲ್ ವರದಿ ಪರಿಶೀಲಿಸಲಾಗುತ್ತಿದೆ' ಎಂದು ಬಾಲದಂಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಆನೇಕಲ್ ತಾಲ್ಲೂಕಿನ ಇಂಡ್ಲವಾಡಿ ಪಂಚಾಯಿತಿ ವ್ಯಾಪ್ತಿಯ ಬಗ್ಗನದೊಡ್ಡಿ ಗ್ರಾಮದಲ್ಲಿ ನಟ ದರ್ಶನ್ ಒಡೆತನದ ಫಾರ್ಮ್‌ಹೌಸ್ ಇದೆ. ಅದರ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದ ಶ್ರೀಧರ್ (35) ಇದೇ ಏ.17ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದ. ಸಾವಿಗೂ ಮುನ್ನ ಬರೆದಿಟ್ಟಿರುವ ಮರಣ ಪತ್ರದಲ್ಲಿ (ಡೆತ್‌ನೋಟ್) ತನ್ನ ಸಾವಿಗೆ ಯಾರೂ ಕಾರಣ ಅಲ್ಲ ಎಂದು ಹೇಳಿದ್ದ. ಆನೇಕಲ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿತ್ತು.



ಶ್ರೀಧರ್

'ಆತ್ಮಹತ್ಯೆಗೆ ಒಂಟಿತನ ಕಾರಣ. ಹಾಗಾಗಿ ಈ ಸಂಬಂಧ ಯಾರಿಗೂ ತೊಂದರೆ ಕೊಡಬೇಡಿ' ಎಂದು ಶ್ರೀಧರ್ ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ. ಸಾಯುವ ಮುನ್ನ ಮಾಡಿದ ವಿಡಿಯೊ ರೆಕಾರ್ಡ್‌ನಲ್ಲಿ ಕೂಡ ಆತ ಇದೇ ಮಾತು ಹೇಳಿದ್ದಾನೆ.

'ಶ್ರೀಧರ್‌ಗೆ ಮದುವೆ ಆಗಿರಲಿಲ್ಲ. ಮನೆಯಲ್ಲಿ ಜಗಳ ಮಾಡಿಕೊಂಡು ಫಾರ್ಮ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ' ಎಂದು ಆತನ ತಂದೆ ಆನೇಕಲ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಮಗನ ಸಾವಿನ ಬಗ್ಗೆ ತನಿಖೆ ಮಾಡುವಂತೆ ಮನವಿ ಮಾಡಿದ್ದರು.

# ದರ್ಶನ್‌ಗೆ ರೌಡಿಗಳ ನಂಟು ಪತ್ತೆ

ಪ್ರಕರಣದ ತನಿಖೆ ಚುರುಕು, ಡ್ರಗ್ಸ್ ಸೇವನೆ ಪತ್ತೆಗೆ ರಕ್ತದ ಮಾದರಿ ಸಂಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ನಟ ದರ್ಶನ್ ಮತ್ತು ತಂಡದ ಸದಸ್ಯರ ಮೊಬೈಲ್ ಕರೆಗಳ ವಿವರ, ವಾಟ್ಸ್‌ಆ್ಯಪ್ ಅನ್ನು ತಾಂತ್ರಿಕ ತಜ್ಞರು ಪರಿಶೀಲಿಸಿದ್ದು, ಬಂಧಿತ ಆರೋಪಿಗಳ ಪೈಕಿ ಕೆಲವರು ರೌಡಿಗಳ ಸಂಪರ್ಕದಲ್ಲಿ ಇದ್ದದ್ದು ಗೊತ್ತಾಗಿದೆ.

'ಬಂಧಿತ ಆರೋಪಿಗಳ ಆರು ತಿಂಗಳ ಮೊಬೈಲ್ ಕರೆಗಳ ವಿವರ ಪಡೆಯಲಾಗುತ್ತಿದೆ.ಬಂಧಿತರುರೌಡಿಗಳಸಂಪರ್ಕದಲ್ಲಿ ಇರುವುದು ತನಿಖೆಯಿಂದ ಬಯಲಾಗುತ್ತಿದೆ. ಆರೋಪಿಗಳು ಯಾವ ಉದ್ದೇಶದಿಂದ ರೌಡಿಗಳೊಂದಿಗೆ ಸಂಪರ್ಕ ಹೊಂದಿದ್ದರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ದರ್ಶನ್ ಮ್ಯಾನೇಜರ್ ನಾಗರಾಜ್ ಅಲಿಯಾಸ್ ನಾಗ, ಕಾರು ಚಾಲಕ ಲಕ್ಷ್ಮಣ್ ಅವರ ಮೊಬೈಲ್ ಪರಿಶೀಲಿಸಲಾಗಿದೆ. ಈ ಇಬ್ಬರು ರೌಡಿಗಳೊಂದಿಗೆ ಚರ್ಚಿಸಿರುವ ಮಾಹಿತಿ ಲಭಿಸಿದೆ. ನಟ ಬೇರೆ ಬೇರೆ ಜಿಲ್ಲೆಗಳಿಗೆ ಸಿನಿಮಾ ಪ್ರಚಾರಕ್ಕೆ ತೆರಳಿದ್ದಾಗ ಆಯಾ ಭಾಗದಲ್ಲಿ ಅಭಿಮಾನಿಗಳನ್ನು ಸೇರಿಸಲು ರೌಡಿ ಚಟುವಟಿಕೆಗಳಲ್ಲಿ ಭಾಗಿ ಆದವರ ಜತೆಗೆ ಮಾತುಕತೆ ನಡೆಸಿರುವ ಸಾಧ್ಯತೆಯೂ ಇದೆ' ಎಂದು ಮೂಲಗಳು ತಿಳಿಸಿವೆ.



ಪವಿತ್ರಾಗೌಡ



ದರ್ಶನ್

### ಪವಿತ್ರಾಗೌಡಗೆ ತಲೆ ಸುತ್ತು– ಚಿಕಿತ್ಸೆ

ತಲೆ ಸುತ್ತಿನಿಂದ ಬಳಲುತ್ತಿದ್ದ ಪವಿತ್ರಾಗೌಡ ಅವರಿಗೆ ಮಲ್ಲತ್ತಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ವಿಚಾರಣೆಗಾಗಿ ಇವರನ್ನು ಪೊಲೀಸರು ಕಸ್ಟಡಿಗೆ ಪಡೆದುಕೊಂಡಿದ್ದರು. ಠಾಣೆಯ ಸೆಲ್‌ನಲ್ಲಿ ಮಂಗಳವಾರ ಸಂಜೆ ಅವರು ಅಸ್ವಸ್ಥರಾಗಿದ್ದರು. 'ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಮತ್ತೆ ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಕರೆ ತರಲಾಯಿತು' ಎಂದು ಪೊಲೀಸರು ಹೇಳಿದರು.

**ದಾಖಲೆ ಪತ್ರ ಜಪ್ತಿ:** 'ಆರೋಪಿ ಪವಿತ್ರಾಗೌಡ ಅವರ ಮನೆಯಲ್ಲಿ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಮಹಜರು ನಡೆಸಿದ್ದಾಗ, ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದ ಕೆಲವು ದಾಖಲೆ ಪತ್ರಗಳು ಪತ್ತೆಯಾಗಿದ್ದವು. ಅವುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. 10 ವರ್ಷದಿಂದ ಆರ್‌ಆರ್ ನಗರದ ಕೆಂಚೇನಹಳ್ಳಿ ರಸ್ತೆ 24ನೇ ಕ್ರಾಸ್‌ನ ಮನೆಯಲ್ಲಿ ಪವಿತ್ರಾ ನೆಲಸಿದ್ದರು' ಎಂದು ಪೊಲೀಸರು ಹೇಳಿದರು.

'ಇನ್‌ಸ್ಟಾಗ್ರಾಮ್ ಸೇರಿ ಇತರೆ ಸಾಮಾಜಿಕ ಮಾಧ್ಯಮಗಳಲ್ಲಿ ಪವಿತ್ರಾಗೌಡಗೆ ಅಶ್ಲೀಲ ಸಂದೇಶ ಹಾಗೂ ಚಿತ್ರ ಕಳುಹಿಸುತ್ತಿದ್ದಾರೆ ಎಂಬ ಕಾರಣಕ್ಕೆ ರೇಣುಕಸ್ವಾಮಿ ಅಪಹರಿಸಿ ಕೊಲೆ ಮಾಡಲಾಗಿದ್ದು, ಅವರು ಸಂದೇಶ ಕಳುಹಿಸುತ್ತಿದ್ದ ಖಾತೆಗಳನ್ನು ತಾಂತ್ರಿಕ ತಜ್ಞರು ಪರಿಶೀಲನೆ ನಡೆಸುತ್ತಿದ್ದಾರೆ. ಆರಂಭದಲ್ಲಿ ಸ್ವಂತ ಖಾತೆ ತೆರೆದಿದ್ದ ರೇಣುಕಸ್ವಾಮಿ, ಬಳಿಕ 'ರೆಡ್ಡಿ' ಹೆಸರಿನಲ್ಲಿ ನಕಲಿ ಖಾತೆ ತೆರೆದು ಪವಿತ್ರಾಗೌಡ ಅವರಿಗೆ ಸಂದೇಶ ಕಳುಹಿಸುತ್ತಿದ್ದರು. ಆರೋಪಿಗಳು ಸಹ ಬೇರೆ ಬೇರೆ ಸಿಮ್ ಬಳಸಿ ಅವರೊಂದಿಗೆ ಚಾಟಿಂಗ್ ನಡೆಸಿರುವುದು ಪತ್ತೆಯಾಗಿದೆ. ಅವರ ಇನ್‌ಸ್ಟಾಗ್ರಾಮ್ ನಕಲಿ ಖಾತೆಯ ಮಾಹಿತಿಗಾಗಿ ಕಂಪನಿಗೆ ಪತ್ರ ಬರೆದು ಮಾಹಿತಿ ಕೇಳಲಾಗುವುದು' ಎಂದು ಪೊಲೀಸರು ಹೇಳಿದರು.

ಕೊಲೆ ಮಾಡಿರುವ ಆರೋಪಿಗಳು ಡ್ರಗ್ಸ್ ಸೇವಿಸಿರುವ ಶಂಕೆ ವ್ಯಕ್ತವಾಗಿದೆ. 'ರಾಡ್, ಬೆಲ್ಟ್‌ಗಳಿಂದ ಹಲ್ಲೆ ನಡೆಸಿ, ವಿದ್ಯುತ್ ಶಾಕ್ ನೀಡಿ ಕೊಲೆ ಮಾಡಿದ್ದರು. ಆರೋಪಿಗಳು ಡ್ರಗ್ಸ್ ತೆಗೆದುಕೊಂಡಿದ್ದರೇ ಇಲ್ಲವೇ ಎಂಬುದರ ಪತ್ತೆಗೆ ರಕ್ತದ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

### ರಾಜಕಾಲುವೆಗೆ ಕಾರ್ಮಿಕರನ್ನು ಇಳಿಸಿದ್ದಕ್ಕೆ ಆಕ್ಷೇಪ

ಸಾಕ್ಷ್ಯನಾಶ ಪಡಿಸಲು ಆರೋಪಿಗಳು ರಾಜಕಾಲುವೆಗೆ ಕೊಲೆಯಾದ ವ್ಯಕ್ತಿಯ ಮೊಬೈಲ್ ಎಸೆದಿದ್ದರು. ಮೊಬೈಲ್ ಹುಡುಕಲು ಹತ್ತಕ್ಕೂ ಹೆಚ್ಚು ಪೌರ ಕಾರ್ಮಿಕರನ್ನು ಬಳಸಿಕೊಳ್ಳಲಾಗಿತ್ತು. ಕಲುಷಿತ ನೀರಿನಲ್ಲಿ ಕಾರ್ಮಿಕರು ಮೂಗು ಮುಚ್ಚಿಕೊಂಡು ಹುಡುಕಾಟ ನಡೆಸಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

'ಪೌರ ಕಾರ್ಮಿಕರ ಬದಲಿಗೆ ಕೊಲೆ ಮಾಡಿದ್ದ ಆರೋಪಿಗಳನ್ನೇ ರಾಜಕಾಲುವೆಯಲ್ಲಿ ಹರಿಯುತ್ತಿರುವ ಕಲುಷಿತ ನೀರಿಗೆ ಇಳಿಸಿ ಮೊಬೈಲ್ ಹುಡುಕಿಸಬೇಕಿತ್ತು' ಎಂದು ಹಲವರು ಹೇಳಿದ್ದಾರೆ.

## ಭವಾನಿಗೆ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಕ್ಕೆ ಗುರಿಯಾಗಿರುವ ಭವಾನಿ ರೇವಣ್ಣ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಮಂಗಳವಾರ, 'ಭವಾನಿ ರೇವಣ್ಣ ಬಲಾಢ್ಯ ರಾಜಕೀಯ ಹಿನ್ನೆಲೆಯುಳ್ಳ ಕುಟುಂಬ ಎಂಬ ಪ್ರಾಸಿಕ್ಯೂಷನ್ ವಾದವನ್ನು ಈ ಪ್ರಕರಣಕ್ಕೆ ತಾಳೆ ಮಾಡುವುದು ಇಲ್ಲಿ ಅನಪೇಕ್ಷಿತ. ಯಾಕೆಂದರೆ, ಈ ಪ್ರಕರಣ ದಾಖಲಾಗಿರುವುದೇ ಸತೀಶ್ ಬಾಬಣ್ಣ ಮತ್ತು ಎಚ್.ಡಿ.ರೇವಣ್ಣ ವಿರುದ್ಧ. ಆದರೆ, ಪ್ರಾಸಿಕ್ಯೂಷನ್ ಭವಾನಿ ಅವರೇ ಕಿಂಗ್‌ಪಿನ್ ಎಂದು ಹೇಳುತ್ತಿರುವುದಕ್ಕೆ ಮೇಲ್ನೋಟಕ್ಕೆ ಯಾವುದೇ ಆಧಾರವಿಲ್ಲ' ಎಂದು ಸ್ಪಷ್ಟಪಡಿಸಿದೆ.



ಭವಾನಿ ರೇವಣ್ಣ

'ಪ್ರಜ್ವಲ್ ರೇವಣ್ಣ ವಿರುದ್ಧ ಯಾವೊಬ್ಬ ಸಂತ್ರಸ್ತ ಮಹಿಳೆಯೂ ದೂರು ದಾಖಲು ಮಾಡಿಲ್ಲ ಎಂಬುದು ಗಮನಾರ್ಹ. ಭವಾನಿ ಅವರು ವಿವಾಹಿತ ಮಹಿಳೆ. ಇವರ ಕುಟುಂಬ ಸಮಾಜದಲ್ಲಿ ಆಳವಾದ ಬೇರುಗಳನ್ನು ಒಳಗೊಂಡಿದೆ. ಪ್ರಜ್ವಲ್‌ನ ಕಾಮಕೇಳಿಯನ್ನು ತಡೆಯುವಲ್ಲಿ ಅವರು ವಿಫಲವಾಗಿದ್ದಾರೆ. ಆತ ವಿದೇಶಕ್ಕೆ ಹಾರಿಹೋಗಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂಬುದು ಅಸಂಬದ್ಧ ಎಂದು ನ್ಯಾಯಪೀಠ ಹೇಳಿದೆ.

ಭವಾನಿ ರೇವಣ್ಣ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದರು.

### 'ಮಾಧ್ಯಮ ವಿಚಾರಣೆ ಸಲ್ಲ'

'ಸಮಾಜದಲ್ಲಿ ಸಂಚಲನ ಉಂಟು ಮಾಡುವ ಪ್ರಕರಣಗಳಲ್ಲಿ ಮಾಧ್ಯಮಗಳಿಂದ ನಡೆಯುವ ವಿಚಾರಣೆ ಸಲ್ಲದು' ಎಂಬ ಸುಪ್ರೀಂ ಕೋರ್ಟ್ ತೀರ್ಪು ಮತ್ತು 'ಅಮೆರಿಕದ ಸಂವಿಧಾನಕ್ಕೆ ತಿದ್ದುಪಡಿ ತಂದು ಮಾಧ್ಯಮಗಳ ವಿಚಾರಣೆಗೆ ನಿರ್ಬಂಧ ವಿಧಿಸಲಾಗಿದೆ' ಎಂಬ ಎರಡು ಅಂಶಗಳನ್ನು ತೀರ್ಪು ಪ್ರಕಟಿಸುವ ವೇಳೆ ವಿವರಿಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು, 'ಸಾಮಾನ್ಯ ಜನರು ಪತ್ರಿಕೆಗಳನ್ನು ಓದಿ ಅದರಲ್ಲಿ ಬಂದದ್ದನ್ನೇ ನಂಬುತ್ತಾರೆ. ಮನೆಗಳಲ್ಲಿದ್ದಾಗ, ವಾಕಿಂಗ್ ಮಾಡುವಾಗ ಆ್ಯಂಕರ್‌ಗಳ ಮಾತುಗಳನ್ನೇ ಮುಂದು ಮಾಡಿಕೊಂಡು ಮಾತನಾಡುತ್ತಾರೆ. ಇವರಾರೂ ಪ್ರಕರಣದ ದಾಖಲೆಗಳನ್ನು ಓದಿರುವುದಿಲ್ಲ. ಆದ್ದರಿಂದ, ಪತ್ರಿಕೆಗಳ ವರದಿ ಆಧರಿಸಿ ನಾವು ಪ್ರಕರಣವನ್ನು ನಿರ್ಧರಿಸಲಾಗದು' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದರು.

## ಜೈಲು ಸೇರಿದ ಪ್ರಜ್ವಲ್ ರೇವಣ್ಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಜನಪ್ರತಿನಿಧಿಗಳ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಅವರು ಮತ್ತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದರು.

ಎರಡನೇ ಅತ್ಯಾಚಾರ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಜನಪ್ರತಿನಿಧಿಗಳ ವಿಶೇಷ ಮ್ಯಾಜಿಸ್ಟ್ರೇಟ್ ಕೆ.ಎನ್. ಶಿವಕುಮಾರ್ ಅವರು ಜೂನ್ 13ರಿಂದ 18ರ ವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿದ್ದರು. ಎಸ್‌ಐಟಿ ಕಸ್ಟಡಿ ಅವಧಿ ಅಂತ್ಯವಾಗಿದ್ದರಿಂದ ಪ್ರಜ್ವಲ್ ಅವರನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.



# ಮೈಸೂರು ಹೋಟೆಲ್‌ನಲ್ಲಿ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

**ಮೈಸೂರು:** ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ 11ನೇ ಆರೋಪಿ ನಾಗರಾಜ್ ಮತ್ತು 12ನೇ ಆರೋಪಿ ಲಕ್ಷ್ಮಣ್‌ನನ್ನು ನಗರದ ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ಗೆ ಮಂಗಳವಾರ ಕರೆತಂದ ಬೆಂಗಳೂರು ಪೊಲೀಸರು, ಸ್ಥಳ ಮಹಜರು ನಡೆಸಿ, ಹೋಟೆಲ್‌ನ ಮೂರು ದಿನದ ಸಿಸಿಟಿವಿ ಕ್ಯಾಮೆರಾದ ದಾಖಲೆಗಳನ್ನು ವಶಪಡಿಸಿಕೊಂಡರು.

ಇನ್‌ಸ್ಪೆಕ್ಟರ್ ಗಿರೀಶ್ ನೇತೃತ್ವದ ಒಂಬತ್ತು ಅಧಿಕಾರಿ ಹಾಗೂ ಸಿಬ್ಬಂದಿ ತಂಡ ಮಧ್ಯಾಹ್ನ 12ಕ್ಕೆ ಹೋಟೆಲ್‌ಗೆ ಬಂದು, ಸುಮಾರು 2 ಗಂಟೆಗಳ ಕಾಲ ಮಹಜರು ನಡೆಸಿತು. 'ದರ್ಶನ್ ಅವರನ್ನು ಭೇಟಿ ಮಾಡಲು ಯಾರೆಲ್ಲಾ ಬರುತ್ತಿದ್ದರು? ಇಲ್ಲಿಂದ ಎಲ್ಲಿಗೆ ತೆರಳಿದ್ದೀರಿ ಇತ್ಯಾದಿ ಪ್ರಶ್ನೆಗಳನ್ನು ಆರೋಪಿಗಳಿಗೆ ಕೇಳಿದ್ದಾರೆ' ಎನ್ನಲಾಗಿದೆ.

'ಕೊಲೆ ನಡೆದ ಬಳಿಕ ತಪ್ಪನ್ನು ಒಪ್ಪಿಕೊಳ್ಳುವಂತೆ ಐವರಿಗೆ ದರ್ಶನ್ ₹30 ಲಕ್ಷ ನೀಡಿದ್ದಾರೆಂದು ವಿಚಾರಣೆಯಲ್ಲಿ ತಿಳಿದು ಬಂದಿದ್ದು, ಆ ವ್ಯವಹಾರ ಹೋಟೆಲ್‌ನಲ್ಲೇ ನಡೆಯಿತೇ ಎಂಬ ಬಗ್ಗೆಯೂ ವಿಚಾರಿಸಿದ್ದಾರೆ' ಎನ್ನಲಾಗಿದೆ.

ದರ್ಶನ್ ಹೋಟೆಲ್‌ನಲ್ಲಿದ್ದಷ್ಟು ದಿನ ಅವರು ವಾಸವಿದ್ದ ಮೂರನೇ ಮಹಡಿಯ ಕೊಠಡಿಗೆ ಯಾರೆಲ್ಲಾ ಭೇಟಿ ನೀಡಿದ್ದಾರೆ ಎಂದು ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ, ಅದರ ದಾಖಲೆಗಳನ್ನು ಪೊಲೀಸರು ವಶಕ್ಕೆ ಪಡೆದರು.

'ಮೈಸೂರು ದರ್ಶನ್ ತವರೂರು ಆಗಿರುವುದರಿಂದ, ಹೆಚ್ಚು ಅಭಿಮಾನಿಗಳು ಸೇರುವ ಸಾಧ್ಯತೆಯ ಕಾರಣಕ್ಕೆ, ಅವರ ಮ್ಯಾನೇಜರ್ ನಾಗರಾಜ್ ಹಾಗೂ ಚಾಲಕ ಲಕ್ಷ್ಮಣ್ ಅವರನ್ನಷ್ಟೇ ಮಹಜರು ಮಾಡಲು ಕರೆತರಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆದರೂ ಹೋಟೆಲ್ ಮುಂಭಾಗ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಆರೋಪಿಗಳಿದ್ದ ಪೊಲೀಸ್ ಬಸ್ ಬರುತ್ತಿದ್ದಂತೆ, 'ಬಾಸ್, ಬಾಸ್ ಡಿಬಾಸ್' ಘೋಷಣೆ ಕೂಗಿದರು. ಪೊಲೀಸರು ಗುಂಪು ಚದುರಿಸಿದರು.

ಕೊಲೆ ಘಟನೆಯ ನಂತರ ಜೂ.9ರಂದು ದರ್ಶನ್ ಮೈಸೂರಿಗೆ ಬಂದಿದ್ದರು. 'ಡೆವಿಲ್' ಚಿತ್ರದ ಶೂಟಿಂಗ್ 'ಲಲಿತಮಹಲ್'ನಲ್ಲಿ ನಡೆಯುತ್ತಿದ್ದುದರಿಂದ ಹೋಟೆಲ್‌ನಲ್ಲಿ ಸ್ನೇಹಿತರೊಂದಿಗೆ ವಾಸ್ತವ್ಯ ಹೂಡಿದ್ದರು. ನಿತ್ಯ ಮುಂಜಾನೆ ಕುವೆಂಪುನಗರದ ಜಿಮ್‌ವೊಂದರಲ್ಲಿ ಕಸರತ್ತು ಮಾಡುತ್ತಿದ್ದರು.

ಜೂನ್ 11ರಂದು ಬೆಳಿಗ್ಗೆ 6 ಗಂಟೆಗೆ ಜಿಮ್‌ಗೆ ಭೇಟಿ ನೀಡಿ ಒಂದು ಗಂಟೆ ಕಸರತ್ತಿನ ನಂತರ ಹೋಟೆಲ್‌ಗೆ ಮರಳಿದ್ದರು. ಅವರು ಬರುವುದನ್ನೇ ಕಾಯುತ್ತಿದ್ದ ಪೊಲೀಸರು 8 ಗಂಟೆ ಸುಮಾರಿಗೆ ಅವರನ್ನು ವಶಕ್ಕೆ ಪಡೆದು ಬೆಂಗಳೂರಿಗೆ ಕರೆದೊಯ್ದಿದ್ದರು.



ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಾಗರಾಜ್ ಪೊಲೀಸ್ ವಾಹನದಲ್ಲಿ ತಲೆ ತಗ್ಗಿಸಿ ಕುಳಿತಿದ್ದ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

### ಮೈಸೂರಿಗೆ ಕರೆದೊಯ್ಯದೇ ಮಹಜರು

**ಬೆಂಗಳೂರು:** ಕೃತ್ಯ ನಡೆದ ಬಳಿಕ ದರ್ಶನ್ ಮೈಸೂರಿಗೆ ತೆರಳಿದ್ದರು. ಅಲ್ಲಿನ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದರು. ಮಂಗಳವಾರ ಬೆಳಿಗ್ಗೆ ದರ್ಶನ್ ಅವರನ್ನು ಮೈಸೂರಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಲು ಪೊಲೀಸರು ನಿರ್ಧರಿಸಿದ್ದರು. ಆದರೆ, ಅವರನ್ನು ಕರೆದೊಯ್ಯಲಿಲ್ಲ.

'ಕಾರು ಚಾಲಕ ಲಕ್ಷ್ಮಣ್ ಹಾಗೂ ಮ್ಯಾನೇಜರ್ ನಾಗರಾಜ್ ಎಂಬುವರನ್ನು ಕರೆದೊಯ್ದು ಮಹಜರು ನಡೆಸಲಾಗಿದೆ. ದರ್ಶನ್ ಅವರನ್ನು ಠಾಣೆಯಲ್ಲೇ ವಿಚಾರಣೆ ನಡೆಸಲಾಯಿತು. ಭದ್ರತೆ ಕಾರಣದಿಂದ ಅವರನ್ನು ಮೈಸೂರಿಗೆ ಕರೆದೊಯ್ಯಲಿಲ್ಲ' ಎಂದು ಮೂಲಗಳು ಹೇಳಿವೆ.

ಎಲೆಕ್ಟ್ರಿಕ್ ಶಾಕ್ ನೀಡಿದ್ದ ಆರೋಪಿ ಧನರಾಜ್ ಅವರನ್ನು ಪಟ್ಟಣಗೆರೆಯ ಶೆಡ್‌ಗೆ ಕರೆದೊಯ್ದು ಮಹಜರು ನಡೆಸಲಾಯಿತು. ಶೆಡ್ ಮಾಲೀಕ ಜಯಣ್ಣ ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಸೋಮವಾರ ರಾತ್ರಿ ಕರೆತಂದು ವಿಚಾರಣೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

## 'ಪೊಲೀಸರು ಎಚ್ಚರ ತಪ್ಪಿದ್ದರೆ ಹಾದಿ ತಪ್ಪುತ್ತಿದ್ದ ಪ್ರಕರಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರತ್ಯೇಕ ತಂಡಗಳು ಎಲ್ಲ ಆಯಾಮದಲ್ಲೂ ತನಿಖೆ ನಡೆಸುತ್ತಿವೆ. ಮೃತ ವ್ಯಕ್ತಿಯ ಕುಟುಂಬಕ್ಕೆ ನ್ಯಾಯ ದೊರೆಯಬೇಕು ಎಂಬ ನಿಟ್ಟಿನಲ್ಲಿ ಪೊಲೀಸ್ ತನಿಖೆ ಸಾಗುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.



ಬಿ.ದಯಾನಂದ

'ಪ್ರಕರಣ ಗಂಭೀರತೆಯಿಂದ ಕೂಡಿದ್ದು, ಸೆಲೆಬ್ರಿಟಿಯೊಬ್ಬರು ಆರೋಪಿ ಆಗಿದ್ದಾರೆ. ವಿಜಯನಗರದ ಎಸಿಪಿಗೆ ತನಿಖಾ ಹೊಣೆ ವಹಿಸಲಾಗಿದೆ. ಅವರಿಗೆ ಅಗತ್ಯ ಸಿಬ್ಬಂದಿ ಒದಗಿಸಲಾಗಿದೆ. ಬೆಂಗಳೂರು, ಚಿತ್ರದುರ್ಗ, ಮೈಸೂರಿನಲ್ಲಿ ಪ್ರತ್ಯೇಕ ತಂಡಗಳು ತನಿಖೆ ನಡೆಸುತ್ತಿವೆ. ವಿಧಿವಿಜ್ಞಾನ ತಜ್ಞರು, ತಾಂತ್ರಿಕ ಹಾಗೂ ಕಾನೂನು ತಜ್ಞರ ಸಲಹೆ ಪಡೆದು ತನಿಖೆ ನಡೆಸಲಾಗುತ್ತಿದೆ. ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ಅವರು ತನಿಖೆ ಉಸ್ತುವಾರಿ ವಹಿಸಿದ್ದಾರೆ' ಎಂದು ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

'ಇದುವರೆಗೂ 17 ಮಂದಿಯನ್ನು ಬಂಧಿಸಲಾಗಿದೆ. ಸ್ವಲ್ಪ ನಿರ್ಲಕ್ಷ್ಯ ವಹಿಸಿದ್ದರೂ ಪ್ರಕರಣ ಬೇರೆ ದಾರಿ ಹಿಡಿಯುತ್ತಿತ್ತು. ಸಿಬ್ಬಂದಿ ಕಾರ್ಯ ಶ್ಲಾಘನೀಯ. ತನಿಖೆ ವಿವರವನ್ನು ಈಗಲೇ ಹೇಳಲು ಆಗುವುದಿಲ್ಲ. ತನಿಖೆಯ ಭಾಗವಾದ ಹಾಗೂ ಸಂಬಂಧವಲ್ಲದ ಕೆಲವು ಅಂಶಗಳು ಮಾಧ್ಯಮಗಳಲ್ಲಿ ವರದಿ ಆಗುತ್ತಿವೆ. ಎಲ್ಲರೂ ತಾಳ್ಮೆಯಿಂದ ಸಹಕರಿಸಿದರೆ ಪ್ರಕರಣವನ್ನು ಸೂಕ್ತ ರೀತಿಯಲ್ಲಿ ತನಿಖೆ ಮಾಡಲು ಸಾಧ್ಯವಾಗಲಿದೆ' ಎಂದು ಹೇಳಿದರು.

ಕೊಲೆ ಪ್ರಕರಣ ಸಂಬಂಧ ಯಾರದ್ದಾದರೂ ಒತ್ತಡವಿತ್ತೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನನಗೆ ಇರೋದು 140/90 ಒತ್ತಡ ಮಾತ್ರ (ಬಿ.ಪಿ). ಅದು ನಾರ್ಮಲ್' ಎಂದು ಹೇಳಿದರು.

'ನನ್ನ ಮೇಲೆ ಯಾರೂ ಒತ್ತಡ ಹಾಕಿಲ್ಲ. ಸೂಕ್ಷ್ಮ ಪ್ರಕರಣವಾಗಿದ್ದರಿಂದ ಜಾಗೃತೆಯಿಂದ ತನಿಖೆ ನಡೆಸಲಾಗುತ್ತಿದೆ' ಎಂದು ಉತ್ತರಿಸಿದರು.

## 'ಅಭಿಮಾನ, ಹಣಕ್ಕಾಗಿ ಶರಣು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸರಿಗೆ ಶರಣಾಗಿದ್ದ ನಾಲ್ವರ ಪೈಕಿ ಮೂವರು ಆರೋಪಿಗಳು ಹಲ್ಲೆ ಹಾಗೂ ಅಪಹರಣ ಕೃತ್ಯದಲ್ಲೂ ಭಾಗಿ ಆಗಿಲ್ಲ. ಆದರೆ, ದರ್ಶನ್ ಮೇಲಿನ ಅಭಿಮಾನ ಹಾಗೂ ಹಣದ ಆಸೆಯಿಂದ ಠಾಣೆಗೆ ಬಂದು ಕೊಲೆ ಆರೋಪ ಹೊತ್ತು ಶರಣಾಗಿದ್ದರು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ನಿಖಿಲ್, ಕೇಶವಮೂರ್ತಿ ಹಾಗೂ ಕಾರ್ತಿಕ್ ಅವರು ಕೊಲೆ ಮಾಡಿದ್ದ ಆರೋಪ ಹೊತ್ತು ಶರಣಾಗಿದ್ದವರು ಎಂದು ಮೂಲಗಳು ತಿಳಿಸಿವೆ.

ಚಿತ್ರದುರ್ಗದ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಘವೇಂದ್ರ ಹಾಗೂ ಸಹಚರರು ಜೂನ್ 8ರಂದು ಪಟ್ಟಣಗೆರೆ ಶೆಡ್‌ಗೆ ರೇಣುಕ ಅವರನ್ನು ಅಪಹರಿಸಿ ಕರೆ ತಂದಿದ್ದರು. ಪಾರ್ಟಿ ಮಾಡುತ್ತಿದ್ದ ಸ್ಥಳದಿಂದ ದರ್ಶನ್ ಹಾಗೂ ಪವಿತ್ರಾ ಬಂದಿದ್ದರು. ಪೊಲೀಸರಿಗೆ ಶರಣಾಗಿದ್ದ ಮೂವರು, ಹಲ್ಲೆ ಮಾಡುವಾಗ ಅಥವಾ ಅಪಹರಣ ಮಾಡುವಾಗ ಇರಲಿಲ್ಲ. ಅಲ್ಲದೇ ಶೆಡ್ ಒಳಗೆ ಹಾಗೂ ಹೊರಗೂ ಇರಲಿಲ್ಲ. ಕೊಲೆಯಾದ ಆತಂಕದಲ್ಲಿದ್ದ ದರ್ಶನ್ ಮತ್ತು ತಂಡವು ಚಿತ್ರದುರ್ಗದ ಜಗದೀಶ್, ರವಿ, ಅನುಕುಮಾರ್‌ಗೆ ಕೊಲೆ ಕೃತ್ಯ ಒಪ್ಪಿಕೊಳ್ಳುವಂತೆ ಸೂಚಿಸಿತ್ತು. ಆದರೆ, ಅವರು ಒಪ್ಪಿಕೊಳ್ಳಲಿಲ್ಲ. ಮತ್ತೊಬ್ಬ ಆರೋಪಿ, ವಿನಯ್ ಅವರು ಕಾರ್ತಿಕ್, ರಾಘವೇಂದ್ರ, ನಿಖಿಲ್, ಕೇಶವಮೂರ್ತಿ ಅವರಿಗೆ ಕರೆ ಮಾಡಿ 'ತಲಾ ₹5 ಲಕ್ಷ ನೀಡುತ್ತೇನೆ. ಕೂಡಲೇ ಠಾಣೆಗೆ ಹೋಗಿ ಶರಣಾಗಿ' ಎಂದು ಸೂಚಿಸಿದ್ದರು. ಅದರಂತೆ ಬಂದು ನಾಲ್ವರು ಶರಣಾಗಿದ್ದರು' ಎಂದು ಗೊತ್ತಾಗಿದೆ.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

# 'ಪರಿಶಿಷ್ಟ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಏಕೆ ಏರುತ್ತಿಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟಜಾತಿ–ಪಂಗಡಗಳ ಸಮುದಾಯದ ಮಕ್ಕಳ ಶಿಕ್ಷಣ ಮತ್ತು ಹಾಸ್ಟೆಲ್‌ಗಳಿಗೆ ಸಾಕಷ್ಟು ಹಣ ಹಾಗೂ ಸವಲತ್ತುಗಳನ್ನು ನೀಡುತ್ತಿದ್ದರೂ ಶಿಕ್ಷಣದ ಗುಣಮಟ್ಟ ಹಾಗೂ ಫಲಿತಾಂಶ ಏಕೆ ಏರುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಮಂಗಳವಾರ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

'ದಲಿತ, ಬುಡಕಟ್ಟು ವರ್ಗದ ಮಕ್ಕಳ ಶಿಕ್ಷಣದ ಗುಣಮಟ್ಟದ ಬಗ್ಗೆ ಅಧಿಕಾರಿಗಳು ಏಕೆ ನಿಗಾ ವಹಿಸುತ್ತಿಲ್ಲ' ಎಂದು ಪ್ರಶ್ನಿಸಿದ ಅವರು, 'ಈ ವರ್ಗದ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲು ಆಗದಿದ್ದರೆ ಸೇವೆಯಲ್ಲಿ ಇರಲು ನೀವು ಅನರ್ಹರು' ಎಂದು ಅವರು ತರಾಟೆಗೆ ತೆಗೆದುಕೊಂಡರು.

ಹಾಸ್ಟೆಲ್‌ಗಳು ಮತ್ತು ಆಶ್ರಮ ಶಾಲೆಗಳಿಗೆ ನಿಯಮಿತವಾಗಿ ಭೇಟಿ ನೀಡಬೇಕು. ನಿರಂತರವಾಗಿ ಗುಣಮಟ್ಟ ಹೆಚ್ಚಿಸಲು ಶ್ರಮಿಸಬೇಕು ಎಂದು ಸೂಚನೆ ನೀಡಿದರು.

'ಕೆಲವು ಆಶ್ರಮ ಶಾಲೆಗಳಲ್ಲಿ ರಾತ್ರಿ ವೇಳೆ ಮಕ್ಕಳು ಇರುವುದಿಲ್ಲ. ಮಕ್ಕಳು ರಾತ್ರಿ ಊಟವಾದ ನಂತರ ಮನೆಗೆ ಕರೆದುಕೊಂಡು ಹೋಗುತ್ತಾರೆ. ಎಲ್ಲ ಸೌಲಭ್ಯಗಳಿದ್ದೂ, ಯಾವ ಕಾರಣಕ್ಕೆ ಮನೆಗೆ ಕರೆದುಕೊಂಡು ಹೋಗುತ್ತಾರೆ. ಈ ಕುರಿತು ಪರಾಮರ್ಶೆ ನಡೆಸಿ ಪೋಷಕರಿಗೆ ಮನವರಿಕೆ ಮಾಡಬೇಕು' ಎಂದು ಅವರು ನಿರ್ದೇಶನ ನೀಡಿದರು.

'ಅನುದಾನ ಲಭ್ಯವಿದೆ ಎಂಬ ಕಾರಣಕ್ಕೆ ಬೇಡಿಕೆ ಇಲ್ಲದೆ ಇದ್ದರೂ, ಹಾಸಿಗೆ, ಬೆಡ್‌ಶೀಟ್ ಮತ್ತಿತರ ವಸ್ತುಗಳನ್ನು ಅನಗತ್ಯ ಖರೀದಿಸಿ ಗುಡ್ಡೆ ಹಾಕಿಕೊಳ್ಳುವುದನ್ನು ಸಹಿಸಲಾಗದು' ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು.

ಇಲಾಖೆಯ ಒಟ್ಟಾರೆ ಆಯವ್ಯಯದಲ್ಲಿ ಬಿಡುಗಡೆಯಾದ ₹1,884.01 ಕೋಟಿಯಲ್ಲಿ ₹1,879.35 ಕೋಟಿ ವೆಚ್ಚವಾಗಿದ್ದು, ಶೇ 99.75 ಸಾಧನೆಯಾಗಿದೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ 389 ವಿದ್ಯಾರ್ಥಿನಿಲಯಗಳು, ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿಶಾಲೆಗಳು 39,541 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಿದ್ದು, ₹194.71 ಕೋಟಿ ಒದಗಿಸಲಾಗಿದೆ ಎಂದು ಅವರು ಹೇಳಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ 77ರಷ್ಟು ಫಲಿತಾಂಶ ಬಂದಿದ್ದು, ಫಲಿತಾಂಶ ಉತ್ತಮಪಡಿಸಲು ಸೂಚನೆ ನೀಡಿದರು.

### '₹263 ಕೋಟಿ ಬಳಕೆಗೆ ಫಲಾನುಭವಿಗಳೇ ಇಲ್ಲ'

ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣಕಾಸು ಇಲಾಖೆಯ ಸೂಚನೆಯಂತೆ 2023–24ರಲ್ಲಿ ಲಭ್ಯವಿದ್ದ ₹263 ಕೋಟಿಯನ್ನು ಖಜಾನೆಗೆ ಜಮೆ ಮಾಡಲಾಗಿದೆ. ಆದರೆ, ಯಾವುದೇ ಯೋಜನೆ ಅಡಿ ಫಲಾನುಭವಿಗಳನ್ನು ಏಕೆ ಆಯ್ಕೆ ಮಾಡಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, ಶಾಸಕರು ಫಲಾನುಭವಿಗಳ ಪಟ್ಟಿ ನೀಡಿಲ್ಲ. ಆಯ್ಕೆ ಮಾಡಬೇಕಾದ ಫಲಾನುಭವಿಗಳ ಸಂಖ್ಯೆ ಅತ್ಯಂತ ಕಡಿಮೆ ಇರುವುದರಿಂದ ಸಂದಿಗ್ಧ ಪರಿಸ್ಥಿತಿ ಎದುರಾಗುವ ಹಿನ್ನೆಲೆಯಲ್ಲಿ ಶಾಸಕರು ಆಯ್ಕೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ ಎಂದು ವಿವರಿಸಿದರು.

ಫಲಾನುಭವಿಗಳ ಸಂಖ್ಯೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. 22 ಪ್ರಕರಣಗಳಲ್ಲಿ ಸಿಂಧುತ್ವ ಪ್ರಮಾಣ ಪತ್ರ ಹಲವು ವರ್ಷಗಳಿಂದ ಇತ್ಯರ್ಥಕ್ಕೆ ಬಾಕಿ ಇದ್ದು, ಇವುಗಳಲ್ಲಿ ಎಲ್ಲ ಪ್ರಕರಣಗಳನ್ನು ಸಿಆರ್‌ಇ ಸೆಲ್‌ಗೆ ಕಳುಹಿಸಬಾರದು. ಗೊಂದಲವಿದ್ದಲ್ಲಿ ಮಾತ್ರ ಕಳುಹಿಸುವಂತೆ ಸುತ್ತೋಲೆ ಹೊರಡಿಸುವಂತೆ ಸಿದ್ದರಾಮಯ್ಯ ಸೂಚಿಸಿದರು.

ಬುಧವಾರ, ಜೂನ್ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 170 | ಪುಟ 16
• www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**
ವಾಟ್ಸ್‌ಆ್ಯಪ್‌ಗಳಲ್ಲಿ ಹರಿದುಬರುವ ಆ್ಯಪ್‌ಗಳನ್ನು ಕ್ಲಿಕ್ ಮಾಡುವ ಮೊದಲು ಯೋಚಿಸಿ





| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 77,301 | 23,557 | ₹74,000 (ಬೆಂಗಳೂರು) | ₹91,000 (ಬೆಂಗಳೂರು) | 83.43 |

ನೀಟ್: ನ್ಯಾಯಯುತವಾಗಿ ನಡೆದುಕೊಳ್ಳಿ • ವಂಚಕ ವೈದ್ಯನಾದರೆ ಸಮಾಜಕ್ಕೆ ಹಾನಿ: ಕೋರ್ಟ್

# ಅಲ್ಪ ಲೋಪವನ್ನೂ ಸಹಿಸಲ್ಲ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ನೀಟ್–ಯುಜಿ’ ಪರೀಕ್ಷೆ ನಿರ್ವಹಣೆಯಲ್ಲಿ ಯಾವುದೇ ಲೋಪ ಆಗಿದ್ದರೆ ಅದನ್ನು ಒಪ್ಪಿಕೊಂಡು, ಅದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಿ. ಅದರಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡುತ್ತದೆ ಎಂದು ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಸುಪ್ರೀಂ ಕೋರ್ಟ್ ಸೂಚಿಸಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಇತರ ಅಕ್ರಮಗಳ ಕಾರಣ 2024ರ ನೀಟ್ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಎಸ್.ವಿ.ಎನ್.ಭಟ್ಟಿ ಅವರ ಪೀಠ ಮಂಗಳವಾರ ನಡೆಸಿತು.

‘ನೀಟ್–ಯುಜಿ’ ಪರೀಕ್ಷೆಯ ನಿರ್ವಹಣೆಯಲ್ಲಿ ಶೇ 0.001ರಷ್ಟು ಲೋಪ ಆಗಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸಿ, ಕೂಲಂಕಷವಾಗಿ ಪರಿಶೀಲಿಸಬೇಕು ಎಂದು ಪೀಠ ನಿರ್ದೇಶಿಸಿತು.

7ನೇ ಪುಟ ನೋಡಿ

| 24 ಲಕ್ಷ | 1,563 | 67 | ಜೂನ್ 23 | ಜೂನ್ 30 | ಜುಲೈ 6 |
|---|---|---|---|---|---|
| ನೀಟ್–ಯುಜಿ ಬರೆದಿದ್ದ ಅಭ್ಯರ್ಥಿಗಳು | ಪರೀಕ್ಷಾ ಸಮಯ ನಷ್ಟಕ್ಕೆ ಕೃಪಾಂಕ ಪಡೆದವರು (ಈಗ ಕೃಪಾಂಕ ಹಿಂಪಡೆಯಲಾಗಿದೆ) | ಅಗ್ರ ಶ್ರೇಯಾಂಕ ಪಡೆದ ಅಭ್ಯರ್ಥಿಗಳು | 1,563 ಅಭ್ಯರ್ಥಿಗಳಿಗೆ ಮರು ಪರೀಕ್ಷೆ | ಮರು ಪರೀಕ್ಷೆಯ ಫಲಿತಾಂಶ | ವೈದ್ಯಕೀಯ ಕೋರ್ಸ್‌ಗಳಿಗೆ ಕೌನ್ಸೆಲಿಂಗ್ ಆರಂಭ |

## ಮೋದಿ ‘ಮೌನ’ ರಾಹುಲ್ ಟೀಕೆ

**ನವದೆಹಲಿ (ಪಿಟಿಐ):** ನೀಟ್ ಪರೀಕ್ಷೆ ವಿಷಯದಲ್ಲಿ ‘ಮೌನ’ ಕಾಪಾಡಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಪ್ರಬಲ ಕಾನೂನು ರೂಪಿಸಲು ತಮ್ಮ ಪಕ್ಷ ಹೋರಾಟ ನಡೆಸಲಿದೆ. ಬೀದಿಗಳಿಂದ ಹಿಡಿದು ಸಂಸತ್ತಿನವರೆಗೂ ಯುವಜನರ ಧ್ವನಿಯಾಗಲು ಪಕ್ಷ ಬದ್ಧವಾಗಿದೆ ಎಂದು ಪ್ರತಿಪಾದಿಸಿದರು.

ಬಿಹಾರ, ಗುಜರಾತ್ ಮತ್ತು ಹರಿಯಾಣದಲ್ಲಿ ಕೆಲವರನ್ನು ಬಂಧಿಸಿರುವುದು, ನೀಟ್ ಪರೀಕ್ಷೆಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಅಕ್ರಮ ನಡೆದಿರುವುದನ್ನು ಸ್ಪಷ್ಟಪಡಿಸುತ್ತದೆ. ಬಿಜೆಪಿ ಆಡಳಿತವಿರುವ ಈ ರಾಜ್ಯಗಳು ಪ್ರಶ್ನೆ ಪತ್ರಿಕೆ ಸೋರಿಕೆಯ ‘ಕೇಂದ್ರ’ಗಳಾಗಿವೆ ಎಂದು ಆರೋಪಿಸಿದರು.




ನೀಟ್ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮ ವಿರೋಧಿಸಿ ಹೈದರಾಬಾದ್‌ನ ವಿವಿಧ ವಿದ್ಯಾರ್ಥಿ ಸಂಘಟನೆಗಳು ಮಂಗಳವಾರ ಪ್ರತಿಭಟನೆ ಹಮ್ಮಿಕೊಂಡಿದ್ದವು –ಪಿಟಿಐ ಚಿತ್ರ

ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಕಠಿಣ ಕಾನೂನು ರೂಪಿಸುವ ಮೂಲಕ ಯುವಕರ ಭವಿಷ್ಯವನ್ನು ಸುಭದ್ರಗೊಳಿಸುವ ಭರವಸೆಯನ್ನು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ನೀಡಿತ್ತು. ಪ್ರಬಲ ಕಾನೂನು ರೂಪಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದರು.

> **ನೀಟ್ ಪರೀಕ್ಷೆ ಬರೆದ 24 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ಆದರೆ ನರೇಂದ್ರ ಮೋದಿ ಎಂದಿನಂತೆ ಮೌನ ವಹಿಸಿದ್ದಾರೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಸಂಸದ

# ಪಿಜಿ–ಸಿಇಟಿಗೆ ಅರ್ಜಿ: 20 ಕೊನೆ ದಿನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2024-25ನೇ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಪಿಜಿ-ಸಿಇಟಿ) ಅರ್ಜಿ ಸಲ್ಲಿಸುವ ಅವಧಿಯನ್ನು ಜೂನ್ 20ರವರೆಗೆ ವಿಸ್ತರಿಸಲಾಗಿದೆ.

ಜೂನ್ 17ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಅರ್ಜಿ ಸಲ್ಲಿಕೆ ವೇಳೆ ತಾಂತ್ರಿಕ ಸಮಸ್ಯೆಗಳು ಕಾಣಿಸಿಕೊಂಡ ಕಾರಣ ಮೂರು ದಿನ ಹೆಚ್ಚುವರಿ ಅವಧಿ ನೀಡಲಾಗಿದೆ. ಜೂನ್ 21ರೊಳಗೆ ಶುಲ್ಕ ಪಾವತಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

### ಎಂ.ಟೆಕ್, ಎಂ.ಇ. ಪರೀಕ್ಷೆ ಜುಲೈ 13ಕ್ಕೆ

ಎಂ.ಟೆಕ್, ಎಂ.ಇ., ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಜುಲೈ 13 ಹಾಗೂ ಎಂ.ಸಿ.ಎ ಮತ್ತು ಎಂ.ಬಿ.ಎ. ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು ಜುಲೈ 14ರಂದು ನಡೆಯಲಿದೆ. ಗೇಟ್ (ಜಿಎಟಿಇ) ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಪಿಜಿ–ಸಿಇಟಿಗೆ ಹಾಜರಾಗುವ ಅಗತ್ಯವಿಲ್ಲ. ಆದರೆ, ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ, ಪ್ರವೇಶಕ್ಕೆ ಅರ್ಹರಾಗಬೇಕಾಗುತ್ತದೆ. ಗೇಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದಲ್ಲೇ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ ಎಂದು ವಿವರ ನೀಡಿದೆ.

# ಸಾಹಿತಿಗಳ ಕರೆಸಿದ್ದೇ ನಾನು; ತಪ್ಪೇನು–ಡಿಕೆಶಿ

ಪ್ರಜಾವಾಣಿ ವಾರ್ತೆ



ಶಿವಕುಮಾರ್

**ಬೆಂಗಳೂರು:** ‘ಕಾಂಗ್ರೆಸ್ ಪಕ್ಷದ ಕಚೇರಿಗೆ ಸಾಹಿತಿಗಳನ್ನು ಕರೆದು ಸಭೆ ನಡೆಸಿದ್ದು ನಾನೇ ರೀ; ಅದರಲ್ಲಿ ತಪ್ಪೇನಿದೆ. ನಿಮಗೆ (ಮಾಧ್ಯಮ) ತಪ್ಪು ಎನಿಸಿರಬಹುದು. ಸಾಹಿತಿಗಳೂ ರಾಜಕಾರಣಿಗಳೇ, ಅವರೂ ರಾಜಕಾರಣಕ್ಕೆ ಬರಬಹುದು...’

ಈ ರೀತಿ ಹೇಳಿದ್ದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್.

ಇತ್ತೀಚೆಗೆ ಕೆಪಿಸಿಸಿ ಕಚೇರಿಗೆ ಸಾಂಸ್ಕೃತಿಕ ಅಕಾಡೆಮಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷರನ್ನು ಕರೆಯಿಸಿಕೊಂಡ ವಿಚಾರವಾಗಿ ಸಾರ್ವಜನಿಕವಾಗಿ ಆಕ್ಷೇಪ ವ್ಯಕ್ತವಾಗುತ್ತಿರುವ ಬಗ್ಗೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದಾಗ, ಅವರು ತಮ್ಮ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡರು.

‘ಅಕಾಡೆಮಿಗಳ ಅಧ್ಯಕ್ಷರ ಸಭೆ ನಾನೇ ಕರೆದಿದ್ದು ರೀ, ಅದರಲ್ಲೇನಿದೆ. ಪಕ್ಷದ ಕಚೇರಿಯಲ್ಲಿ ಕರೆದಿದ್ದು ಸರಿಯಲ್ಲ ಅಂತ ನಿಮಗೆ ಅನ್ನಿಸಿರಬಹುದು. ಇದು ಸರ್ಕಾರದ ನೇಮಕ. ಹೀಗಾಗಿ ಅಧ್ಯಕ್ಷರನ್ನು ಎಲ್ಲಿಗೆ ಬೇಕಾದರೂ ಕರೆಸಿಕೊಳ್ಳಬಹುದು. ಎಲ್ಲಿ ಬೇಕಾದರೂ ಸಭೆ ಮಾಡಬಹುದು. ಅವರು (ಸಾಹಿತಿ–ಕಲಾವಿದರು) ರಾಜಕಾರಣಿಗಳು ಆಗಬಾರದು ಅಂತ ಏನಾದರೂ ಇದೆಯಾ?’ ಎಂದು ಹೇಳಿದರು.

‘ನಾವು ಪಕ್ಷದ ಪದಾಧಿಕಾರಿಗಳನ್ನು, ರಾಜಕಾರಣಿಗಳನ್ನು ಬೇರೆ ಬೇರೆ ನಿಗಮ- ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಿಸುವುದಿಲ್ಲವೇ. ನೇಮಕ ಮಾಡುವುದು ಸರ್ಕಾರದ ಇಚ್ಛೆ. ಈಗ ನಿಮ್ಮನ್ನೂ ಮಾಧ್ಯಮ ಸಲಹೆಗಾರರನ್ನಾಗಿ ಮಾಡೋದಿಲ್ಲವೇ? ನೀವು ಬೆಳಗಿನಿಂದ ಸಾಯಂಕಾಲದ ತನಕ ನಮ್ಮ ಹಿಂದೆ ಓಡಾಡುವುದಿಲ್ಲವೇ? ನಮಗೋಸ್ಕರ ಬಡಿದಾಡೋದಿಲ್ವೆ’ ಎಂದು ಮರು ಪ್ರಶ್ನೆ ಹಾಕಿದರು.

### ‘ಅಕಾಡೆಮಿಗಳು ಸ್ವಾಯತ್ತ ಸಂಸ್ಥೆಗಳಲ್ಲ’

• **ಸಾಹಿತ್ಯ ಮತ್ತು ಸಂಸ್ಕೃತಿಗೆ ಸೇರಿದ ಅಕಾಡೆಮಿಗಳು ಸ್ವಾಯತ್ತ ಸಂಸ್ಥೆಗಳಲ್ಲವೇ, ಅವುಗಳ ಅಧ್ಯಕ್ಷರನ್ನು ಕರೆಸುವುದು ಎಷ್ಟು ಸರಿ?**

**ಡಿಕೆಶಿ:** ಅವೆಲ್ಲಾ ಸ್ವಾಯತ್ತ ಸಂಸ್ಥೆಗಳಲ್ಲ. ಎಲ್ಲರೂ ರಾಜಕಾರಣಿಗಳೇ. ಅವರದ್ದೇ ಆದ ಸಿದ್ಧಾಂತಗಳನ್ನು ಇಟ್ಟುಕೊಂಡು ಅವರೂ (ರಾಜಕೀಯ) ಮಾಡ್ತಾರೆ. ಆದರೆ, ಅದನ್ನು ಅವರು ಬಹಿರಂಗವಾಗಿ ಹೇಳಿಕೊಳ್ಳದೇ ಇರಬಹುದು. ಅವರಿಗೆ ಅವರದ್ದೇ ಆದ ಹಕ್ಕುಗಳಿವೆ. ನಾನು ಕರೆದಾಗ, ಇಷ್ಟ ಇದ್ದವರು ಬಂದಿದ್ದಾರೆ. ಕೆಲವರು ಬಂದಿಲ್ಲ. ಮುಂದೆ ಪೆನ್ನು, ಪೇಪರ್, ಇಂಕು ಇಟ್ಟುಕೊಳ್ಳಿ ನೋಡೋಣ...

## 27ರಂದು ರಾಜ್ಯವ್ಯಾಪಿ ಕೆಂಪೇಗೌಡರ ಜಯಂತಿ ಆಚರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಕೆಂಪೇಗೌಡರ ಜಯಂತಿ ಆಚರಿಸಲು ತಲಾ ₹1 ಲಕ್ಷ ನೀಡಲಾಗುವುದು. ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆಂಪೇಗೌಡರ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲಾ ₹1 ಲಕ್ಷ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಕೆಂಪೇಗೌಡರ ಜಯಂತಿ ಆಚರಣೆ ಸಂಬಂಧ ವಿಧಾನಸೌಧದಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ₹20 ಸಾವಿರ, ತಾಲ್ಲೂಕು ಕೇಂದ್ರಗಳಿಗೆ ₹20 ಸಾವಿರದ ಜೊತೆಗೆ ಹೆಚ್ಚುವರಿಯಾಗಿ ₹1 ಲಕ್ಷ ನೀಡಲಾಗುವುದು. ಜಿಲ್ಲಾ ಕೇಂದ್ರಗಳಿಗೆ ₹50 ಸಾವಿರ ನೀಡಲಾಗುತ್ತಿದ್ದು, ಮೊತ್ತ ಹೆಚ್ಚಿಸಲು ಚಿಂತನೆ ನಡೆಸಲಾಗಿದೆ ಎಂದು ಅವರು ಹೇಳಿದರು.

7ನೇ ಪುಟ ನೋಡಿ

## ನೀರಜ್‌ಗೆ ಚಿನ್ನ

**ತುರ್ಕು (ಫಿನ್ಲೆಂಡ್) (ಪಿಟಿಐ):** ವಿಶ್ವ ಚಾಂಪಿಯನ್ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಮಂಗಳವಾರ ಇಲ್ಲಿ ನಡೆದ ಪಾವೊ ನೂರ್ಮಿ ಅಥ್ಲೆಟಿಕ್ಸ್ ಕೂಟದಲ್ಲಿ ಚೊಚ್ಚಲ ಚಿನ್ನದ ಪದಕ ಗೆದ್ದಿದ್ದಾರೆ.

12ನೇ ಪುಟ ನೋಡಿ

### ಚಿನಕುರುಳಿ

ಪ್ರಕಾಶ್ ಶೆಟ್ಟಿ



## ತೆರಿಗೆ ಹೆಚ್ಚಳ ವಿರೋಧಿಸಿ ಜೆಡಿಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರ ವಿರೋಧಿಸಿ ಜೆಡಿಎಸ್ ಕಾರ್ಯಕರ್ತರು ಕುದುರೆ ಗಾಡಿ ಹಾಗೂ ಸೈಕಲ್ ಮೇಲೆ ಮೆರವಣಿಗೆ ಮೂಲಕ ಮಂಗಳವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಜೆಡಿಎಸ್ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯರಾದ ಕೆ.ಎ. ತಿಪ್ಪೇಸ್ವಾಮಿ, ಟಿ.ಎ. ಶರವಣ, ಟಿ.ಎನ್. ಜವರಾಯಿಗೌಡ, ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್, ಬೆಂಗಳೂರು ಮಹಾನಗರ ಘಟಕದ ಕಾರ್ಯಾಧ್ಯಕ್ಷ ಜೆ.ಟಿ.ರೇವಣ್ಣ, ಬೆಂಗಳೂರು ಮಹಾನಗರದ ಯುವ ಘಟಕದ ಅಧ್ಯಕ್ಷ ಚಂದ್ರಶೇಖರ್, ಬೆಂಗಳೂರು ಮಹಿಳಾ ಘಟಕದ ಅಧ್ಯಕ್ಷೆ ಶೈಲಾ ಸಂತೋಷ್ ರಾವ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ರಮೇಶ್ ಗೌಡ, 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಜನವಿರೋಧಿ ನೀತಿಗಳನ್ನು ಹೇರುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ ಸಂಪನ್ಮೂಲ ಸಂಗ್ರಹಿಸಲು ಜನರ ಮೇಲೆ ತೆರಿಗೆ ವಿಧಿಸುವುದು ಅನ್ಯಾಯ. ಗ್ಯಾರಂಟಿ ಕೊಡುವುದಾಗಿ ಹೇಳಿ ಜನರ ಜೇಬಿಗೆ ಕೈ ಹಾಕುವುದು ಯಾವ ನ್ಯಾಯ' ಎಂದು ಪ್ರಶ್ನಿಸಿದರು. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಮಾರಾಟ ತೆರಿಗೆ ಹೆಚ್ಚಳ ವಿರೋಧಿಸುವ ಘೋಷಣಾ ಫಲಕಗಳನ್ನು ಹಿಡಿದಿದ್ದ ಜೆಡಿಎಸ್ ಕಾರ್ಯಕರ್ತರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕಾರ್ಯಕರ್ತರಿಂದ ಅಣಕು ಶವಯಾತ್ರೆ: ಸರ್ಕಾರದ ವಿರುದ್ಧ ಘೋಷಣೆ

# ತೈಲ ದರ ಏರಿಕೆ: ಎಎಪಿ ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರವು ಪೆಟ್ರೋಲ್ ಮತ್ತು ಡಿಸೇಲ್ ಮೇಲಿನ ಮಾರಾಟ ತೆರಿಗೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಕಾರ್ಯಕರ್ತರು ದ್ವಿಚಕ್ರ ವಾಹನಗಳಿಗೆ ಹೂವಿನ ಹಾರಗಳನ್ನು ಹಾಕಿ ಅಣುಕು ಶವಯಾತ್ರೆ ನಡೆಸುವ ಮೂಲಕ ಪ್ರತಿಭಟನೆ ನಡೆಸಿದರು. ಸೈಕಲ್‌ಗಳನ್ನು ಏರಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರಗಳನ್ನು ಕೂಗಿದರು.

ಎಎಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮೋಹನ್ ದಾಸರಿ, 'ಗ್ಯಾರಂಟಿ ಯೋಜನೆಗಳ ಹೆಸರಲ್ಲಿ ರಾಜ್ಯ ಸರ್ಕಾರವು ಒಂದು ಕೈಯಲ್ಲಿ ಕೊಟ್ಟಂತೆ ನಟಿಸಿ ಇನ್ನೊಂದು ಕೈಯಲ್ಲಿ ಜನಸಾಮಾನ್ಯರ ಹಣವನ್ನು ತೆರಿಗೆ ರೂಪದಲ್ಲಿ ಕಿತ್ತುಕೊಳ್ಳುತ್ತಿದೆ. ಸಮರ್ಪಕವಾಗಿ ಸಂಪನ್ಮೂಲ ಕ್ರೋಡೀಕರಣ ಮಾಡಿದರೆ, ಭ್ರಷ್ಟಾಚಾರ ಮತ್ತು ಕಮಿಷನ್ ದಂಧೆಯನ್ನು ನಿಲ್ಲಿಸಿದರೆ ಗ್ಯಾರಂಟಿ ಯೋಜನೆಗಳಿಗೂ ಮಿಕ್ಕಿ ಇತರೆ ಎಲ್ಲ ರೀತಿಯ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಹಣ ಉಳಿಯಲಿದೆ ಎಂದು ಹೇಳಿದರು.

'ಮೇ 2023ರಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕೇವಲ ಒಂದು ವರ್ಷದ ಅವಧಿಯೊಳಗೆ ಅಬಕಾರಿ ತೆರಿಗೆಯನ್ನು ಮೂರು ಬಾರಿ ಹೆಚ್ಚಿಸಿದ್ದಾರೆ. ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಗರಿಷ್ಠ ಶೇ 25ರವರೆಗೆ ಏರಿಕೆ ಮಾಡಿದ್ದಾರೆ. ನಾನಾ ಹಂತದ ವಾಹನಗಳಿಗೆ ವಿಧಿಸುವ ತೆರಿಗೆಯನ್ನು ಹೆಚ್ಚಳ ಮಾಡಿದ್ದಾರೆ' ಎಂದು ದೂರಿದರು.

'ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನೇತೃತ್ವದಲ್ಲಿ ಅನುಷ್ಠಾನಕ್ಕೆ ತಂದಿರುವ ಉಚಿತ ಯೋಜನೆಗಳು ಭಾರಿ ಯಶಸ್ಸು ಕಂಡಿವೆ. ಕಾರಣ, ಸಮರ್ಪಕ ಸಂಪನ್ಮೂಲ ಕ್ರೋಡೀಕರಣ, ಭ್ರಷ್ಟಾಚಾರರಹಿತ ಆಡಳಿತ, ಅಧ್ಯಯನಶೀಲ ಉಚಿತ ಯೋಜನೆಗಳ ಅನುಷ್ಠಾನಗಳಾಗಿವೆ. ಆದರೆ, ಈ ಯೋಜನೆಗಳನ್ನು ನಕಲು ಮಾಡಿದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದ್ದೇವೆ ಎಂದು ಹೇಳಿಕೊಳ್ಳುವ ಸಲುವಾಗಿ ಉಚಿತ ಯೋಜನೆಗಳನ್ನು ತರಾತುರಿಯಲ್ಲಿ ಜಾರಿಗೊಳಿಸಿತು' ಎಂದು ಟೀಕಿಸಿದರು.

ಎಎಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸೆಹ್ವಾನಿ, ರಾಜ್ಯ ಖಜಾಂಚಿ ಪ್ರಕಾಶ್ ನೆಡುಂಗಡಿ, ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ರಾಜ್ಯ ಕಾರ್ಯದರ್ಶಿ ಉಷಾ ಮೋಹನ್ ಭಾಗವಹಿಸಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ದ್ವಿಚಕ್ರ ವಾಹನಗಳ ಅಣಕು ಶವ ಯಾತ್ರೆ ನಡೆಸುವ ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು –ಪ್ರಜಾವಾಣಿ ಚಿತ್ರ

## 'ಸಾತ್ವಿಕ ಪ್ರಶಸ್ತಿ'ಗೆ ನಾಗಭೂಷಣ ಆಯ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಸವ ವಿದ್ಯಾಭಿವೃದ್ಧಿ ಸಂಘ ನೀಡುವ 'ಸಾತ್ವಿಕ ಪ್ರಶಸ್ತಿ'ಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ನಾಗಭೂಷಣ ಆಯ್ಕೆಯಾಗಿದ್ದಾರೆ.

ಜುಲೈ 14ರಂದು ಮಲ್ಲೇಶ್ವರದ ಈಶ್ವರ ಸೇವಾ ಮಂಡಳಿಯ ಸಭಾಂಗಣದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ತುಮಕೂರಿನ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಚ್. ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





## ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ 24ರಿಂದ

**ಬೆಂಗಳೂರು:** ಹಿಂದೂ ಜನಜಾಗೃತಿ ಸಮಿತಿಯಿಂದ ಗೋವಾದ ಪೊಂಡಾ ನಗರದ ರಾಮನಾಥ ದೇವಸ್ಥಾನದಲ್ಲಿ ಜೂನ್ 24ರಿಂದ 30ರವರೆಗೆ 12ನೇ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ವಕ್ತಾರ ಮೋಹನ್‌ಗೌಡ, 'ಸನಾತನ ಧರ್ಮದ ವೈಚಾರಿಕ ಸುರಕ್ಷತೆ, ಹಿಂದೂ ಸಮಾಜ ಮತ್ತು ಮಂದಿರ ಸಂಸ್ಕೃತಿಯ ರಕ್ಷಣೆಯ ಉಪಾಯಗಳು, ಹಲಾಲ್ ಅರ್ಥ ವ್ಯವಸ್ಥೆಯ ಬಗ್ಗೆ ಜಾಗೃತಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಜ್ಞರೊಂದಿಗೆ ಸಂವಾದಗಳು ನಡೆಯಲಿವೆ' ಎಂದರು.

'ಅಧಿವೇಶನದಲ್ಲಿ ಅಮೆರಿಕ, ಇಂಗ್ಲೆಂಡ್ ಮತ್ತು ಬಾಂಗ್ಲಾದೇಶ ಸೇರಿದಂತೆ ವಿವಿಧ ರಾಷ್ಟ್ರದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ದೇಶದ 26 ರಾಜ್ಯಗಳ ಒಂದು ಸಾವಿರಕ್ಕೂ ಹೆಚ್ಚಿನ ಸಂಘಟನೆಗಳು ಸೇರಿದಂತೆ ಎರಡು ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇಂದೋರ್‌ನ ಮಹಾಮಂಡಲೇಶ್ವರದ ಸ್ವಾಮಿ ಪ್ರಣವಾನಂದ ಸರಸ್ವತಿ ಮಹಾರಾಜ, ನಿರ್ಗುಣನಂದಗಿರಿ ಮಹಾರಾಜ್, ಶ್ರೀರಾಮ ಜನ್ಮಭೂಮಿ, ಕಾಶಿ ಜ್ಞಾನವ್ಯಾಪಿ ಪ್ರಕರಣದ ನ್ಯಾಯವಾದಿ ಹರಿಶಂಕರ್ ಜೈನ್, ವಿಷ್ಣು ಶಂಕರ್ ಜೈನ್, ಹೈಕೋರ್ಟ್ ವಕೀಲ ಅಶ್ವಿನಿ ಉಪಾಧ್ಯಾಯ ಭಾಗವಹಿ ಸಲಿದ್ದಾರೆ' ಎಂದು ತಿಳಿಸಿದರು.



## ಕಣ್ಣು ಕುಕ್ಕುವ ಎಲ್‌ಇಡಿ ದೀಪ ಅಳವಡಿಕೆ ವಿರುದ್ಧ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಮೋಟಾರು ಕಾಯ್ದೆ(ಸಿಎಂವಿ)ಯಲ್ಲಿ ನಮೂದಿಸಿರುವ ಮಾನದಂಡದಂತೆ ವಾಹನ ಸವಾರರು ಹೆಡ್‌ಲೈಟ್ ಅಳವಡಿಕೆ ಮಾಡಿಕೊಳ್ಳಬೇಕು. ಕಾಯ್ದೆ ಉಲ್ಲಂಘಿಸಿದರೆ ಅಂತಹ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗುವುದು ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ಎಚ್ಚರಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಬೆಳಕು ಹೊರಹಾಕುವ ಎಲ್‌ಇಡಿ ದೀಪಗಳನ್ನು ಅಳವಡಿಸುತ್ತಿದ್ದು, ಇದರಿಂದ ಎದುರು ಮುಖದಲ್ಲಿ ಸಂಚರಿಸುವ ಇತರೆ ವಾಹನ ಸವಾರರಿಗೆ ತೀವ್ರ ತೊಂದರೆ ಆಗುತ್ತಿದೆ. ಭಾರಿ ಗಾತ್ರದ ವಾಹನಗಳಾದ ಟ್ರಕ್, ಬಸ್‌ಗಳಲ್ಲಿ ಹೆಚ್ಚು ಪ್ರಖರ ಬೆಳಕು ಹೊರಹಾಕುವ ಮತ್ತು ಕಣ್ಣು ಕುಕ್ಕುವ ಎಲ್‌ಇಡಿ ದೀಪಗಳನ್ನು ತಮ್ಮ ವಾಹನಗಳಲ್ಲಿ ಅಳವಡಿಸುತ್ತಿರುವುದರಿಂದ ಇತರೆ ವಾಹನಗಳ ಸವಾರರಿಗೆ ತೊಂದರೆ ಆಗುತ್ತಿದೆ. ಅಪಘಾತ ಪ್ರಕರಣಗಳು ಸಂಭವಿಸುತ್ತಿವೆ ಎಂದು ಹೇಳಿದ್ದಾರೆ.

### ಜಲಮಂಡಳಿ ಸಿಬ್ಬಂದಿಗೆ ಸಂಬಳ ಕೊಡುವುದಕ್ಕೂ ಹಣವಿಲ್ಲ: ಡಿಕೆಶಿ

# ‘ನೀರಿನ ದರ ಏರಿಕೆ ಅನಿವಾರ್ಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕುಡಿಯುವ ನೀರಿನ ಶುಲ್ಕ ಏರಿಕೆ ಮಾಡುವುದು ಅನಿವಾರ್ಯ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಬೆಂಗಳೂರಲ್ಲಿ 2014 ರ ಬಳಿಕ ನೀರಿನ ದರ ಏರಿಕೆ ಮಾಡಿಲ್ಲ. ವಿದ್ಯುತ್ ದರವೂ ಏರಿಕೆ ಆಗಿದೆ. ಜಲಮಂಡಳಿ ಸಿಬ್ಬಂದಿಗೆ ಸಂಬಳ ಕೊಡುವುದಕ್ಕೂ ಹಣವಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

‘ಜಲಮಂಡಳಿ ವರ್ಷದಿಂದ ವರ್ಷಕ್ಕೆ ನಷ್ಟಕ್ಕೆ ಗುರಿಯಾಗುತ್ತಲೇ ಇದೆ. ಮಂಡಳಿಯ ವಿದ್ಯುತ್ ಬಿಲ್ ಕೂಡ ಪಾವತಿ ಮಾಡಲು ಆಗಿಲ್ಲ. ಆದರೆ, ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆ ಮಾಡಲೇಬೇಕಲ್ಲ. ಬಿಜೆಪಿಯವರು ಇದ್ದಾಗ ವಿದ್ಯುತ್ ದರ ಜಾಸ್ತಿ ಮಾಡಿದರು. ನಾವು ಬಂದು ಕಡಿಮೆ ಮಾಡಿದೆವು. ಕಡಿಮೆ ಮಾಡಿದ್ದಕ್ಕೆ ನೀವು ಪ್ರಶಂಸೆ ಮಾಡುವುದಿಲ್ಲ. ದರ ಹೆಚ್ಚಿಸಿದರೆ ಮಾತ್ರ ಮಾತನಾಡುತ್ತೀರಿ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ದರ ಏರಿಕೆ ಮಾಡಿದರೆ ಜನ ಹೊರೆ ಆಗುತ್ತಿದೆ ಎಂದು ಹೇಳುವುದಿಲ್ಲ. ವಿರೋಧ ಪಕ್ಷಗಳು ಪ್ರತಿಭಟನೆ ಮಾಡುತ್ತವೆ. ಪ್ರತಿಭಟನೆ ಮಾಡದಿದ್ದರೆ, ಆ ಸ್ಥಾನದಲ್ಲಿ ಅವರು ಮುಂದುವರಿಸುವುದು ಕಷ್ಟ‘ ಎಂದು ಡಿ.ಕೆ.ಶಿವಕುಮಾರ್ ವ್ಯಂಗ್ಯವಾಗಿ ನುಡಿದರು.

‘ನಾಯಕರೊಬ್ಬರು ‘ಜನ ದಂಗೆ ಏಳಬೇಕು‘ ಎಂದು ಕರೆ ಕೊಟ್ಟಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡಿಸುವುದು ಅವರ ಉದ್ದೇಶ. ದಂಗೆ ಏಳಿಸಲಿ‘ ಎಂದು ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಪರೋಕ್ಷವಾಗಿ ಹರಿಹಾಯ್ದರು.

‘ನಮ್ಮ ನೀರು ನಮ್ಮ ಹಕ್ಕು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನ್ಯಾಯಾಲಯ ಮೇಕೆದಾಟು ಯೋಜನೆ ಬಗ್ಗೆ ತೀರ್ಮಾನ ತೆಗೆದು ಕೊಳ್ಳುತ್ತವೆ. ಕೇಂದ್ರ ಸರ್ಕಾರವೂ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಇದರಿಂದ ತಮಿಳುನಾಡಿಗೆ ಹೆಚ್ಚು ಅನುಕೂಲವಾಗಲಿದೆ. ಮೇಕೆದಾಟು ಅಣೆಕಟ್ಟಿನಿಂದ ತಮಿಳುನಾಡಿಗೆ ನಿಗದಿ ಯಾಗಿರುವ ನೀರಿನ ಪಾಲನ್ನು ನೀಡಲು ಅನುಕೂಲವಾಗುತ್ತದೆ ಹೊರತು ನಮ್ಮ ಕರ್ನಾಟಕದ ಉಪಯೋಗಕ್ಕೆ ಬಳಸುವುದಿಲ್ಲ’ ಎಂದರು.

### ‘ಶೀಘ್ರದಲ್ಲೇ ವಾರ್ಡ್ ಮೀಸಲಾತಿ’

ಲಂಡನ್ ಮಾದರಿಯಲ್ಲಿ ಬಿಬಿಎಂಪಿ ಚುನಾವಣೆ ನಡೆಸಲಾಗುತ್ತದೆಯೇ ಎಂದು ಸುದ್ದಿಗಾರರು ಕೇಳಿದಾಗ, ‘ಅದರ ಬಗ್ಗೆ ಗೊತ್ತಿಲ್ಲ. ಶೀಘ್ರದಲ್ಲೇ ಮೀಸಲಾತಿ ನಿಗದಿ ಮಾಡಿ ಬಿಬಿಎಂಪಿ ಚುನಾವಣೆ ನಡೆಸಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಬಿಬಿಎಂಪಿಯ ಯಾವ ಆಸ್ತಿಗಳನ್ನೂ ಅಡಮಾನ ಇಡುತ್ತಿಲ್ಲ. ಆಸ್ತಿಗಳ ರಕ್ಷಣೆ ಹಾಗೂ ಎಷ್ಟು ಆಸ್ತಿಗಳಿವೆ ಎನ್ನುವ ಮರು ಸಮೀಕ್ಷೆ, ಗುತ್ತಿಗೆ ನವೀಕರಣ ಸೇರಿದಂತೆ ಇತರೆ ಕೆಲಸಗಳಿಗಾಗಿ ನಮ್ಮ ಅಂದಾಜು ವಿಭಾಗವನ್ನು ಭದ್ರಗೊಳಿಸಿ ದಾಖಲೆಗಳನ್ನು ರಕ್ಷಣೆ ಮಾಡುವ ಕೆಲಸ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಬಿಬಿಎಂಪಿಯ ಜಾಹೀರಾತು ಹೊಸ ನೀತಿಯನ್ನು ಒಂದು ವಾರದಲ್ಲಿ ಜಾರಿಗೊಳಿಸಲಾಗುವುದು. ನಮ್ಮ ಮೆಟ್ರೊ ಪಿಲ್ಲರ್‌ಗಳನ್ನು ಬಳಸಿಕೊಳ್ಳುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದರು.

ದರ್ಶನ್ ಸೇರಿದಂತೆ ಅನೇಕರು ರಾಜಕಾಲುವೆ ಒತ್ತುವರಿ ತೆರವಿಗೆ ತಡೆಯಾಜ್ಞೆ ತಂದಿರುವ ಪ್ರಕರಣಗಳ ಬಗ್ಗೆ ಕೇಳಿದಾಗ ‘ನಾನು, ನೀನು ಯಾರೇ ತಡೆಯಾಜ್ಞೆ ತಂದಿದ್ದರೂ ತೆರವುಗೊಳಿಸಲಾಗುವುದು’ ಎಂದು ಹೇಳಿದರು.

**ಗ್ಯಾರಂಟಿ ಅನುಷ್ಠಾನ ಸಮಿತಿ:** ‘ಗ್ಯಾರಂಟಿ ಯೋಜನೆಗಳು ತಲುಪದೆ ಇರುವವರಿಗೆ ಹಾಗೂ ಸೂಕ್ತ ರೀತಿಯಲ್ಲಿ ಗ್ಯಾರಂಟಿ ಯೋಜನೆಗಳನ್ನು ತಲುಪಿಸಲು ಬೆಂಗಳೂರಿನ ಸಮಿತಿ ರಚಿಸಲಾಗಿದ್ದು, ಮಾಜಿ ಕಾರ್ಪೊರೇಟರ್ ಜಿ. ಕೃಷ್ಣಪ್ಪ ಅವರು ಸಮಿತಿಯ ನೇತೃತ್ವ ವಹಿಸಿಕೊಂಡಿದ್ದಾರೆ. ಬಿಬಿಎಂಪಿಯಲ್ಲಿ ಸಮಿತಿಯ ಕಚೇರಿಯನ್ನು ಉದ್ಘಾಟಿಸಲಾಗಿದೆ’ ಎಂದು ಶಿವಕುಮಾರ್ ಹೇಳಿದರು.



ಆರ್‌.ಟಿ. ನಗರ ಪಬ್ಲಿಕ್ ಶಾಲೆಯಲ್ಲಿ ಭಾನುವಾರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆಯೋಜಿಸಿದ್ದ 2023–24ನೇ ಸಾಲಿನ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳ ಅಭಿನಂದನಾ ಸಮಾರಂಭದಲ್ಲಿ ಆರ್‌. ಮಾನ್ಯ ಅವರನ್ನು ಸಚಿವ ರಾಮಲಿಂಗಾರೆಡ್ಡಿ ಸನ್ಮಾನಿಸಿದರು. ಕೆ. ಗಂಗಪ್ಪಗೌಡ, ಕೊಂಡಜ್ಜಿ ಬ. ಷಣ್ಮುಖಪ್ಪ, ಪಿ.ಜಿ.ಆರ್‌. ಸಿಂಧ್ಯ ಹಾಗೂ ಬಿ.ಆರ್‌. ಪ್ರಸನ್ನಕುಮಾರ್ ಭಾಗವಹಿಸಿದ್ದರು

–ಪ್ರಜಾವಾಣಿ ಚಿತ್ರ

## ಪರಿಷತ್ ಉಪಚುನಾವಣೆ ಜುಲೈ 12ಕ್ಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಜಗದೀಶ ಶೆಟ್ಟರ್ ರಾಜೀನಾಮೆಯಿಂದ ತೆರವಾಗಿರುವ ವಿಧಾನ ಪರಿಷತ್‌ನ ಸ್ಥಾನಕ್ಕೆ ಜುಲೈ 12 ರಂದು ಉಪಚುನಾವಣೆ ನಡೆಯಲಿದೆ.

ಬಿಜೆಪಿಗೆ ಸೇರುವ ಉದ್ದೇಶದಿಂದ ಶೆಟ್ಟರ್ ಅವರು ಪರಿಷತ್ ಸ್ಥಾನಕ್ಕೆ ಜನವರಿ 25ರಂದು ರಾಜೀನಾಮೆ ನೀಡಿದ್ದರು. ಅವರ ಅವಧಿ 2028ರ ಜೂನ್ 14ರ ತನಕ ಇತ್ತು.

ಪಕ್ಷದ ಅಭ್ಯರ್ಥಿಯನ್ನಾಗಿ ಹಂಪನಗೌಡ ಬಾದರ್ಲಿ ಕಾಂಗ್ರೆಸ್ ಪಕ್ಷ ಈಗಾಗಲೇ ಘೋಷಿಸಿದೆ. ರಾಯಚೂರಿನವರಾದ ಬಾದರ್ಲಿ ಅವರು ರಾಜ್ಯ ಯುವ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ.

ಜುಲೈ 2ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ. 3ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. 5ರಂದು ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನ. ಜುಲೈ 12ರಂದು ಸಂಜೆ 5ಕ್ಕೆ ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ.

## ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಚ್‌ಬಿಆರ್ ವಿದ್ಯುತ್ ನಿರ್ವಹಣಾ ಕೇಂದ್ರ ಹಾಗೂ ಆಸ್ಟಿನ್ ಟೌನ್ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಜೂನ್ 20ರಂದು ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಬೆಳಿಗ್ಗೆ 10.30ರಿಂದ ಸಂಜೆ 4ಗಂಟೆಯವರೆಗೆ ವಿದ್ಯುತ್ ವ್ಯತ್ಯಯ-ವಾಗುವ ಸ್ಥಳಗಳು: ಎಚ್‌ಬಿಆರ್ 1ನೇ ಬ್ಲಾಕ್, 2ನೇ ಬ್ಲಾಕ್, ಯಾಸಿನ್‌ನಗರ, ಸುಭಾಶ್ ಲೇಔಟ್, ಕೃಷ್ಣ ರೆಡ್ಡಿ ಲೇಔಟ್, ಕೆ.ಕೆ. ಹಳ್ಳಿ ಗ್ರಾಮ, ಸಿಎಂಆರ್ ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ರಾಮಯ್ಯ ಲೇಔಟ್, ಲಿಂಗರಾಜಪುರ, ರಶೀದ್‌ನಗರ, ಕೆ.ಜಿ. ಹಳ್ಳಿ, ಕಾವೇರಿ ಗಾರ್ಡನ್, ನಾಗವಾರ ಮುಖ್ಯರಸ್ತೆ, ಕೆ. ನಾರಾಯಣಪುರ, ಬಿಡಿಎಸ್ ಲೇಔಟ್, ಹೆಣ್ಣೂರು ಮುಖ್ಯರಸ್ತೆ, ಥಣಿಸಂದ್ರ, ಹೆಗಡೆನಗರ, ಶಬರೀನಗರ, ಕೆಎಂಟಿ ಲೇಔಟ್, ಭಾರತ ಮಾತ ಲೇಔಟ್, ಹಿದಾಯತ್ ನಗರ, ಲಿಡ್ಕರ್ ಕಾಲೋನಿ, ಗಾಂಧಿನಗರ, ಕುಶಾಲನಗರ ಸೇರಿದಂತೆ ಸುತ್ತಮುತ್ತಲಿನ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ರಿಚ್ಮಂಡ್ ರಸ್ತೆ, ಸಿಲ್ವರ್ ಲೇಕ್ ಅಪಾರ್ಟ್‌ಮೆಂಟ್, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಐಟಿಸಿ, ಫೋರ್ ಸೀಸನ್ ಅಪಾರ್ಟ್‌ಮೆಂಟ್, ಕೆಎಸ್‌ಆರ್‌ಪಿ, ರೆಸಿಡೆನ್ಸಿ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ಕ್ಯಾಸಲ್ ಸ್ಟ್ರೀಟ್, ಮ್ಯಾಗ್ರತ್ ರಸ್ತೆ, ಗರುಡಾ ಮಾಲ್, ಅಶೋಕನಗರ, ಮ್ಯೂಸಿಯಂ ರಸ್ತೆ, ಮದ್ರಾಸ್ ಬ್ಯಾಂಕ್ ರಸ್ತೆ ಮತ್ತು ಸುತ್ತಮುತ್ತಲಿನ ರಸ್ತೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಸ್ಪರ್ಧಾತ್ಮಕ ಪರೀಕ್ಷೆ: ಉಚಿತ ತರಬೇತಿ

**ಬೆಂಗಳೂರು:** ಆರ್.ಎಲ್.ಜಾಲಪ್ಪ ಅಕಾಡೆಮಿ ಜುಲೈ 15ರಿಂದ ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿ ಆರಂಭಿಸುತ್ತಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ತರಬೇತಿ ನೀಡಲಾಗುತ್ತದೆ. ಗ್ರಾಮೀಣ ಭಾಗದ ಆಸಕ್ತ ಬಡ ಅಭ್ಯರ್ಥಿಗಳು ಜುಲೈ 10ರೊಳಗೆ www:rljacademy.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ 99006 06042/ 97314 80759/ 73377 05513ಗೆ ಸಂಪರ್ಕಿಸಿ.





2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ; ಹಿಂದಿನ ಸಾಲಿಗಿಂತ ಹೆಚ್ಚು

# ಬಿಬಿಎಂಪಿ: ₹2 ಸಾವಿರ ಕೋಟಿ ಅಕ್ರಮ!

• ಆರ್. ಮಂಜುನಾಥ್

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಲೆಕ್ಕಪರಿಶೋಧನೆಯಲ್ಲಿ ₹2,010 ಕೋಟಿಯಷ್ಟು ಅಕ್ರಮ ಕಂಡು ಬಂದಿದ್ದು, ಇದರಲ್ಲಿ ₹422 ಕೋಟಿ ಮಾತ್ರ ವಸೂಲಿ ಮಾಡಲಾಗಿದೆ.


ಬಿಬಿಎಂಪಿ ಮುಖ್ಯ ಲೆಕ್ಕಪರಿಶೋಧಕರು ಸಲ್ಲಿಸಿರುವ 2021–22ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಈ ಅಂಶ ಪ್ರಕಟಿಸಲಾಗಿದ್ದು, 696 ಆಕ್ಷೇಪಣೆಗಳನ್ನು ಸಲ್ಲಿಸಲಾಗಿತ್ತು. 124 ಕಂಡಿಕೆಗಳಲ್ಲಿ ವಸೂಲಾತಿಯಾಗಿದ್ದು, ಇನ್ನುಳಿದ 625 ಆಕ್ಷೇಪಣೆಗಳಿಗೆ ಯಾವ ಉತ್ತರವನ್ನೂ ಬಿಬಿಎಂಪಿ ನೀಡಿಲ್ಲ. 1964ರಿಂದ 2021–22ರ ಅವಧಿಯಲ್ಲಿ 2021–22ರಲ್ಲಿನ ಆಕ್ಷೇಪಣೆ ಅತಿಹೆಚ್ಚಿನದ್ದಾಗಿದೆ.

ಲೆಕ್ಕಪರಿಶೋಧನೆ ವರದಿಯಲ್ಲಿ ಪ್ರಸ್ತಾಪಿಸಿರುವ ಕಂಡಿಕೆಗಳ ನ್ಯೂನತೆ ಮತ್ತು ವಸೂಲಾತಿಗಳ ಬಗ್ಗೆ ಸಕಾಲದಲ್ಲಿ ಕ್ರಮ ಜರುಗಿಸದಿರುವುದರಿಂದ ಪಾಲಿಕೆಗೆ ನಷ್ಟವಾಗುವ ಸಂಭವವಿದೆ ಎಂದು ವರದಿಯಲ್ಲಿ ಎಚ್ಚರಿಸಲಾಗಿದೆ. ಈ ಸಾಲಿನ ಲೆಕ್ಕಪರಿಶೋಧನೆ ವರದಿಯೊಂದಿಗೆ ಹಿಂದಿನ ಸಾಲಿನ ವರದಿಗಳ ಮೇಲೆಯೂ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸು ಸಲ್ಲಿಸಬೇಕು ಎಂದು ಅಭಿಪ್ರಾಯಪಡಲಾಗಿದೆ.

**₹8 ಕೋಟಿ ಹೆಚ್ಚುವರಿ ಬಿಲ್ ಪಾವತಿ:** ಸಾಮಾನ್ಯ ಆಡಳಿತ, ಕಾಮಗಾರಿ, ಆರೋಗ್ಯ ಹಾಗೂ ಶಿಕ್ಷಣ ವಿಭಾಗಗಳಲ್ಲಿ ಹೆಚ್ಚುವರಿ ಪಾವತಿಯಿಂದ ₹8.01 ಕೋಟಿ ನಷ್ಟವಾಗಿರುವುದನ್ನು ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ನಿಯಮ ಉಲ್ಲಂಘನೆ: ಕಾಮಗಾರಿ ಅನುಷ್ಠಾನ ಹಾಗೂ ಸಾಮಗ್ರಿ ಖರೀದಿಯಲ್ಲಿ ₹15.95 ಕೋಟಿಯನ್ನು ನಿಯಮ ಉಲ್ಲಂಘಿಸಿ ಪಾವತಿಸಲಾಗಿದೆ. ಸಾಮಾನ್ಯ ಆಡಳಿತದಲ್ಲಿ ₹9.98 ಕೋಟಿ, ಆರೋಗ್ಯ ವಿಭಾಗದಲ್ಲಿ ₹1.57 ಕೋಟಿ, ಕಾಮಗಾರಿಯಲ್ಲಿ ₹4.28 ಹಾಗೂ ಶಿಕ್ಷಣ ಇಲಾಖೆಯಲ್ಲಿ ₹11.36 ಲಕ್ಷ ಪಾವತಿಸಲಾಗಿದೆ.

ಬೃಹತ್ ನೀರುಗಾಲುವೆ ಹಾಗೂ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಅತಿಹೆಚ್ಚು ನಿಯಮ ಉಲ್ಲಂಘನೆಗಳಾಗಿವೆ. ಎಸ್‌ಆರ್ ದರ ಜಾರಿಯಾಗುವ ಮುನ್ನವೇ ದರಪಟ್ಟಿಯನ್ನು ಅನ್ವಯಿಸಿ ಅಂದಾಜು ಪಟ್ಟಿ ತಯಾರಿಸಲಾಗಿದೆ. ಅದರಂತೆಯೇ ಬೊಮ್ಮನಹಳ್ಳಿ ವಿಭಾಗದಲ್ಲಿ ₹78.97 ಲಕ್ಷ ಪಾವತಿಸಲಾಗಿದೆ. ಒಂದು ಸಂಸ್ಥೆಗೆ ಗುತ್ತಿಗೆ ನೀಡಿದ್ದರೆ ಮತ್ತೊಬ್ಬ ಗುತ್ತಿಗೆದಾರರಿಗೆ ಬಿಲ್ ಪಾವತಿಸಿರುವ ಪ್ರಕರಣಗಳು ಈ ಎರಡು ವಿಭಾಗಗಳಲ್ಲಿ ಹೆಚ್ಚಾಗಿವೆ.






### ಪ್ರಮುಖ ತೊಡಕುಗಳು

- ನಗದು ಪುಸ್ತಕ ಅಸಮರ್ಪಕ ನಿರ್ವಹಣೆ
- ಪೂರ್ಣ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು
- ಅಸಮರ್ಪಕ ಕಾರಣ ನೀಡಿ ಲೆಕ್ಕ ತನಿಖಾ ಕಾರ್ಯಕ್ರಮ ಮುಂದೂಡಿಕೆ
- ಲೆಕ್ಕಪರಿಶೋಧನೆಗ ಅಧಿಕಾರಿ/ಸಿಬ್ಬಂದಿಯಿಂದ ಅಸಹಕಾರ ಮನೋಭಾವ
- ನಿಗದಿತ ಅವಧಿಯಲ್ಲಿ ಸಲ್ಲಿಕೆಯಾಗದ ವಾರ್ಷಿಕ ಲೆಕ್ಕಪತ್ರ
- ಲೆಕ್ಕಪತ್ರಗಳು, ದಾಖಲೆಗಳು, ನಿಗದಿತ ನಮೂನೆಯ ವಹಿ ನಿರ್ವಹಿಸದಿರುವುದು

### ಒಂದೇ ಕಾಮಗಾರಿಗೆ ಎರಡು ಬಿಲ್ಲು!

ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಕಚೇರಿಯಿಂದ ಮಾಗಡಿ ರಸ್ತೆಯಲ್ಲಿ ನಿರ್ವಹಿಸಲಾದ ನೀರುಗಾಲುವೆ ಕಾಂಕ್ರೀಟ್ ಬಾಕ್ಸ್ ಕಾಮಗಾರಿಗೆ ಆನ್‌ಲೈನ್ ಹಾಗೂ ಆಫ್‌ಲೈನ್ ಎರಡಲ್ಲೂ ಪಾಂಡುರಂಗ ಅವರಿಗೆ ₹7.37 ಲಕ್ಷ ಪಾವತಿಸಲಾಗಿದೆ. ಮುಖ್ಯ ಎಂಜಿನಿಯರ್ ಅವರ ಕರ್ತವ್ಯ ನಿರ್ಲಕ್ಷ್ಯತೆ ಗಂಭೀರವಾದದ್ದು ಎಂದು ವರದಿಯಲ್ಲಿ ಹೇಳಲಾಗಿದೆ.

ಇಬ್ಬರಿಗೆ ಬಿಲ್: ದಾಸರಹಳ್ಳಿ ಉಪವಿಭಾಗದಲ್ಲಿ ಹಣಕಾಸು ಉಪ ನಿಯಂತ್ರಕರ ಕಚೇರಿಯ ಶೌಚಾಲಯ ದುರಸ್ತಿಗೆ ಗುತ್ತಿಗೆದಾರರ ಎಚ್.ಎಸ್. ಗಿರೀಶ್ ಅವರಿಗೆ 2021ರ ಫೆಬ್ರುವರಿ 16ರಂದು ₹99,508 ಪಾವತಿಸಲಾಗಿದೆ. ಇದೇ ಕೆಲಸಕ್ಕಾಗಿ ಗುತ್ತಿಗೆದಾರ ಎನ್.ಎಂ. ಚೇತನ್ ಅವರಿಗೆ ಅಷ್ಟೇ ಮೊತ್ತವನ್ನು ಮಾರ್ಚ್ 19ರಂದು ಪಾವತಿಸಲಾಗಿದೆ.

ಎರಡು ಬಾರಿ ಪಾವತಿ: ಬೊಮ್ಮನಹಳ್ಳಿ ವಿಭಾಗದ ರಸ್ತೆ ಮೂಲಸೌಕರ್ಯ ಕಾರ್ಯಪಾಲಕ ಎಂಜಿನಿಯರ್ ವತಿಯಿಂದ ಕೈಗೊಂಡ ಚರಂಡಿ ಸ್ಲ್ಯಾಬ್ ತೆಗೆಯುವುದು ಮತ್ತು ಮರು ಅಳವಡಿಸುವ ಕಾರ್ಯಕ್ಕೆ ಎರಡು ಬಾರಿ ಒಟ್ಟು ₹1.16 ಲಕ್ಷ ಪಾವತಿಸಲಾಗಿದೆ.

ಒಂದು ಶುಲ್ಕ, ಎರಡು ಬಿಲ್ಲು: ಒಎಫ್‌ಸಿ ವಿಭಾಗದ ಕಾರ್ಯಪಾಲಕರ ಕಚೇರಿಯಲ್ಲಿ ಒಂದೇ ಡಿ.ಡಿಗೆ ಎರಡು ಬಾರಿ ರಸೀದಿಯನ್ನು ನೀಡಲಾಗಿದೆ. 31 ಪ್ರಕರಣಗಳಲ್ಲಿ ₹4.21 ಕೋಟಿ ಮೊತ್ತಕ್ಕೆ 62 ರಸೀದಿಗಳನ್ನು ನೀಡಲಾಗಿದೆ.

### ಮಾಡದ ಕಾಮಗಾರಿಗೆ ಬಿಲ್ಲು!

ಗಾಂಧಿನಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ವ್ಯಾಪ್ತಿಯಲ್ಲಿ ದಕ್ಷಿಣ ಸೆಂಟ್ರಲ್ ಲಿಂಕ್ ರಸ್ತೆಗೆ ಎರಡು ದಿಕ್ಕಿನಲ್ಲಿ ಡ್ರೈನ್‌ನಲ್ಲಿ ಹೂಳು ತೆಗೆಯಲು, ಹಳೆಯ ಸ್ಲ್ಯಾಬ್ ತೆಗೆದು ಮರು ಅಳವಡಿಸುವ ಕಾಮಗಾರಿಗಾಗಿ ₹63.83 ಲಕ್ಷ ಪಾವತಿಸಲಾಗಿದೆ. ಆದರೆ, ಹಳೆಯ ಸ್ಲ್ಯಾಬ್ ತೆಗೆದು, ಹೊಸದಾಗಿ ಅಳವಡಿಸಿದ ಯಾವುದೇ ವಿವರ ಇಲ್ಲದ್ದರಿಂದ, ಕಾಮಗಾರಿ ನಡೆದಿರುವುದು ಸತ್ಯಕ್ಕೆ ದೂರವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

### ಇಂದಿರಾ ಕ್ಯಾಂಟೀನ್: ಪಾರ್ಸಲ್‌ಗೆ ಶುಲ್ಕ!

ಇಂದಿರಾ ಕ್ಯಾಂಟೀನ್‌ಗಳಲ್ಲಿ ಪಾರ್ಸೆಲ್‌ಗೆ ಅವಕಾಶವಿಲ್ಲದಿದ್ದರೂ ₹11.59 ಲಕ್ಷವನ್ನು ಬೊಮ್ಮನಹಳ್ಳಿ ವಲಯದ ಹಣಕಾಸು ವಿಭಾಗದ ಉಪ ನಿಯಂತ್ರಕರು ರಿವಾರ್ಡ್ಸ್ ಎಂಬ ಸಂಸ್ಥೆಗೆ ಜಿಎಸ್‌ಟಿ ಸೇರಿದಂತೆ ಹಣ ಪಾವತಿಸಿದ್ದಾರೆ. ಟೆಂಡರ್ ಕರಾರು ಒಪ್ಪಂದ ಮತ್ತು ಕಾರ್ಯಾದೇಶದಲ್ಲೂ ಪಾರ್ಸಲ್ ಶುಲ್ಕ ಪಾವತಿಸಲು ಅವಕಾಶವಿಲ್ಲ.

## ಸುದ್ದಿ 2 ನಿಮಿಷ

### ಸೆಕ್ಯೂರಿಟಿ ಗಾರ್ಡ್‌ಗಳ ಅಪಹರಿಸಿ ಸುಲಿಗೆ: ಇಬ್ಬರ ಬಂಧನ

**ಬೆಂಗಳೂರು:** ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳನ್ನು ಅಪಹರಿಸಿ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಿಳ್ಳಣ್ಣ ಗಾರ್ಡನ್ ನಿವಾಸಿ ಮೊಹಮ್ಮದ್ ತೌಹಿದ್(26), ಶ್ಯಾಂಪುರ ಮುಖ್ಯರಸ್ತೆ ಮೊಹಮ್ಮದ್ ವಾಹಿದ್ ಅಲಿಯಾಸ್ ಸ್ನೇಕ್ ವಾಹಿದ್ (23) ಬಂಧಿತರು.

ಬಂಧಿತರಿಂದ ಎರಡು ಬೈಕ್, ಐದು ಮೊಬೈಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.



ಬೈಕ್‌ನಲ್ಲಿ ಹೋಗುತ್ತಿದ್ದ ಅಸ್ಸಾಂನ ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳನ್ನು ಮತ್ತೊಂದು ಬೈಕ್‌ನಲ್ಲಿ ಬಂದ ಆರೋಪಿಗಳು ಅಡ್ಡಗಟ್ಟಿ ಮಾರಕಾಸ್ತ್ರ ತೋರಿಸಿ ಅವರನ್ನು ಅಪಹರಣ ಮಾಡಿದ್ದರು. ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದೊಯ್ದು ದಿಗ್ಬಂಧನ ವಿಧಿಸಿದ್ದರು. ಬಳಿಕ ಅವರಿಂದ ಮೊಬೈಲ್, ನಗದು, ಬೈಕ್ ಕಳವು ಮಾಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಚಿಕನ್ ಅಂಗಡಿಯೊಂದರಲ್ಲಿ ಆರೋಪಿಗಳು ಕೆಲಸ ಮಾಡುತ್ತಿದ್ದರು. ವಿಲಾಸಿ ಜೀವನಕ್ಕಾಗಿ ಕೃತ್ಯ ಎಸಗಿರುವುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

### ಸುಲಿಗೆ ಪ್ರಕರಣ : 7 ಮಂದಿ ಸೆರೆ

**ಬೆಂಗಳೂರು:** ಹೆಣ್ಣೂರು ಠಾಣಾ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ಸುಲಿಗೆ ಪ್ರಕರಣಗಳಲ್ಲಿ ಏಳು ಮಂದಿಯನ್ನು ಬಂಧಿಸಲಾಗಿದೆ.

ಮನೆಗೆ ನುಗ್ಗಿ ಮಾಲೀಕರ ಮೇಲೆ ಹಲ್ಲೆ ನಡೆಸಿ ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ದರೋಡೆ ಮಾಡಿದ್ದ ಕೆ.ಜಿ.ಹಳ್ಳಿ ನಿವಾಸಿಗಳಾದ ಸೈಯದ್ ಫುರ್ಕನ್ ಅಹಮದ್(32), ಫ್ರೇಜರ್ ಟೌನ್ ನಿವಾಸಿ ಮೊಹಮ್ಮದ್ ಜುಬೈರ್(26), ಆರ್.ಟಿ.ನಗರ ನಿವಾಸಿ ಕೃತಿಕ್ ಪ್ರೀತಂ(24) ಮತ್ತು ಎಚ್‌ಬಿಆರ್ ಲೇಔಟ್ ನಿವಾಸಿ ಪ್ರಶಾಂತ್ (24) ಎಂಬುವವರನ್ನು ಬಂಧಿಸಲಾಗಿದೆ. ಆರೋಪಿಗಳಿಂದ 5 ಮೊಬೈಲ್, 2 ಬೈಕ್ ಜಪ್ತಿ ಮಾಡಲಾಗಿದೆ.

ಜೂನ್ 5ರಂದು ಮುಂಜಾನೆ 6.30ರ ಸುಮಾರಿಗೆ ಆರೋಪಿಗಳು ತುಸಾರಕ್ ಎಂ. ಸಂಗಮಾ ಎಂಬುವವರ ಮನೆಗೆ ನುಗ್ಗಿ ಹಲ್ಲೆ ನಡೆಸಿ ಸುಲಿಗೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

**ಮೂವರ ಬಂಧನ:** ಮತ್ತೊಂದು ಪ್ರಕರಣದಲ್ಲಿ ಕೆಲಸಕ್ಕೆ ಹೋಗುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಕಲಾಸಿಪಾಳ್ಯ ನಿವಾಸಿ ಮೊಹಮ್ಮದ್ ಶಾಹೀದ್(22), ಯೂನುಸ್ ಪಾಷಾ (21), ಸಿದ್ದಯ್ಯ ರಸ್ತೆ ಸೈಯದ್ ಫಾರ್ಹನ್ ಪಾಷಾ(20) ಬಂಧಿತರು. ಆರೋಪಿಗಳಿಂದ ಒಂದು ಬೈಕ್, ಒಂದು ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದರು.


ಆರೋಪಿಗಳು ಜೂನ್ 11ರಂದು ಎಚ್‌ಬಿಆರ್ ಲೇಔಟ್‌ನಲ್ಲಿ ಹೋಗುತ್ತಿದ್ದಾಗ ಪನ್ನೀರ್ ಸೆಲ್ವಂ ಎಂಬವರನ್ನು ಅಡ್ಡಗಟ್ಟಿ, ಮೊಬೈಲ್ ಕಸಿದು ಪರಾರಿ ಆಗಿದ್ದರು. ಸೆಲ್ವಂ ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

## ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ, ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

### ಉಪನಗರಗಳಿಗೆ ಮರುಜೀವ ನೀಡಿ



ಆಡಳಿತಾತ್ಮಕವಾಗಿ ಬೆಂಗಳೂರನ್ನು ನಾಲ್ಕೈದು ಹೋಳು ಮಾಡುವುದರಿಂದ 'ಕೆಂಪೇಗೌಡರ ಬೆಂಗಳೂರು' ಎಂಬ ಭಾವನೆಗೆ ಧಕ್ಕೆಯಾಗಲಿದೆ. ಕೇಂದ್ರ ಬೆಂಗಳೂರನ್ನು ಹಾಗೆಯೇ ಉಳಿಸಿಕೊಂಡು, ಎರಡು–ಮೂರು ನಗರಸಭೆಗಳಿಗೆ ಮತ್ತೆ ಜೀವನೀಡಿ. ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು-ಕನಕಪುರ ರಸ್ತೆಯ ಆಜೂಬಾಜಿನ ಪ್ರದೇಶಗಳ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ನೂತನವಾಗಿ ತಲಘಟ್ಟಪುರ ನಗರಸಭೆ ರಚಿಸಿದಲ್ಲಿ ಸಮಗ್ರ ಬೆಂಗಳೂರಿನ ಅಭಿವೃದ್ಧಿಗೆ ಸೂಕ್ತ ಪರಿಹಾರ ದೊರೆಯಲಿದೆ.

**ರಾ. ಜಯಸಿಂಹ,** ತಲಘಟ್ಟಪುರ

### ಶೀಘ್ರವೇ ಚುನಾವಣೆ ನಡೆಸಿ



ಪ್ರಜಾಪ್ರಭುತ್ವ ಆಶಯದಂತೆ ಅತಿ ಶೀಘ್ರದಲ್ಲಿ ಪಾಲಿಕೆ ಚುನಾವಣೆ ನಡೆಸುವುದು ಒಳ್ಳೆಯದು. ಪಾಲಿಕೆ ಚುನಾಯಿತ ಪ್ರತಿನಿಧಿಗೆ ಪ್ರತಿ ರಸ್ತೆಯ ವ್ಯಕ್ತಿ ಸಮಸ್ಯೆಯ ಬಗ್ಗೆ ಅರಿವಿರುತ್ತದೆ. ಅದಕ್ಕೆ ಸ್ಪಂದಿಸಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಚುನಾಯಿತ ಶಾಸಕರಿಗೆ ಕ್ಷೇತ್ರ ವ್ಯಾಪ್ತಿ ದೊಡ್ಡದಾಗಿರುತ್ತದೆ. ಆದ್ದರಿಂದ ಶೀಘ್ರದಲ್ಲೇ ಪಾಲಿಕೆಗೆ ಚುನಾವಣೆ ನಡೆಸುವುದು ಒಳ್ಳೆಯದು.

**ಜಯರಾಮಯ್ಯ,** ಬಾಲಾಜಿನಗರ ನಾಗರಿಕರ ಹಿತರಕ್ಷಣಾ ವೇದಿಕೆ

### ವಿಭಜನೆ ಚಿಂತನೆ ಬಿಡಿ



ಪಾಲಿಕೆಯನ್ನು ವಿಭಜನೆ ಮಾಡಿದರೆ ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಕನಸು ನನಸಾಗುವುದಿಲ್ಲ. ಬೆಂಗಳೂರು ಮಹಾನಗರ ಇಡೀ ದೇಶದಲ್ಲೇ ಒಂದು ದೊಡ್ಡ ಸ್ಥಾನವನ್ನು ಪಡೆದುಕೊಂಡಿದೆ. ಬಿಬಿಎಂಪಿ ಅಧಿಕಾರಿಗಳಿಗೆ ಬೆಂಗಳೂರಿನ ಇತಿಹಾಸ ಗೊತ್ತಿಲ್ಲ. ಈ ಅಧಿಕಾರಿಗಳು ದಿಢೀರನೆ ಐದು ಪಾಲಿಕೆಯನ್ನಾಗಿ ಮಾಡೋದು ಸರಿ ಇಲ್ಲ. ವಿಭಜಿಸುವ ಚಿಂತನೆಯನ್ನು ಬಿಡಬೇಕು.

**ಗೋ. ಮೂರ್ತಿ ಯಾದವ್,** ಗೋವಿಂದರಾಜ ನಗರ

### ಚುನಾವಣೆ ಇಲ್ಲದ ಸ್ಥಿತಿ ಖೇದಕರ



ಪಾಲಿಕೆಗೆ ಚುನಾವಣೆ ನಡೆಸಲು ನಾಲ್ಕು ವರ್ಷಗಳಿಂದ ಆಡಳಿತಾರೂಢ ಸರ್ಕಾರಗಳಿಗೆ ಅಸಾಧ್ಯವಾದ ಕಾರಣಗಳೇನು ಎಂಬುದು ಇಂದಿಗೂ ಅರ್ಥವಾಗದ ಕಗ್ಗಂಟು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲಿಕೆಯನ್ನು ಜನಪ್ರತಿನಿಧಿಗಳಿಲ್ಲದೆ ಇಷ್ಟೊಂದು ದೀರ್ಘಕಾಲ ಹಾಗೆಯೇ ಉಳಿಸಿಕೊಂಡಿರುವ ಈ ಪರಿಸ್ಥಿತಿ ಖೇದಕರ.

ಅಂತೆಯೇ ಪಾಲಿಕೆಯ ವಿಭಜನೆಯು ಸರ್ವಥಾ ಸಲ್ಲದು. ಇಡೀ ನಗರ ಪಾಲಿಕೆಯ ಆಡಳಿತ ವ್ಯವಸ್ಥೆಯು ಒಂದೇ ಸೂರಿನಡಿ ನಡೆಯಬೇಕು. ಇದರಿಂದ ನಮ್ಮ ಭಾಷೆ, ಸಂಸ್ಕೃತಿ, ನಮ್ಮತನ, ಕಸ್ತೂರಿ ಕನ್ನಡದ ಅಸ್ಮಿತೆ. ಇವುಗಳ ಜತನ ಹಾಗೂ ಸಂರಕ್ಷಣೆ ಸಾಧ್ಯ.

**ಎನ್.ಕೃಷ್ಣಪ್ಪ, ಜೆ.ಸಿ ನಗರ,** ಕುರುಬರಹಳ್ಳಿ

### ಮಾರಕವಲ್ಲದೆ ಮತ್ತೇನು?



ಕಾನೂನಿನ ವಿಚಾರ ಮುಂದಿಟ್ಟುಕೊಂಡು ಆಡಳಿತ ನಡೆಸುವ ಸರ್ಕಾರಗಳು ಬಿಬಿಎಂಪಿ ಚುನಾವಣೆ ಯಾವಾಗ ಎಂಬ ವಿಚಾರವನ್ನು ಜನಸಾಮಾನ್ಯರಲ್ಲಿ ಚರ್ಚೆ ಮಾಡಲು ಬಿಟ್ಟಿರುವುದು ಸರಿಯಾದ ಪ್ರಜಾ-ಪ್ರಭುತ್ವ ವ್ಯವಸ್ಥೆಗೆ ಮಾರಕವಲ್ಲದೆ ಮತ್ತೇನು? ಸರ್ಕಾರ ಎಷ್ಟಾದರೂ ವಿಭಜನೆ ಮಾಡಲಿ, ಅದರಿಂದ ಯಾರಿಗೆ ಪ್ರಯೋಜನ? ವಿಭಜನೆ ಮಾಡಲು ಹೊರಟರೆ ಶಾಸಕ ಹಾಗೂ ಪೊಲೀಸ್ ಠಾಣೆ ವ್ಯಾಪ್ತಿಯ ಲೆಕ್ಕಾಚಾರ ಹೇಗೆ? ಮೊದಲು ಚುನಾವಣೆ ಮಾಡಿ. ಆಮೇಲೆ ಸ್ಥಳೀಯಮಟ್ಟದಲ್ಲಿ ಜನಭಿಪ್ರಾಯ ಪಡೆದು ಮುಂದುವರಿಯಿರಿ.

**ಎಂ. ಶ್ರೀನಿವಾಸ್ ಕುಮಾರ್,** ಟಿ ದಾಸರಹಳ್ಳಿ

### 'ಹೊಸ ಬೆಂಗಳೂರು' ಮಾಡಿ



ಬಿಬಿಎಂಪಿಗೆ ಚುನಾವಣೆ ಕೂಡಲೇ ನಡೆಸಬೇಕು. ಆದರೆ, ಪಾಲಿಕೆಯನ್ನು ನಾಲ್ಕು ಭಾಗವಾಗಿ ವಿಂಗಡಿಸಿ, ಜಲಮಂಡಳಿ, ಬೆಸ್ಕಾಂ ಸೇರಿದಂತೆ ಎಲ್ಲ ಇಲಾಖೆಗಳನ್ನೂ ಒಂದೇ ಸೂರಿನಡಿ ಸೇರಿಸಿ. ಈ ಎಲ್ಲಾ ಇಲಾಖೆಗಳು ಒಂದೇ ಕಡೆಯಿದ್ದರೆ ತಮ್ಮ ಕಾಮಗಾರಿಗಳಿಗೆ ರಸ್ತೆಗಳನ್ನು ಅಗೆದು ಮುಚ್ಚುವುದಕ್ಕೆ ಒಬ್ಬರ ಮೇಲೆ ಒಬ್ಬರು ಆರೋಪ ಮಾಡುವುದಿಲ್ಲ. ಸಾಧ್ಯವಾದರೆ, ಯಲಹಂಕದಿಂದ ದೇವನಹಳ್ಳಿಯವರೆಗಿನ ವ್ಯಾಪ್ತಿಯನ್ನು 'ಹೊಸ ಬೆಂಗಳೂರು' ಎಂದು ಘೋಷಣೆ ಮಾಡಿ.

**ಸಿ. ಮುರಳಿಧರ್, ವೆಂಕಟಾಲ,** ಯಲಹಂಕ




### ಆರ್ಥಿಕ ಹೊರೆಯೇ ಹೆಚ್ಚು



ರಾಜ್ಯದಲ್ಲಿ ನಾಲ್ಕೂ ವಿಭಾಗಗಳಲ್ಲಿದ್ದ 'ಡೆವಲಪ್‌ಮೆಂಟ್ ಕಮಿಷನರ್' ಹುದ್ದೆಗಳನ್ನು ಅನವಶ್ಯಕ ಖರ್ಚು ಎಂದು ಸರ್ಕಾರ ಪರಿಗಣಿಸಿ ತೆಗೆದುಹಾಕಿತ್ತು.

ಈಗ ಇರುವ ಒಂದು ಬಿಬಿಎಂಪಿಯನ್ನು ನಾಲ್ಕು ಅಥವಾ ಐದು ಎಂದು ವಿಭಜನೆ ಮಾಡಿ, ಒಬ್ಬರಿರುವ ಮುಖ್ಯ ಆಯುಕ್ತರ ಬದಲು ನಾಲ್ಕೈದು ಅಧಿಕಾರಿ-ಗಳನ್ನು ನೇಮಿಸಿದರೆ ಆರ್ಥಿಕ ಹೊರೆಯೇ ಹೆಚ್ಚು. ಚುನಾವಣೆ ನಡೆಸಿದರೆ ಜನಪ್ರತಿನಿಧಿಗಳು ಆಯ್ಕೆಯಾಗಿ ಕಚೇರಿಯಲ್ಲೇ ಕುಳಿತು ಅಧಿಕಾರ ನಡೆಸುವ ಅಧಿಕಾರಿಗಳಿಗೆ ಚಾಟಿ ಬೀಸಿ, ಅಗತ್ಯ ಕೆಲಸಗಳನ್ನು ತ್ವರಿತವಾಗಿ ಮಾಡಿಸಬಹುದು.

**ಎಂ.ಎನ್. ಅನಂತಮೂರ್ತಿ**
ಸಪ್ತಗಿರಿ ರೆಸಿಡೆನ್ಸಿ, ಅಕ್ಷಯ ನಗರ ಪೂರ್ವ

## ನವವಿವಾಹಿತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಕೋಲಾರ:** ತಾಲ್ಲೂಕಿನ ಅರಾಭಿ ಕೊತ್ತನೂರು ಗ್ರಾಮದ ತಮ್ಮ ನಿವಾಸದಲ್ಲಿ ನವವಿವಾಹಿತರೊಬ್ಬರು ಸೋಮವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇನ್ಫೊಸಿಸ್ ಉದ್ಯೋಗಿ ಹರೀಶ್ (28) ಮೃತ ವ್ಯಕ್ತಿ. ಒಂದೂವರೆ ತಿಂಗಳ ಹಿಂದೆಯಷ್ಟೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ಯುವತಿಯನ್ನು ಅವರು ವಿವಾಹವಾಗಿದ್ದರು.

ಮನೆಯಿಂದಲೇ ಕೆಲಸದಲ್ಲಿ (ವರ್ಕ್ ಫ್ರಂ ಹೋಂ) ತೊಡಗಿದ್ದ ಹರೀಶ್ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ.

## ಬೆಕ್ಕಿಗೆ ಹಾಲು ಹಾಕಲು ಕೀ ಪಡೆದು ಚಿನ್ನಾಭರಣ ಕಳವು!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಕ್ಕಿಗೆ ಹಾಲು ಹಾಕಲೆಂದು ಪಕ್ಕದ ಮನೆಯ ಕೀ ಪಡೆದುಕೊಂಡಿದ್ದ ಯುವಕ ಅದೇ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ.

ಜಯನಗರ ನಿವಾಸಿ ವೆಂಕಟೇಶ್(23) ಬಂಧಿತ.

ಆರೋಪಿಯಿಂದ ₹80 ಸಾವಿರ ಮೌಲ್ಯದ 10 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.


ವೆಂಕಟೇಶ್

'ಜಯನಗರದ 7ನೇ ಬ್ಲಾಕ್‌ನಲ್ಲಿ ದೂರುದಾರರು ವಾಸವಾಗಿದ್ದು ಅವರ ಮನೆ ಪಕ್ಕದಲ್ಲೇ ಆರೋಪಿ ಕೂಡ ವಾಸವಾಗಿದ್ದ. ಇಬ್ಬರಿಗೂ ಪರಿಚಯವಿತ್ತು. ಆರೋಪಿ ಕಾರು ವಾಷಿಂಗ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ. ಜೂನ್ 9ರಂದು ದೂರುದಾರರು ಬೇರೆ ಊರಿಗೆ ತೆರಳಿದ್ದರು. ಆಗ, ಮನೆಯ ಕೀ ಪಡೆದುಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಪಕ್ಕದ ಮನೆಯಲ್ಲಿ ಸಾಕಿದ್ದ ಬೆಕ್ಕಿಗೆ ಹಾಲು ಹಾಕಲು ತೆರಳಿದ್ದ ಆರೋಪಿ, ಬೀರುವಿನಲ್ಲಿಟ್ಟಿದ್ದ ಚಿನ್ನದ ಸರ ಕಳವು ಮಾಡಿದ್ದ. ಜೂನ್ 12ರಂದು ದೂರುದಾರರು ವಾಪಸ್ ಮನೆಗೆ ಬಂದಾಗ ಬೀರುವಿನಲ್ಲಿ ಇಟ್ಟಿದ್ದ ಸರ ಕಳ್ಳತನವಾಗಿರುವುದು ಗೊತ್ತಾಗಿತ್ತು. ಅವರು ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿ ವಿಚಾರಣೆಯ ಆರಂಭದಲ್ಲಿ ಕಳ್ಳತನ ಮಾಡಿಲ್ಲ ಎಂದು ಹೇಳಿದ್ದ. ಆದರೆ, ಆತನ ಮೊಬೈಲ್ ವಶಕ್ಕೆ ಪಡೆದುಕೊಂಡು ಪರಿಶೀಲಿಸಿದಾಗ, ಚಿನ್ನಾಭರಣ ಅಡಮಾನ ಇಟ್ಟಿರುವ ರಶೀದಿ ಪತ್ತೆಯಾಗಿತ್ತು. ಅದನ್ನು ತೋರಿಸಿ ಪ್ರಶ್ನಿಸಿದಾಗ ಆರ್ಥಿಕ ಸಮಸ್ಯೆ ಇತ್ತು. ಹೀಗಾಗಿ, ಒಮ್ಮೆ ಬೆಕ್ಕಿಗೆ ಹಾಲು ಹಾಕಲು ಹೋದಾಗ ಮನೆಯ ಎಲ್ಲೆಡೆ ಗಮನಿಸಿದ್ದೆ. ಆಗ ಬೀರುವಿನಲ್ಲಿ ಏನಾದರೂ ಇರಬಹುದು ಎಂದು ಕುತೂಹಲಗೊಂಡು ಬೀರು ತೆರೆದಿದ್ದೆ. ಆಗ ಚಿನ್ನದ ಸರ ಸಿಕ್ಕಿತ್ತು ಎಂದು ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ಪರಿಸರ ಪ್ರಜ್ಞೆ ಮಾಸ' ಕಾರ್ಯಕ್ರಮದಲ್ಲಿ ಸಚಿವ

## ಎಲ್ಲರಿಗೂ ಬೇಕು ಪರಿಸರ ಜಾಗೃತಿ

ಪ್ರಜಾವಾಣಿ ವಾರ್ತೆ

**ಯಲಹಂಕ:** 'ಗಿಡ ನೆಡುವುದರ ಜೊತೆಗೆ ಜನರಲ್ಲಿ ಪರಿಸರದ ಬಗ್ಗೆ ಜಾಗೃತಿ ಮತ್ತು ಕಾಳಜಿ ಮೂಡಿದರೆ ಸಹಜವಾಗಿಯೇ ಪರಿಸರ ರಕ್ಷಣೆಯಾಗುತ್ತದೆ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

ಪರಿಸರ ಪ್ರಜ್ಞೆಯ ಮಾಸದ ಪ್ರಯುಕ್ತ ಬಿಬಿಎಂಪಿ ಅರಣ್ಯ ವಿಭಾಗದ ಸಹಯೋಗದೊಂದಿಗೆ ಬ್ಯಾಟರಾಯನಪುರ ಕ್ಷೇತ್ರದ ರಾಚೇನಹಳ್ಳಿ ಕೆರೆ ಆವರಣದಲ್ಲಿ ಆಯೋಜಿಸಿದ್ದ ಗಿಡನೆಡುವ ಕಾರ್ಯಕ್ರಮಕ್ಕೆ ಚಾಲನೆನೀಡಿ ಅವರು ಮಾತನಾಡಿದರು.

ಕ್ಷೇತ್ರದ ನಾಗರಿಕರು ಹಾಗೂ ಕೆರೆ ಸುತ್ತಮುತ್ತಲ ಅಪಾರ್ಟ್‌ಮೆಂಟ್ ನಿವಾಸಿಗಳ ಜೊತೆಗೂಡಿ, ಈ ತಿಂಗಳುಪೂರ್ತಿ ಪರಿಸರ ಜಾಗೃತಿ ಮಾಹೆಯಾಗಿ ಆಚರಣೆ ಮಾಡಲು ನಿರ್ಧರಿಸಲಾಗಿದೆ. ಇದರಲ್ಲಿ ನಾಗರಿಕರು ಹಾಗೂ ವಿಶೇಷವಾಗಿ ಮಕ್ಕಳನ್ನು ತೊಡಗಿಸಿಕೊಂಡು ಗಿಡನೆಡುವ ಮತ್ತು ಸ್ವಚ್ಛತೆ ಸೇರಿದಂತೆ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾಡಲಾಗುವುದು ಎಂದರು.


ರಾಚೇನಹಳ್ಳಿ ಕೆರೆ ಆವರಣದಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳು ಹಾಗೂ ಮಕ್ಕಳ ಜೊತೆಗೂಡಿ ಸಚಿವ ಕೃಷ್ಣಬೈರೇಗೌಡ ಗಿಡನೆಟ್ಟು ನೀರು ಹಾಕಿದರು

ಒಟ್ಟಾರೆ ಪರಿಸರ ಚೆನ್ನಾಗಿರಬೇಕೆಂಬುದು ಈ ಅಭಿಯಾನದ ಉದ್ದೇಶ. ರಾಚೇನಹಳ್ಳಿ ಕೆರೆ ಸುತ್ತಮು-ತ್ತಲಿನ ಅಪಾರ್ಟ್‌ಮೆಂಟ್ ನಿವಾಸಿಗಳ ಸಹಕಾರದೊಂದಿಗೆ ಗಿಡ ನೆಡುವ ಕಾರ್ಯಕ್ರಮ ನಡೆಯುತ್ತಿದೆ. ನಾಲ್ಕು ವಾರಗಳು ಸತತವಾಗಿ ಈ ಕಾರ್ಯ ನಡೆಯಲಿದೆ. ಕ್ಷೇತ್ರವ್ಯಾಪ್ತಿಯ ಕೆರೆಗಳೂ ಸೇರಿದಂತೆ ಬೇರೆ ಬೇರೆ ಪ್ರದೇಶಗಳಲ್ಲಿ ಕನಿಷ್ಠ 50 ಸಾವಿರ ಗಿಡಗಳನ್ನು ನೆಡಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ರಾಜ್ಯಸಭೆ ಮಾಜಿ ಸದಸ್ಯ ಪ್ರೊ.ಎಂ.ವಿ.ರಾಜೀವ್‌ಗೌಡ, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಬಿಬಿಎಂಪಿ ಉಪಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ.ಸ್ವಾಮಿ, ಉತ್ತರ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಡಿ.ಸುರೇಶ್, ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ.ಜಯಗೋಪಾಲ ಗೌಡ, ಡಿ.ಬಿ.ಸುರೇಶ್ ಗೌಡ, ಪಳನಿ ವೆಂಕಟೇಶ್, ಕೆ.ಗೌರೀಶ್, ಎಚ್.ಎ. ಶಿವಕುಮಾರ್, ನವೀನ್‌ಕುಮಾರ್, ಡಿ.ಆರ್.ಮುನಿರಾಜು ಉಪಸ್ಥಿತರಿದ್ದರು.

### ರೈಲಿಗೆ ಸಿಲುಕಿ ಯುವತಿ ಆತ್ಮಹತ್ಯೆ

**ಮಾಲೂರು:** ರೈಲಿಗೆ ಸಿಲುಕಿ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ಪಟ್ಟಣದ ರೈಲ್ವೆ ಸೇತುವೆ ಬಳಿ ನಡೆದಿದೆ.

ತಾಲ್ಲೂಕಿನ ಕಸಬಾ ಹೋಬಳಿಯ ಅರಳೇರಿ ಗ್ರಾಮದ ಸಂಧ್ಯಾ (22) ಮೃತ ಯುವತಿ ಎಂದು ಗುರುತಿಸಲಾಗಿದೆ.

ನಿಧನ ವಾರ್ತೆ

### ಶಿವಾನಂದ ಎಚ್. ಇಳಿಗೇರ

**ಬೆಂಗಳೂರು :** ಅಬಕಾರಿ ಇಲಾಖೆಯ ನಿವೃತ್ತ ಅಧಿಕಾರಿ ಶಿವಾನಂದ ಎಚ್. ಇಳಿಗೇರ (80) ಅವರು ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು. ಮೃತರಿಗೆ ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರಿದ್ದಾರೆ.


ಶಿವಾನಂದ ಎಚ್. ಇಳಿಗೇರ

ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2.30ಕ್ಕೆ ಹುಬ್ಬಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಚನ ಗಾನಯಾನ ಸಮಾರೋಪ ಸಮಾರಂಭ

## 'ವಚನಗಳು ಅಂತರಂಗದ ಬೆಳಕು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವಚನಗಳು ಅಂತರಂಗದ ಬೆಳಕಾಗಿದ್ದು, ಬದುಕನ್ನು ನಡೆಸಲು ಮಾರ್ಗದರ್ಶಿಯವಾಗಿವೆ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ಪ್ರಪುಣ್ಯ - ವಚನಜ್ಯೋತಿ ಬಳಗ ಆಯೋಜಿಸಿದ್ದ 'ವಚನ ಗಾನಯಾನ -5'ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಅತ್ಯಂತ ಸರಳವಾಗಿ ಮನಕ್ಕೆ ಮುಟ್ಟುವಂತೆ ಬಸವಣ್ಣನವರು ಮತ್ತು ಇತರ ವಚನಕಾರರು ನಮಗೆ ನೀಡಿರುವ ವಚನಗಳು ಕನ್ನಡದ ಅಮೂಲ್ಯ ಸಂಪತ್ತು. ವಚನ ಗಾನಯಾನದ ಮೂಲಕ ವಿದ್ಯಾರ್ಥಿಗಳಿಗೆ ವಚನಗಳನ್ನು ಕಲಿಸಿ ಹಾಡಿಸುತ್ತಿರುವುದು ಉತ್ತಮ ಬೆಳವಣಿಗೆ' ಎಂದು ಹೇಳಿದರು.

'ಬಸವಣ್ಣ ಮಹಾದೇವಿ ಯಕ್ಕನಿಗೆ ಸೀಮಿತವಾಗದೆ ಉರಿಲಿಂಗಪೆದ್ದಿ, ಉಳಿಯುಮೇಶ್ವರ ಚಿಕ್ಕಣ್ಣ ಮೊದಲಾದವರ ವಚನಗಳನ್ನು ಕಲಿಸಿರುವ ಈರಯ್ಯ ಚಿಕ್ಕಮಠರು ಪ್ರಶಂಸಾರ್ಹರು' ಎಂದು ಬಣ್ಣಿಸಿದರು.


ವಚನ ಗೀತಯಾನ–5ರ ಸಮಾರೋಪದಲ್ಲಿ ಶಿಬಿರಾರ್ಥಿಗಳೊಂದಿಗೆ ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ, ಗೌರವಾಧ್ಯಕ್ಷ ಮಹೇಶ ಬೆಲ್ಲದ, ಪ್ರಪುಣ್ಯ ಸಂಗೀತ ಶಾಲೆಯ ಈರಯ್ಯ ಚಿಕ್ಕಮಠ, ವಚನಾಭಿಮಾನಿ ಶಶಿ ವಿಶ್ವನಾಥ್, ಕಾಂಗ್ರೆಸ್ ಮುಖಂಡ ಎಂ.ನಂಜಪ್ಪ ಪಾಲ್ಗೊಂಡಿದ್ದರು

ಪ್ರಪುಣ್ಯ ಸಂಗೀತ ಶಾಲೆಯ ಈರಯ್ಯ ಚಿಕ್ಕಮಠರು ಮಾತನಾಡಿ, 'ಕೋವಿಡ್ ಸಮಯದಲ್ಲಿ ಆರಂಭವಾದ ವಚನ ಗೀತಯಾನ ಇದೀಗ ಐದನೇ ವರ್ಷಕ್ಕೆ ಕಾಲಿಟ್ಟಿದೆ' ಎಂದು ಹೇಳಿದರು.

ವಚನಜ್ಯೋತಿ ಬಳಗದ ಗೌರವಾಧ್ಯಕ್ಷ ಮಹೇಶ ಬೆಲ್ಲದ್, ಬಳಗದ ಶಶಿ ವಿಶ್ವನಾಥ್, ಕಾಂಗ್ರೆಸ್ ಮುಖಂಡ ಎಂ. ನಂಜಪ್ಪ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರ ವಿತರಿಸಿದರು.

ಬಾಲಪ್ರತಿಭೆಗಳಾದ ಪೂರ್ಣಿಕ, ಪ್ರಪುಣ್ಯ, ವೇದಾಂತ್, ಸನ್ನಿಧಿ, ಗಾನಶ್ರೀ ಸೇರಿದಂತೆ ಹಿರಿಯ ವಿದ್ಯಾರ್ಥಿಗಳಾದ ಕೆಂಪರಾಜು, ಉಮೇಶ್, ಅಕ್ಷತಾ, ವಿಜಯಲಕ್ಷ್ಮಿ, ಭಾಗ್ಯ ಅವರು ವಚನ ಸುಧೆ ಹರಿಸಿದರು.

ಗಾಯಕಿ ಟಿ.ಎಂ. ಜಾನಕಿ, ಉಮೇಶ್ ಆರಾಧ್ಯ, ನಿಶಾ, ಚಂದ್ರಶೇಖರ್, ಕೇಶವಮೂರ್ತಿ ಉಪಸ್ಥಿತರಿದ್ದರು.

### ನಗರದಲ್ಲಿ ಇಂದು

**'ನೀರಿನ ಭದ್ರತೆಗಾಗಿ ಸುಸ್ಥಿರ ಅಂತರ್ಜಲ ನಿರ್ವಹಣೆ' ಕುರಿತು ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ:** ಉದ್ಘಾಟನೆ: ಎನ್.ಎಸ್. ಭೋಸರಾಜು, ಅತಿಥಿಗಳು: ಶೈಲೇಶ್ ನಾಯಕ್, ಪವನ್ ಕುಮಾರ್ ಮಾಲಪಾಟಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ, ಬೆಳಿಗ್ಗೆ 10.30

**ಘಟಿಕೋತ್ಸವ:** ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ಸಿ. ರಂಗರಾಜನ್, ಎನ್. ಆರ್. ಭಾನುಮೂರ್ತಿ, ಆಯೋಜನೆ ಮತ್ತು ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ, ಜ್ಞಾನಭಾರತಿ ಮುಖ್ಯರಸ್ತೆ, ನಾಗರಬಾವಿ, ಬೆಳಿಗ್ಗೆ 11.30

**ಚಾಣಕ್ಯ ಸುಸ್ಥಿರತೆ ಕೇಂದ್ರದ ಉದ್ಘಾಟನೆ:** ಪ್ರಶಾಂತ್ ಪ್ರಕಾಶ್, ನಿತಿನ್ ಕಾಮತ್, ಅತಿಥಿಗಳು: ಹರಿ ಕೆ. ಮರಾರ್, ಸುಬ್ಬಣ್ಣ ಅಯ್ಯಪ್ಪನ್, ಅಧ್ಯಕ್ಷತೆ: ಎಂ.ಕೆ. ಶ್ರೀಧರ್, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಮಧ್ಯಾಹ್ನ 3.45

**ವೃತ್ತಿ ಕೌಶಲ್ಯ ತರಬೇತಿ ಪೂರೈಸಿದ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ:** ಅತಿಥಿಗಳು: ಉದಯ ಭಾಸ್ಕರ್, ಎಚ್.ಆರ್. ಶಿವಕುಮಾರ್, ಎಂ.ಆರ್. ಲೋಕನಾಥ್, ಎ.ಬಿ. ಗಂಗಾಧರಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

**ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.**
nagaradalli_indu@prajavani.co.in

## ಬಂಡೆ ಉರುಳಿ ಚಾಲಕ ಸಾವು

ಪ್ರಜಾವಾಣಿ ವಾರ್ತೆ

**ಟೇಕಲ್ (ಮಾಲೂರು):** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಹಳೇಪಾಳ್ಯ ಗ್ರಾಮದ ಬಳಿ ಮಂಗಳವಾರ ಕಲ್ಲು ಬಂಡೆ ಒಡೆಯುವ ಸಂದರ್ಭದಲ್ಲಿ ಹಿಟಾಚಿ ಮೇಲೆ ಬೃಹತ್ ಕಲ್ಲು ಬಂಡೆ ಬಿದ್ದು ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆಜಿಎಫ್ ತಾಲ್ಲೂಕಿನ ಕ್ಯಾಸಂಬಳ್ಳಿ ಗ್ರಾಮದ ಪ್ರವೀಣ್ (32) ಮೃತ ಚಾಲಕ ಎಂದು ಗುರುತಿಸಲಾಗಿದೆ. ಟ್ರ್ಯಾಕ್ಟರ್ ಮೇಲೂ ಬಂಡೆ ಉರುಳಿದ್ದು, ಇತರ ಕಾರ್ಮಿಕರು ಸಿಲುಕಿಕೊಂಡಿರಬಹುದೆಂಬ ಶಂಕೆಯಿಂದ ಜೆಸಿಬಿ ಬಳಸಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು.

ಟೇಕಲ್ ವ್ಯಾಪ್ತಿಯ ಕೆ.ಜಿ.ಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಹಳೇಪಾಳ್ಯ ಗ್ರಾಮಕ್ಕೆ ಸೇರಿದ ಭೂತಮ್ಮ ಬೆಟ್ಟಕ್ಕೆ ಹೊಂದಿಕೊಂಡಿರುವ ಸರ್ವೆ ನಂ 53 ರಲ್ಲಿ ಅದೇ ಗ್ರಾಮದ ಮಂಜುನಾಥ್ ಎಂಬುವವರು ಕಲ್ಲು ಗಣಿಗಾರಿಕೆ ನಡಸುತ್ತಿದ್ದರು ಎಂಬುದು ಗೊತ್ತಾಗಿದೆ.


ಕೋಲಾರ ಜಿಲ್ಲೆಯ ಟೇಕಲ್ ಸಮೀಪ ಹಳೇಪಾಳ್ಯಬೆಟ್ಟದಲ್ಲಿ ಟ್ರ್ಯಾಕ್ಟರ್ ಮೇಲೆ ಬಂಡೆ ಉರುಳಿ ಬಿದ್ದಿರುವುದು

ಗೋಮಾಳ ಜಾಗವಾಗಿದ್ದು, ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಗುತ್ತಿಗೆಗೆ ಮಂಜೂರು ಮಾಡಿತ್ತು ಎನ್ನಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಮಾಸ್ತಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ಹಾಗೂ ಆರ್‌ಐ ನಾರಾಯಣಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪ್ರಕರಣ ದಾಖಲಿ-ಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

### ಮಳಿಗೆ ಖಾಲಿ ಮಾಡುವಂತೆ ನೋಟಿಸ್: ವ್ಯಾಪಾರಸ್ಥರ ವಿರೋಧ

# ಖಾಸಗಿಗೆ ಬಿಡಿಎ ಕಾಂಪ್ಲೆಕ್ಸ್

• ಲಿಂಗರಾಜು ಮಳವಳ್ಳಿ

**ಮುಖ್ಯಾಂಶಗಳು**

- ಐಷಾರಾಮಿ ಮಾಲ್ ನಿರ್ಮಿಸಲು ಬಿಡುವುದಿಲ್ಲ
- ಸರ್ಕಾರದ ನೆರವಿನಿಂದಲೇ ಅಭಿವೃದ್ಧಿಪಡಿಸಲಿ
- ಜನಾಭಿಪ್ರಾಯ ಕೇಳದೇ ತೀರ್ಮಾನ: ಆಕ್ಷೇಪ

**ಬೊಮ್ಮನಹಳ್ಳಿ:** ಕೋರಮಂಗಲದ ಬಿಡಿಎ ವಾಣಿಜ್ಯ ಸಂಕೀರ್ಣವನ್ನು ಮಾಲ್ ಆಗಿ ಪರಿವರ್ತಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಯಡಿ 'ಎಂ-ಫಾರ್ ಡೆವಪಲರ್ಸ್ ಪ್ರೈ. ಲಿ.,' ಕಂಪನಿಗೆ ಸರ್ಕಾರ ಗುತ್ತಿಗೆ ನೀಡಿದೆ. ಇದರನ್ವಯ ಮಳಿಗೆಗಳನ್ನು ಖಾಲಿ ಮಾಡುವಂತೆ ಅಂಗಡಿ ಮಾಲೀಕರಿಗೆ ನೋಟಿಸ್ ನೀಡಲಾಗಿದ್ದು, ಇದಕ್ಕೆ ವ್ಯಾಪಾರಸ್ಥರು ಹಾಗೂ ನಾಗರಿಕರಿಂದ ವಿರೋಧವ್ಯಕ್ತವಾಗಿದೆ.

ಪಿಪಿಪಿ ಯೋಜನೆಯಡಿ 70:30 ಅನುಪಾತದಲ್ಲಿ 30 ವರ್ಷ ಭೋಗ್ಯಕ್ಕೆ ನೀಡಲು ಕಂಪನಿಯೊಂದಿಗೆ ಕರಾರು ಒಪ್ಪಂದವಾಗಿದೆ. ಇದನ್ನು 60 ವರ್ಷದವರೆಗೆ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ. ಕಂಪನಿಯು ಬಿಡಿಎ ಕಾಂಪ್ಲೆಕ್ಸ್‌ಗಳನ್ನು ನೆಲಸಮಗೊಳಿಸಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುತ್ತದೆ. ಇದರಲ್ಲಿನ ಶೇ 30 ರಷ್ಟು ವಾಣಿಜ್ಯ ಮಳಿಗೆಗಳನ್ನು ಮಾತ್ರ ಸರ್ಕಾರಕ್ಕೆ ಬಿಟ್ಟುಕೊಡುತ್ತದೆ, ಉಳಿದ ಶೇ 70ರಷ್ಟು ಮಳಿಗೆಗಳನ್ನು ಖಾಸಗಿ ಸಂಸ್ಥೆಯೇ ಉಳಿಸಿಕೊಳ್ಳುವಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

'ಐಷಾರಾಮಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಿ, ಪ್ರತಿಯೊಂದಕ್ಕೂ ದುಬಾರಿ ದರ ನಿಗದಿ ಮಾಡುತ್ತಾರೆ. ಸಣ್ಣ ವ್ಯಾಪಾರಸ್ಥರು ಉದ್ಯೋಗ ಕಳೆದುಕೊಳ್ಳುತ್ತಾರೆ. ಇದರಿಂದ ಸಂಚಾರ ದಟ್ಟಣೆಯೂ ಹೆಚ್ಚಾಗುತ್ತದೆ. ಸರ್ಕಾರಕ್ಕೆ ಆದಾಯ ತರುವ ಆಸ್ತಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದರಿಂದ ಸರ್ಕಾರಕ್ಕೆ ಬರುವ ವರಮಾನ ನಿಲ್ಲುತ್ತದೆ. ಈ ಜನವಿರೋಧಿ ಕ್ರಮವನ್ನು ರಾಜ್ಯ ಸರ್ಕಾರ ಕೈಬಿಡಬೇಕು' ಎಂದು ಬಿಡುಗಡೆ ಚಿರತೆಗಳು ಸಂಘಟನೆಯ ರಾಜ್ಯ ಸಂಚಾಲಕ ಅಬ್ದುಲ್ ನಜೀಬ್ ಆಗ್ರಹಿಸಿದರು.

'ಅಂಗಡಿ ಮಳಿಗೆಗಳ ಮಾಲಿಕರ ಜತೆ ಯಾವುದೇ ಸಭೆ ನಡೆಸಿಲ್ಲ. ಅಭಿಪ್ರಾಯವನ್ನೂ ಕೇಳಿಲ್ಲ. ಏಕಾಏಕಿ ಕಾಂಪ್ಲೆಕ್ಸ್ ಒಡೆಯಲು ಮುಂದಾಗಿದ್ದಾರೆ. ಹೀಗಾಗಿ ನಾವು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದೇವೆ. ಇದನ್ನು ಖಾಸಗಿಯವರಿಗೆ ವಹಿಸಲು ನಾವು ಬಿಡುವುದಿಲ್ಲ. ಸರ್ಕಾರದ ನೆರವಿನೊಂದಿಗೆ ಬಿಡಿಎ ಕಾಂಪ್ಲೆಕ್ಸ್ ಅನ್ನು ಅಭಿವೃದ್ಧಿಪಡಿಸಲಿ. ಸಣ್ಣ ವ್ಯಾಪಾರಿಗಳನ್ನು ಬಲಿಕೊಟ್ಟು, ಬಂಡವಾಳದಾರರನ್ನು ಉದ್ದಾರ ಮಾಡುವ ಸರ್ಕಾರದ ನಿರ್ಧಾರವನ್ನು ನಾವು ವಿರೋಧಿಸುತ್ತೇವೆ' ಎಂದು ಜೆರಾಕ್ಸ್ ಅಂಗಡಿಯ ಧನಪಾಲ್ ಹೇಳಿದರು.

'ಪಿಪಿಪಿ ಯೋಜನೆ ಸಾರ್ವಜನಿಕ ಕ್ಷೇತ್ರದ ಆಸ್ತಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಯೋಜನೆಯಾಗಿದೆ. ಸಹಭಾಗಿತ್ವ ಎಂಬುದು ಹೆಸರಿಗಷ್ಟೇ ಇರುತ್ತದೆ. ಎಲ್ಲವೂ ಖಾಸಗಿಯವರ ಪಾಲಾಗುತ್ತದೆ. ಇದರ ವಿರುದ್ಧ ನಾವು ಜನಾಂದೋಲನ ರೂಪಿಸುತ್ತೇವೆ' ಎಂದು ಸಿಪಿಐ(ಎಂ) ಮುಖಂಡ ಕೆ.ಪ್ರಕಾಶ್ ಹೇಳಿದರು.



ಕೋರಮಂಗಲ ಬಿಡಿಎ ವಾಣಿಜ್ಯ ಸಂಕೀರ್ಣ

> ಬಿಡಿಎ ನಿರ್ಮಿಸಿದ ಬಡಾವಣೆಗಳ ನಿವಾಸಿಗಳ ಅನುಕೂಲಕ್ಕಾಗಿ ನಿಯಮಾವಳಿಯಂತೆ ಅಲ್ಲಿನ ಬಡಾವಣೆಗಳ ಸಿ.ಎ. ನಿವೇಶನಗಳಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಲಾಗಿದೆ. ಹೀಗಿರುವಾಗ ವಾಣಿಜ್ಯ ಸಂಕೀರ್ಣವನ್ನು ಖಾಸಗಿಯವರಿಗೆ ವಹಿಸುವಾಗ ಬಡಾವಣೆಯ ನಿವಾಸಿಗಳ ಅಭಿಪ್ರಾಯವನ್ನೂ ಕೇಳದಿರುವುದು ಸರಿಯಲ್ಲ
>
> **ಪಿ.ಮಧು,** ಕೋರಮಂಗಲ ನಿವಾಸಿ

## ಶಿರಾ: ಕ್ರಿಕೆಟ್ ಕ್ರೀಡಾಂಗಣಕ್ಕೆ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

**ಶಿರಾ:** ನಗರದ ಹೊರವಲಯದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಸಲುವಾಗಿ ಕೆ.ಎಸ್.ಸಿ.ಎ ಪ್ರತಿನಿಧಿಗಳ ಜೊತೆ ಶಾಸಕ ಟಿ.ಬಿ. ಜಯಚಂದ್ರ ಮಂಗಳವಾರ ಪರಿಶೀಲನೆ ನಡೆಸಿದರು.

ಖೇಲೊ ಭಾರತ್ ಯೋಜನೆಯಡಿ ಕ್ರೀಡಾ ಗ್ರಾಮಕ್ಕಾಗಿ ಭೂವನಹಳ್ಳಿ, ಕಲ್ಲುಕೋಟೆಯ ವಿವಿಧೆಡೆ ಸುಮಾರು 100 ಎಕರೆ ಜಮೀನು ಇದ್ದು, ಅಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಅನುಕೂಲವಾಗುವಷ್ಟು ಜಮೀನು ನೀಡಲಾಗುವುದು ಎಂದು ಜಯಚಂದ್ರ ಹೇಳಿದರು.

ಗ್ರಾಮೀಣ ಭಾಗದಲ್ಲಿ ಕ್ರೀಡಾಂಗಣ ನಿರ್ಮಾಣವಾದರೆ ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ಅನುಕೂಲವಾಗುವುದು. ಶಿರಾ ರಾಜ್ಯದಲ್ಲಿ ಕೇಂದ್ರ ಸ್ಥಾನದಲ್ಲಿರುವುದರಿಂದ ಎಲ್ಲರಿಗೂ ಅನುಕೂಲವಾಗುವುದು. ಕ್ರೀಡಾಂಗಣಕ್ಕೆ ಬರಲು 100 ಅಡಿ ರಸ್ತೆ ನಿರ್ಮಾಣ ಮಾಡಲಾಗುವುದು. ಸಮೀಪದಲ್ಲಿಯೇ ರೈಲ್ವೆ ನಿಲ್ದಾಣ ಸಹ ನಿರ್ಮಾಣವಾಗಲಿದೆ ಎಂದು ಮಾಹಿತಿ ನೀಡಿದರು.

ಕೆ.ಎಸ್.ಸಿ.ಎ ಪ್ರತಿನಿಧಿ ರಘುರಾಮ್ ಭಟ್ ಮಾತನಾಡಿ, ಕ್ರೀಡಾಂಗಣಕ್ಕೆ ಈ ಸ್ಥಳ ಸೂಕ್ತವಾಗಿದೆ. ಮುಂದಿನ ವಾರ ಕೆ.ಎಸ್.ಸಿ.ಎ ಎಂಜಿನಿಯರ್‌ಗಳ ತಂಡ ಬಂದು ವರದಿ ಕೊಟ್ಟ ಬಳಿಕ ಮುಂದಿನ ಪ್ರಕ್ರಿಯೆ ಆರಂಭಿಸಲಾಗುವುದು. ಶಾಸಕರು ಜಮೀನು ನೀಡಲು ಉತ್ಸುಕರಾಗಿದ್ದಾರೆ ಎಂದರು.

## 'ಮುತ್ತಯ್ಯ ₹1,400 ಕೋಟಿ ಹೂಡಿಕೆ'

### ಬದನಕುಪ್ಪೆಯಲ್ಲಿ ತಂಪು ಪಾನೀಯದ ಉದ್ಯಮ ಆರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಚಾಮರಾಜನಗರ ಜಿಲ್ಲೆಯ ಬದನಕುಪ್ಪೆಯಲ್ಲಿ ಶ್ರೀಲಂಕಾ ಕ್ರಿಕೆಟ್ ಆಟಗಾರ ಮುತ್ತಯ್ಯ ಮುರಳೀಧರನ್ ತಂಪು ಪಾನೀಯ ಮತ್ತು ಸಿಹಿತಿಂಡಿಗಳ ಉದ್ಯಮ ಆರಂಭಿಸುತ್ತಿದ್ದು, ಹಂತ ಹಂತವಾಗಿ ಒಟ್ಟು ₹1,400 ಕೋಟಿ ಹೂಡಿಕೆ ಮಾಡಲಿದ್ದಾರೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು

ತಮ್ಮನ್ನು ಮಂಗಳವಾರ ಭೇಟಿ ಮಾಡಿದ ಮುತ್ತಯ್ಯ ಅವರ ಜೊತೆ ಸಚಿವರು ಈ ಕುರಿತು ಮಾತುಕತೆ ನಡೆಸಿದರು.

ಬಳಿಕ ಮಾತನಾಡಿದ ಸಚಿವರು, 'ಮುರಳೀಧರನ್ ಅವರು ಬದನಕುಪ್ಪೆಯಲ್ಲಿ 'ಮುತ್ತಯ್ಯ ಬ್ರಿವರೇಜಸ್ ಮತ್ತು ಕನ್ಫೆಕ್ಷನರೀಸ್' ಎನ್ನುವ ಬ್ರ್ಯಾಂಡ್‌ನಲ್ಲಿ ಉದ್ದಿಮೆ ಆರಂಭಿಸುತ್ತಿದ್ದು, ಆರಂಭದಲ್ಲಿ ₹230 ಕೋಟಿ ಹೂಡಿಕೆಗೆ ಯೋಜನೆ ರೂಪಿಸಲಾಗಿತ್ತು. ಅದು ಈಗ ₹1,000 ಕೋಟಿ ತಲುಪುತ್ತಿದೆ. ಮುಂದಿನ ದಿನಗಳಲ್ಲಿ ₹1,400 ಕೋಟಿ ಆಗಲಿದೆ ಎಂದು ಮುತ್ತಯ್ಯ ತಿಳಿಸಿದ್ದಾರೆ' ಎಂದರು.

'ಇದಕ್ಕಾಗಿ ಅವರಿಗೆ ಈಗಾಗಲೇ 46 ಎಕರೆ ಭೂಮಿ ಕೊಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಸಣ್ಣಪುಟ್ಟ ತೊಡಕುಗಳಿದ್ದವು. ಅವುಗಳನ್ನು ಸರಿಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬದನಕುಪ್ಪೆಯಲ್ಲಿ ಮುಂಬರುವ ಜನವರಿಯಲ್ಲಿ ಉತ್ಪಾದನಾ ಚಟುವಟಿಕೆ ಆರಂಭವಾಗಲಿದೆ. ಮುಂಬರುವ ದಿನಗಳಲ್ಲಿ ಧಾರವಾಡದಲ್ಲಿ ಕೂಡ ಮುತ್ತಯ್ಯ ಅವರು ಒಂದು ಘಟಕ ಸ್ಥಾಪಿಸಲಿದ್ದಾರೆ' ಎಂದು ಸಚಿವರು ಹೇಳಿದ್ದಾರೆ.



ಮುತ್ತಯ್ಯ ಮುರಳೀಧರನ್ ಅವರು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಮಂಗಳವಾರ ಭೇಟಿ ಮಾಡಿದರು

### 'ಸೆಮಿಕಂಡಕ್ಟರ್ ಉದ್ಯಮ: ಶೀಘ್ರ ಎಚ್.ಡಿ. ಕುಮಾರಸ್ವಾಮಿ ಭೇಟಿ'

**ಬೆಂಗಳೂರು:** 'ರಾಜ್ಯದಲ್ಲಿ ಸೆಮಿಕಂಡಕ್ಟರ್ ಉದ್ಯಮಕ್ಕೆ ಹೂಡಿಕೆ ಆಕರ್ಷಣೆ ಮತ್ತು ಮುಂದಿನ ಬೆಳವಣಿಗೆ ಕುರಿತು ಚರ್ಚಿಸಲು ಸದ್ಯದಲ್ಲೇ ರಾಜ್ಯದವರೇ ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಲಾಗುವುದು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯವಾದ ಗುಜರಾತಿನಲ್ಲಿ ನೆಲೆಯೂರಲಿರುವ ಅಮೆರಿಕದ ಮೈಕ್ರಾನ್ ಸೆಮಿಕಂಡಕ್ಟರ್ ಕಂಪನಿಗೆ ಕೇಂದ್ರ ಸರ್ಕಾರ ಶೇ 50 ಮತ್ತು ಅಲ್ಲಿನ ರಾಜ್ಯ ಸರ್ಕಾರ ಶೇ 20ರಷ್ಟು ಪ್ರೋತ್ಸಾಹಧನ ನೀಡುತ್ತಿವೆ. ನಮಗೂ ಇದೇ ಮಾದರಿಯ ಉತ್ತೇಜನ ಬೇಕಾಗಿದೆ. ಈ ಸಂಬಂಧ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಬಂಡವಾಳ ಆಕರ್ಷಣೆ ಕುರಿತು ಚರ್ಚಿಸಲಾಗುವುದು' ಎಂದರು.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಮಹೇಶ, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಇದ್ದರು.

## ಮಂತ್ರಾಲಯ ಅತಿಥಿಗೃಹ ಕಳಪೆ ಲೋಕಾಯುಕ್ತ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಂತ್ರಾಲಯದಲ್ಲಿ ಕರ್ನಾಟಕ ಛತ್ರದ ಆವರಣದಲ್ಲಿ ₹5 ಕೋಟಿ ವೆಚ್ಚದಲ್ಲಿ 100 ಕೊಠಡಿಗಳ ಅತಿಥಿ ಗೃಹ ನಿರ್ಮಾಣದಲ್ಲಿ ಕಳಪೆ ಕಾಮಗಾರಿ ನಡೆಸಿರುವ ಆರೋಪದ ಕುರಿತು ಲೋಕಾಯುಕ್ತ ತನಿಖೆಗೆ ವಹಿಸುವಂತೆ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರು ಕಂದಾಯ ಇಲಾಖೆ (ಮುಜರಾಯಿ) ಪ್ರಧಾನ ಕಾರ್ಯದರ್ಶಿಯವರಿಗೆ ಆದೇಶಿಸಿದ್ದಾರೆ.

2011ರಲ್ಲಿ ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಿ, 2019ರಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಳಿಸಿ, ಹಸ್ತಾಂತರಿಸಲಾಗಿತ್ತು. ಈ ಕಟ್ಟಡ ಗೋಡೆಗಳಲ್ಲಿ ಬಿರುಕು, ನೀರು ಸೋರಿಕೆ, ಕಿಟಕಿ, ಬಾಗಿಲು, ನೆಲಕ್ಕೆ ಹಾಸಿದ ಟೈಲ್ಸ್‌ಗಳಿಗೆ ಹಾನಿಯಾಗಿರುವ ಕುರಿತು ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿದ್ದವು. ಅತಿಥಿ ಗೃಹ ನಿರ್ಮಾಣದಲ್ಲಿ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲೂ ಸಾರ್ವಜನಿಕರು ಟೀಕಿಸಿದ್ದರು.

ಈ ಕುರಿತು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಟಿಪ್ಪಣಿ ಹೊರಡಿಸಿರುವ ಸಚಿವರು, '₹5 ಕೋಟಿ ವೆಚ್ಚ ಮಾಡಿ ಅತಿಥಿ ಗೃಹ ನಿರ್ಮಿಸಲಾಗಿತ್ತು. ಕಳಪೆ ಕಾಮಗಾರಿಯಿಂದ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟಾಗಿದೆ. ಭಕ್ತಾದಿಗಳಿಗೂ ಅನಾನುಕೂಲಕ್ಕೆ ಕಾರಣವಾಗಿದೆ' ಎಂದಿದ್ದಾರೆ.

ಪ್ರಕರಣದ ಕುರಿತು ತನಿಖೆ ನಡೆಸಿ, ಕಳಪೆ ಕಾಮಗಾರಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕಿದೆ. ಆದ್ದರಿಂದ ಪ್ರಕರಣದ ತನಿಖೆಯನ್ನು ಲೋಕಾಯುಕ್ತರಿಗೆ ವಹಿಸಬೇಕು ಎಂದು ರೆಡ್ಡಿ ಆದೇಶಿಸಿದ್ದಾರೆ.

### ಕ್ಷಿಪ್ರ ವಿಲೇವಾರಿ: ನ್ಯಾಯಮೂರ್ತಿ ನಾಗಪ್ರಸನ್ನ ದಾಪುಗಾಲು

# 600 ಅರ್ಜಿಗಳ ವಿಚಾರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದ ಹೈಕೋರ್ಟ್‌ಗಳಲ್ಲೇ ಕ್ಷಿಪ್ರಗತಿಯಲ್ಲಿ ಅರ್ಜಿಗಳ ವಿಲೇವಾರಿಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಮಂಗಳವಾರ 600 ಅರ್ಜಿಗಳ ವಿಚಾರಣೆಯನ್ನು ಮಧ್ಯಾಹ್ನದ ನಿಗದಿತ ಕಲಾಪದ ಅವಧಿಯ 45 ನಿಮಿಷಗಳಿಗೂ ಮುನ್ನವೇ ಪೂರೈಸಿದರು.

ಕೋರ್ಟ್‌ಹಾಲ್ 19ರ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸಿಆರ್‌ಪಿಸಿ ಕಲಂ 482ರ ಅಡಿಯಲ್ಲಿ ಅಂದರೆ; ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗ ತಡೆಗಟ್ಟಲು ಅಥವಾ ಭದ್ರತೆ ಪಡೆಯಲು ಅಗತ್ಯವಿರುವಂತಹ ಆದೇಶಗಳನ್ನು ಮಾಡುವ ಕಾಯ್ದೆಯಡಿ ಸಲ್ಲಿಸಲಾದ ಕ್ರಿಮಿನಲ್ ಅರ್ಜಿಗಳು ಮತ್ತು ಸಾಮಾನ್ಯವಾದ ವಿವಿಧ ಉಳಿಕೆ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳ 600 ಅರ್ಜಿಗಳ ವಿಚಾರಣೆ ನಡೆಸಿದರು.



ನ್ಯಾಯಮೂರ್ತಿ ಎಂ.ನಾಗಪ್ರಸನ್ನ

53 ಪುಟಗಳ ದಿನದ ಕಲಾಪ ಪಟ್ಟಿಯಲ್ಲಿ ನಿಗದಿಯಾಗಿದ್ದ 600 ಅರ್ಜಿಗಳ ಪೈಕಿ 180 ಅರ್ಜಿಗಳಿಗೆ ಸಂಬಂಧಿಸಿ ಮಧ್ಯಂತರ ಆದೇಶ ನೀಡಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು 87 ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ ವಿಲೇವಾರಿ ಮಾಡಿದರು.

ಈ ಹಿಂದೆ ರಾಜ್ಯ ಹೈಕೋರ್ಟ್‌ನ ಮತ್ತೊಬ್ಬ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು, ಒಂದೇ ದಿನದ ಕಲಾಪದಲ್ಲಿ ಬರೋಬ್ಬರಿ 750 ಅರ್ಜಿಗಳನ್ನು ವಿಲೇವಾರಿ ಮಾಡಿದ ಉದಾಹರಣೆಯಿದೆ.

ದಾಖಲೆಯೋಪಾದಿಯ ಅರ್ಜಿ ವಿಲೇವಾರಿಗೆ ಪ್ರತಿಕ್ರಿಯಿಸಿದ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್, 'ರಿಟ್ ಹಾಗೂ ಕ್ರಿಮಿನಲ್ ಅರ್ಜಿಗಳ ವಿಲೇವಾರಿ ಅಷ್ಟು ಕಷ್ಟ ಎನಿಸುವುದಿಲ್ಲ. ಆದರೆ, ಸ್ಥಿರಾಸ್ತಿ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿನ ವಿಲೇವಾರಿ ದಶಕಗಳಷ್ಟು ಕಾಲ ತೆಗೆದುಕೊಳ್ಳುತ್ತದೆ. ಆ ದಿಸೆಯಲ್ಲಿಯೂ ರಾಜ್ಯ ಹೈಕೋರ್ಟ್‌ನ ಇನ್ನುಳಿದ ನ್ಯಾಯಮೂರ್ತಿಗಳು ಗಮನಾರ್ಹ ಪ್ರಗತಿ ಸಾಧಿಸುತ್ತಿದ್ದಾರೆ' ಎಂಬುದನ್ನು ನೆನಪಿಸಿದರು.

**ಶ್ಲಾಘನೆ:** ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಕಾರ್ಯವೈಖರಿಗೆ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರೂ ಆದ ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ ಮತ್ತು ವಕೀಲರ ಪರಿಷತ್ ಸದಸ್ಯ ಎಸ್.ಹರೀಶ್, 'ನಾಗಪ್ರಸನ್ನ ಅವರ ಕಾರ್ಯಶೈಲಿಯಿಂದ ಹೈಕೋರ್ಟ್ ಮೇಲೆ ಹೆಚ್ಚುತ್ತಿರುವ ಹೊರೆ ಕಡಿಮೆ ಆಗುತ್ತಿದೆ. ಅಷ್ಟೇ ಅಲ್ಲ ಇದು ರಾಜ್ಯದ ಸಮಸ್ತ ನ್ಯಾಯಮೂರ್ತಿಗಳ ಪಾಲಿಗೆ ಹೆಮ್ಮೆಯ ಗರಿ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

## ನೆಫ್ರೊ – ಯುರಾಲಜಿ ಸಂಸ್ಥೆ: ನಿರ್ದೇಶಕರ ನೇಮಕಾತಿಗೆ ಮರು ಅಧಿಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೂತ್ರಪಿಂಡ ಮತ್ತು ಮೂತ್ರಕೋಶ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವಲ್ಲಿ ಮುಂಚೂಣಿಯಲ್ಲಿರುವ ನೆಫ್ರೊ–ಯುರಾಲಜಿ ಸಂಸ್ಥೆಗೆ ಪೂರ್ಣಾವಧಿ ನಿರ್ದೇಶರ ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನೆಫ್ರೊ–ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿ ಸಭೆ ಸೋಮವಾರ ನಡೆಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್‌ಕುಮಾರ್, ನಿರ್ದೇಶಕಿ ಸುಜಾತಾ ರಾಥೋಡ, ಮುಖ್ಯಮಂತ್ರಿ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕಚಂದ್ರ ಅವರು ಸಭೆಯಲ್ಲಿದ್ದರು.

2013ರಿಂದ ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರನ್ನು ನೇಮಕ ಮಾಡಿಲ್ಲ. ಮುಖ್ಯಮಂತ್ರಿಯೇ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾಗಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವರು ಉಪಾಧ್ಯಕ್ಷರಾಗಿದ್ದಾರೆ. ಆಡಳಿತ ಮಂಡಳಿಯ ಸಭೆಗಳಲ್ಲಿ ಸಂಸ್ಥೆಯ ನಿರ್ದೇಶಕ ಸ್ಥಾನದ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಸರ್ಕಾರ ಈವರೆಗೂ ನೇಮಕಾತಿ ನಡೆಸಿಲ್ಲ. ಡಾ.ಆರ್. ಕೇಶವಮೂರ್ತಿ ಅವರು ಪ್ರಭಾರ ಸ್ಥಾನದಲ್ಲಿದ್ದಾರೆ.

2021ರಲ್ಲಿ ನಿರ್ದೇಶಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದಾಗ ಐವರು ಅರ್ಜಿ ಸಲ್ಲಿಸಿದ್ದರು. ನಿರ್ದೇಶಕ ಹುದ್ದೆಯ ಅವಧಿ 4 ವರ್ಷಗಳು ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಆದರೆ, ಈವರೆಗೂ ನೇಮಕಾತಿ ನಡೆದಿಲ್ಲ ಎಂದು ಮೂಲಗಳು ತಿಳಿಸಿವೆ.

## ‘ಬಾಬರಿ ಮಸೀದಿ: ವಿದ್ಯಾರ್ಥಿಗಳಿಗೆ ವಸ್ತುಸ್ಥಿತಿ ತಿಳಿಯಲಿ’

ಹೈದರಾಬಾದ್ (ಪಿಟಿಐ): ‘ಬಾಬರಿ ಮಸೀದಿ ನೆಲಸಮ ಕೃತ್ಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ‘ಅತಿರಂಜಿತ ಕ್ರಿಮಿನಲ್ ಕೃತ್ಯ’ಗಳನ್ನು ಓದುತ್ತಾ ಬೆಳೆಯಬಾರದು’ ಎಂದು ಎಐಎಂಐಎಂ ಅಧ್ಯಕ್ಷ, ಸಂಸದ ಅಸಾದುದ್ದೀನ್ ಒವೈಸಿ ಅಭಿಪ್ರಾಯಪಟ್ಟಿದ್ದಾರೆ.

ಎನ್‌ಸಿಇಆರ್‌ಟಿಯ 12ನೇ ತರಗತಿ ಪರಿಷ್ಕೃತ ಪಠ್ಯಕ್ರಮ ಕುರಿತು ಎಕ್ಸ್ ಜಾಲತಾಣದಲ್ಲಿ ಅವರು, ‘ಬಾಬರಿ ಮಸೀದಿ ನೆಲಸಮವನ್ನು ಸುಪ್ರೀಂ ಕೋರ್ಟ್, ‘ಘೋರವಾದ ಕ್ರಿಮಿನಲ್ ಕೃತ್ಯ’ ಎಂದು ಹೇಳಿತ್ತು ಎಂಬುದೂ ವಿದ್ಯಾರ್ಥಿಗಳಿಗೆ ತಿಳಿಯಬೇಕು’ ಎಂದಿದ್ದಾರೆ.

ಎನ್‌ಸಿಇಆರ್‌ಟಿ ತನ್ನ ಪರಿಷ್ಕೃತ ಪಠ್ಯಕ್ರಮದಲ್ಲಿ ಬಾಬರಿ ಮಸೀದಿಯನ್ನು ಮೂರು ಗೋಪುರಗಳಿದ್ದ ಸಂಕೀರ್ಣ ಎಂದು, ಅಯೋಧ್ಯೆ ಕುರಿತ ಸುಪ್ರೀಂ ಕೋರ್ಟ್ ತೀರ್ಪು ‘ಒಮ್ಮತ’ಕ್ಕೆ ಉದಾಹರಣೆ ಎಂದು ಉಲ್ಲೇಖಿಸಿದೆ ಎಂದು ಅವರು ಹೇಳಿದ್ದಾರೆ.

ಮಸೀದಿಯನ್ನು ಗುಂಪೊಂದು 1992ರಲ್ಲಿ ನೆಲಸಮಗೊಳಿಸಿತು ಎಂಬುದು ವಿದ್ಯಾರ್ಥಿಗಳಿಗೆ ತಿಳಿಯಬೇಕು ಎಂದಿದ್ದಾರೆ.

### ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಬಿಎಂಪಿ ನಿರ್ಮಿಸಿರುವ ಬಹುಮಹಡಿ ಕಟ್ಟಡ


# ‘ಸ್ಮಾರ್ಟ್ ಪಾರ್ಕಿಂಗ್’ ನಾಳೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೃದಯ ಭಾಗವಾದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನಿರ್ಮಿಸಿರುವ ‘ಬಹುಮಹಡಿ ಪಾರ್ಕಿಂಗ್ ಕಟ್ಟಡ’ ಜೂನ್ 20ರಂದು ಉದ್ಘಾಟನೆಯಾಗಲಿದೆ.

ಬಿಬಿಎಂಪಿ, ನಗರೋತ್ಥಾನ ಯೋಜನೆ ಅಡಿ 2017ರಲ್ಲಿ ಕಟ್ಟಡದ ಕಾಮಗಾರಿ ಆರಂಭಿಸಿತ್ತು. ₹78 ಕೋಟಿ ಖರ್ಚು ಮಾಡಲಾಗಿತ್ತು. ಎರಡು ವರ್ಷಗಳ ಹಿಂದೆಯೇ ಕಟ್ಟಡದ ಕೆಲಸ ಪೂರ್ಣಗೊಂಡಿದ್ದರೂ ಗುತ್ತಿಗೆದಾರರು ಮುಂದೆ ಬಾರದ ಕಾರಣಕ್ಕೆ ಕಟ್ಟಡ ಬಳಕೆಗೆ ಲಭ್ಯವಾಗಿರಲಿಲ್ಲ.

ಈ ವರ್ಷದ ಆರಂಭದಲ್ಲಿ ಬೆಂಗಳೂರು ಮೂಲದ ‘ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸೆಲ್ಯೂಷನ್ ಕಂಪನಿ’ಗೆ ವಾರ್ಷಿಕ ₹1.55 ಕೋಟಿಗೆ ಗುತ್ತಿಗೆ ನೀಡಿತ್ತು. ಈ ಕಂಪನಿ 10 ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿದೆ. ಪಾರ್ಕಿಂಗ್ ತಾಣದಲ್ಲಿ ‘ಅಡ್ವಾನ್ಸ್ಡ್ ಪಾರ್ಕಿಂಗ್ ತಂತ್ರಜ್ಞಾನ’ ಅಳವಡಿಸಲಾಗಿದೆ.



ಬಹುಮಹಡಿ ಸ್ಮಾರ್ಟ್ ಪಾರ್ಕಿಂಗ್ ತಾಣ

**ಪಾರ್ಕಿಂಗ್ ಶುಲ್ಕದ ವಿವರ**

| ಅವಧಿ | ದ್ವಿಚಕ್ರ ವಾಹನ | ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ |
|---|---|---|
| 0ದಿಂದ 1 | ₹15 | ₹25 |
| 1ರಿಂದ 2 | ₹25 | ₹40 |
| 2ರಿಂದ 4 | ₹40 | ₹65 |
| 4ರಿಂದ 6 | ₹55 | ₹90 |
| 6ರಿಂದ 8 | ₹70 | ₹115 |
| 8ರಿಂದ 10 | ₹85 | ₹140 |
| 10ರಿಂದ 12 | ₹100 | ₹165 |
| 12ರಿಂದ 24 | ₹100+ | ₹165+ |

ಸದ್ಯ ನೆಲದಡಿಯಲ್ಲಿ ಮೆಟ್ರೊ ನಿಲ್ದಾಣಗಳಲ್ಲಿರುವಂತೆ, ಈ ಪಾರ್ಕಿಂಗ್ ತಾಣಕ್ಕೂ ಕಲಾತ್ಮಕ ಸ್ಪರ್ಶ ನೀಡಲಾಗಿದೆ. ಪಾರ್ಕಿಂಗ್ ತಾಣದ ಗೋಡೆಯ ಮೇಲೆ ವಿಧಾನಸೌಧದ ವರ್ಣ ಚಿತ್ರಗಳು, ಯಕ್ಷಗಾನದ ವಿವಿಧ ಭಂಗಿಗಳು ಮತ್ತು ಮೈಸೂರು ದಸರಾ ಜಂಬೂ ಸವಾರಿಯ ವರ್ಣಚಿತ್ರಗಳಿವೆ.

‘ಪಾರ್ಕಿಂಗ್ ತಾಣದಲ್ಲಿ 600 ಕಾರುಗಳು ಮತ್ತು 750 ಬೈಕ್‌ಗಳನ್ನು ಏಕಕಾಲಕ್ಕೆ ನಿಲುಗಡೆ ಮಾಡಬಹುದು ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದ್ದಾರೆ.

‘ಪಾರ್ಕಿಂಗ್ ತಾಣದಲ್ಲಿ ಸುಧಾರಿತ ಸ್ಮಾರ್ಟ್ ಪಾರ್ಕಿಂಗ್ ತಂತ್ರಜ್ಞಾನವನ್ನು ಅಳವಡಿಸಿದ್ದೇವೆ. ದಿನ ಪೂರ್ತಿ ಈ ತಂತ್ರಜ್ಞಾನ ಕಾರ್ಯ ನಿರ್ವಹಿಸುತ್ತದೆ. ಕಟ್ಟಡದಲ್ಲಿ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಸೌಲಭ್ಯ, ಗಾಲಿಕುರ್ಚಿಗಳು, ಶೌಚಾಲಯಗಳು ಮತ್ತು ಆಂಬುಲೆನ್ಸ್ ಸೇವೆಗಳು ಲಭ್ಯವಿವೆ‘ ಎಂದು ಅವರು ವಿವರಿಸಿದರು.

**ವಾಹನ ಸೌಲಭ್ಯ**

ವಾಹನ ನಿಲುಗಡೆ ಮಾಡಿದವರಿಗೆ ನಿಗದಿತ ಸ್ಥಳಕ್ಕೆ ತಲುಪಲು ವಾಹನ ವ್ಯವಸ್ಥೆ ಇದೆ. ಈ ವಾಹನಗಳು ಪ್ರತಿ ಹದಿನೈದು ನಿಮಿಷ ಗಳಿಗೊಮ್ಮೆ ಮೂರು ಮಾರ್ಗಗಳಲ್ಲಿ ಸಂಚರಿಸುತ್ತವೆ.

1 ಸಿಟಿ ಸಿವಿಲ್ ಕೋರ್ಟ್, ಕೆ.ಆರ್ ಸರ್ಕಲ್, ವಿಧಾನ ಸೌಧ, ಎಂಎಸ್ ಬಿಲ್ಡಿಂಗ್ ಮತ್ತು ಹೈ ಕೋರ್ಟ್

2 ಪ್ರೊಥೀಸ್ ಸರ್ಕಲ್, ಚಿಕ್ಕಪೇಟೆ ಮೆಟ್ರೊ ಸ್ಟೇಷನ್, ಬಿವಿಕೆ ಅಯ್ಯಂಗಾರ್ ರಸ್ತೆ, ಟಿಸಿಎಂ ರಾಯನ್ ಸರ್ಕಲ್

3 ಪ್ರೊಥೀಸ್ ಸರ್ಕಲ್, ಉಪ್ಪಾರಪೇಟೆ ಪೊಲೀಸ್ ಠಾಣೆ, ಮೆಜೆಸ್ಟಿಕ್ ಬಸ್ ನಿಲ್ದಾಣ ಮತ್ತು ಕೆಎಸ್‌ಆರ್ ರೈಲು ನಿಲ್ದಾಣ

## ಸುದ್ದಿ 2 ನಿಮಿಷ

### ‘ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ: ಸ್ವಾಗತಾರ್ಹ’

ಬೆಂಗಳೂರು: ರಾಜ್ಯದ ಕೈಗಾರಿಕೆಗಳ ‘ಸಿ’ ಮತ್ತು ‘ಡಿ’ ಗ್ರೂಪ್ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇಕಡ 100ರಷ್ಟು ಮೀಸಲಾತಿ ನೀಡಲು ಮುಂದಾಗಿರುವ ಕಾರ್ಮಿಕ ಇಲಾಖೆ ಕ್ರಮ ಸ್ವಾಗತಾರ್ಹ. ಆದರೆ, ನಿರುದ್ಯೋಗಿ ಕನ್ನಡಿಗರನ್ನು ಗುರುತಿಸಿ, ನೇಮಕಾತಿಗೆ ಅಗತ್ಯ ಪ್ರಮಾಣಪತ್ರ ನೀಡುವ ಕೆಲಸ ಆಗಬೇಕು ಎಂದು ನಟಿ ಪೂಜಾ ಗಾಂಧಿ ಹೇಳಿದ್ದಾರೆ.

‘ಸಿ’ ಮತ್ತು ‘ಡಿ’ ಗ್ರೂಪ್‌ನ ಹುದ್ದೆಗಳಿಗೆ ಕನ್ನಡಿಗರನ್ನು ನೇಮಕ ಮಾಡಿಕೊಳ್ಳಲು ತೊಡಕುಗಳಿಲ್ಲದಿದ್ದರೂ, ಕಂಪನಿಗಳಿಗೆ ನೇಮಕಾತಿ ಪ್ರಕ್ರಿಯೆ ಸುಲಭವಾಗುವಂತೆ ಉದ್ಯೋಗಾಕಾಂಕ್ಷಿ ಕನ್ನಡಿಗರ ಪ್ರತ್ಯೇಕ ಪೋರ್ಟಲ್ ತೆರೆಯಬೇಕು. ಕನ್ನಡಿಗ ನಿರುದ್ಯೋಗಿ ಯುವಕ-ಯುವತಿಯರಿಗೆ ಕರುನಾಡಿಗರೆಂಬ ಪ್ರಮಾಣಪತ್ರ ಮತ್ತು ವಿಶಿಷ್ಟ ಸಂಖ್ಯೆ ನೀಡಬೇಕು. ವೆಬ್‌ಸೈಟ್‌ಗಳಲ್ಲಿ ನಿರುದ್ಯೋಗಿಗಳು ನಮೂದಿಸುವ ವಿಶಿಷ್ಟ ಸಂಖ್ಯೆಯ ಆಧಾರದಲ್ಲಿ ಕಂಪನಿಗಳು ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದಿದ್ದಾರೆ.



ಕರ್ನಾಟಕದಲ್ಲಿ 15 ವರ್ಷಗಳಿಗಿಂತ ಹೆಚ್ಚು ವಾಸವಾಗಿದ್ದು, ಕನ್ನಡವನ್ನು ಓದಲು ಮತ್ತು ಬರೆಯಲು ಕಲಿತಿದ್ದರೆ ಅವರನ್ನು ಕನ್ನಡಿಗರೆಂದು ಕಾನೂನು ಗುರುತಿಸುತ್ತದೆ. ಅಂಥವರಿಗೆ ಕನ್ನಡ ಓದಲು ಬರೆಯಲು ಬರುತ್ತದೆಯೇ ಎನ್ನುವ ಕುರಿತು ದೃಢೀಕರಿಸಬೇಕು ಎಂದು ಹೇಳಿದ್ದಾರೆ.

### ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಡಿಕೆಶಿ ಪ್ರವಾಸ ಇಂದು

ಬೆಂಗಳೂರು: ಲೋಕಸಭೆಗೆ ಎಚ್‌.ಡಿ. ಕುಮಾರಸ್ವಾಮಿ ಆಯ್ಕೆಯಾದ ಕಾರಣ ತೆರವಾದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಆರು ತಿಂಗಳ ಒಳಗೆ ಉಪ ಚುನಾವಣೆ ನಡೆಯುವುದು ಖಚಿತವಾಗಿದ್ದು, ಕ್ಷೇತ್ರವನ್ನು ಜೆಡಿಎಸ್‌ನಿಂದ ಕಿತ್ತುಕೊಳ್ಳಲು ಈಗಿನಿಂದಲೇ ಕಾರ್ಯತಂತ್ರ ರೂಪಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಬುಧವಾರ (ಜೂನ್ 19) ಡಿ.ಕೆ. ಶಿವಕುಮಾರ್ ಪ್ರವಾಸ ಕೈಗೊಳ್ಳಲಿದ್ದಾರೆ. ಬೆಳಿಗ್ಗೆ 10.30ಕ್ಕೆ ಚನ್ನಪಟ್ಟಣ ತಲುಪಲಿರುವ ಅವರು, ರಾತ್ರಿ 8.30 ಗಂಟೆಯವರೆಗೆ ಕ್ಷೇತ್ರದಲ್ಲಿದ್ದ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡಲಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಸೋಲು ಕಂಡಿರುವ ಸಹೋದರ ಡಿ.ಕೆ. ಸುರೇಶ್ ಅವರನ್ನು ಚನ್ನಪಟ್ಟಣದಿಂದ ಕಣಕ್ಕಿಳಿಸುವ ಬಗ್ಗೆ ಗಂಭೀರ ಚರ್ಚೆ ನಡೆದಿದೆ. ಬಿಜೆಪಿ– ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಯಾರು ಕಣಕ್ಕಿಳಿಯಬಹುದು ಎಂಬುವುದನ್ನು ನೋಡಿಕೊಂಡು ಅಭ್ಯರ್ಥಿಯನ್ನು ಅಂತಿಮಗೊಳಿಸಬಹುದು. ಏನೇ ಆದರೂ ಶತಾಯ ಗತಾಯ ಕ್ಷೇತ್ರವನ್ನು ಗೆಲ್ಲಲೇ ಬೇಕೆಂಬ ಬಗ್ಗೆಯೂ ಕಾಂಗ್ರೆಸ್ ವಲಯದಲ್ಲಿ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

### ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ತೀರ್ಮಾನ

# ರಾಜ್ಯ ನಾಯಕರೊಂದಿಗೆ ‘ಕೈ’ ಹೈಕಮಾಂಡ್ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಪುನಶ್ಚೇತನದ ಪ್ರದರ್ಶನ ನೀಡಿರುವ ಕಾಂಗ್ರೆಸ್ ಪಕ್ಷವು ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸಲು ನಾಲ್ಕು ರಾಜ್ಯಗಳ ನಾಯಕರೊಂದಿಗೆ ಸಭೆ ಆಯೋಜಿಸಿದೆ.

ಜೂನ್ 24ರಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್, ಜಮ್ಮು ಮತ್ತು ಕಾಶ್ಮೀರದ ಹಿರಿಯ ನಾಯಕರೊಂದಿಗೆ ಸಭೆ ನಡೆಸಲಿದ್ದಾರೆ. ಪಕ್ಷದ ಸಂಘಟನೆ ಬಲಪಡಿಸಲು ಹಾಗೂ ಚುನಾವಣಾ ಕಾರ್ಯತಂತ್ರ ರೂಪಿಸುವ ಸಂಬಂಧ ಚರ್ಚೆ ನಡೆಸಲಾಗುತ್ತದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

**ಸಭೆ ಯಾವಾಗ**

- ಜಾರ್ಖಂಡ್ ನಾಯಕರೊಂದಿಗೆ ಜೂನ್ 24ರಂದು
- ಮಹಾರಾಷ್ಟ್ರ ನಾಯಕೊಂದಿಗೆ ಜೂನ್ 25ರಂದು
- ಹರಿಯಾಣ ನಾಯಕರೊಂದಿಗೆ ಜೂನ್ 26ರಂದು
- ಜಮ್ಮು ಮತ್ತು ಕಾಶ್ಮೀರದ ನಾಯಕರೊಂದಿಗೆ ಜೂನ್ 27ರಂದು

ಈ ವರ್ಷಾಂತ್ಯದೊಳಗೆ ಮಹಾರಾಷ್ಟ್ರ, ಹರಿಯಾಣ ಹಾಗೂ ಜಾರ್ಖಂಡ್ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಸೆಪ್ಟೆಂಬರ್ 30ರೊಳಗೆ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಈ ರಾಜ್ಯಗಳಿಗೆ ಚುನಾವಣಾ ಉಸ್ತುವಾರಿ ಹಾಗೂ ಸಹ ಉಸ್ತುವಾರಿಗಳನ್ನು ಬಿಜೆಪಿ ಸೋಮವಾರ ನೇಮಿಸಿತ್ತು. ಅದರ ಬೆನ್ನಲ್ಲೇ, ಕಾಂಗ್ರೆಸ್ ಪಕ್ಷವು ಚುನಾವಣೆಗೆ ಸಿದ್ಧತೆ ಆರಂಭಿಸಿದೆ.

ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣೆಯಲ್ಲಿ ಮಹಾವಿಕಾಸ್ ಅಘಾಡಿ ಮೈತ್ರಿಕೂಟವು ಉತ್ತಮ ಸಾಧನೆ ಮಾಡಿತ್ತು. ಕಾಂಗ್ರೆಸ್ ಪಕ್ಷ 13, ಶಿವಸೇನೆ (ಉದ್ಧವ್ ಠಾಕ್ರೆ ಬಣ) 9 ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) 8 ಕ್ಷೇತ್ರಗಳಲ್ಲಿ ಜಯ ಗಳಿಸಿದ್ದವು. ರಾಜ್ಯದಲ್ಲಿ ಈ ಚುನಾವಣೆಯಲ್ಲಿ ಕಾಂಗ್ರೆಸ್ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ವಿಧಾನಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಟ ನಡೆಸಲು ಮೈತ್ರಿಕೂಟದ ಪಕ್ಷಗಳು ಈಗಾಗಲೇ ನಿರ್ಧರಿಸಿವೆ. ಸೀಟು ಹಂಚಿಕೆಯಲ್ಲಿ ಕಾಂಗ್ರೆಸ್ ಪಕ್ಷವು ಚೌಕಾಸಿ ನಡೆಸುವ ಸಂಭವ ಇದೆ. ಜೂನ್ 25ರ ಸಭೆಯಲ್ಲಿ ಕಾಂಗ್ರೆಸ್ ಪಕ್ಷವು ಕಾರ್ಯತಂತ್ರ ರೂಪಿಸುವ ಸಾಧ್ಯತೆ ಇದೆ.

ಹರಿಯಾಣದಲ್ಲಿ ಲೋಕಸಭಾ ಚುನಾವಣೆಯಲ್ಲಿ ಕೈ ಪಾಳಯವು ಐದು ಸ್ಥಾನಗಳನ್ನು ಗೆದ್ದುಕೊಂಡಿತ್ತು. ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಎಎಪಿ ಜತೆಗೆ ಮೈತ್ರಿ ಮಾಡಿಕೊಂಡಿತ್ತು. ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿಗೆ ಕಾಂಗ್ರೆಸ್‌ನ ರಾಜ್ಯ ಘಟಕ ವಿರೋಧ ವ್ಯಕ್ತಪಡಿಸಿದೆ. ಎಎಪಿ ಜತೆಗಿನ ಮೈತ್ರಿ ಮುಂದುವರಿಸಬೇಕೇ ಬೇಡವೇ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಜಾರ್ಖಂಡ್‌ನಲ್ಲಿ ಜೆಜೆಎಂ–ಕಾಂಗ್ರೆಸ್ ಮೈತ್ರಿಕೂಟದ ಸರ್ಕಾರ ಇದೆ. ಲೋಕಸಭಾ ಚುನಾವಣೆಯಲ್ಲಿ ಈ ಮೈತ್ರಿಕೂಟವು ಸುಧಾರಿತ ಪ್ರದರ್ಶನ ನೀಡಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ಕೈ ಪಾಳಯ ಒಲವು ತೋರಿದೆ. ಈ ನಡುವೆ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವೈ.ಎಸ್.ಶರ್ಮಿಳಾ ಮಂಗಳವಾರ ಭೇಟಿ ಮಾಡಿ ಸಮಾಲೋಚಿಸಿದರು.

### ಭಯೋತ್ಪಾದಕ ಸಂಘಟನೆ ನಂಟು: ಆರೋಪಿ ವಶಕ್ಕೆ

ಶಿರಸಿ: ಭಯೋತ್ಪಾದಕ ಸಂಘಟನೆ ಜೊತೆಗಿನ ಸಂಪರ್ಕದ ಆರೋಪದ ಹಿನ್ನೆಲೆಯಲ್ಲಿ ತಾಲ್ಲೂಕಿನ ದಾಸನಕೊಪ್ಪದ ಅಬ್ದುಲ್ ಶಕ್ಕೂರ್ ಎಂಬಾತನನ್ನು ಎನ್‌ಐಎ ಅಧಿಕಾರಿಗಳು, ಮಂಗಳವಾರ ವಶಕ್ಕೆ ಪಡೆದು ವಿಚಾರಣೆಗಾಗಿ ಬೆಂಗಳೂರಿಗೆ ಕರೆದೊಯ್ದಿದ್ದಾರೆ.

‘ದುಬೈನಲ್ಲಿ ಕೆಲಸ ಮಾಡುವ ಅಬ್ದುಲ್ ಶಕ್ಕೂರ ಬಕ್ರೀದ್ ಆಚರಣೆಗೆ ಕೆಲ ದಿನಗಳ ಹಿಂದೆ ಗ್ರಾಮಕ್ಕೆ ಬಂದಿದ್ದ. ಆನ್‌ಲೈನ್ ಮೂಲಕ ಭಯೋತ್ಪಾದಕ ಸಂಘಟನೆ ಜೊತೆ ಹೊಂದಿದ ಮತ್ತು ಪಾಸ್‌ಪೋರ್ಟ್‌ಗೆ ಸಂಬಂಧಿಸಿದಂತೆ ನಕಲಿ ದಾಖಲೆ ನೀಡಿದ ಆರೋಪವಿದೆ. ಬನವಾಸಿ ಪೊಲೀಸರ ಸಹಕಾರದೊಂದಿಗೆ ಎನ್‌ಐಎ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು. 2017ರಲ್ಲೂ ಈತನನ್ನು ಎನ್‌ಐಎ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು’ ಎಂದು ಮೂಲಗಳು ತಿಳಿಸಿವೆ.



**ಪ್ರಶಸ್ತಿ ಪ್ರದಾನ**

ನಗರದ ನಯನ ಸಭಾಂಗಣದಲ್ಲಿ ಮಂಗಳವಾರ ವಿಶ್ವಮಾನವ ರಾಷ್ಟ್ರ ಕವಿ ಕುವೆಂಪು ಕಲಾನಿಕೇತನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಚಲನಚಿತ್ರ ನಟ ಹೊನ್ನವಳ್ಳಿ ಕೃಷ್ಣ ಮತ್ತು ಜಲಜಾ ಹೊನ್ನವಳ್ಳಿ ಕೃಷ್ಣ ದಂಪತಿಗೆ ‘ನಟಸಾರ್ವಭೌಮ ಡಾ. ರಾಜ್‌ಕುಮಾರ್ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ನಟರಾದ ಡಿಂಗ್ರಿ ನಾಗರಾಜ್, ಶರತ್ ಲೋಹಿತಾಶ್ವ, ವಿಶ್ವಮಾನವ ರಾಷ್ಟ್ರ ಕವಿ ಕುವೆಂಪು ಕಲಾನಿಕೇತನ ಅಧ್ಯಕ್ಷ ಕುವೆಂಪು ಪ್ರಕಾಶ್, ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ಚಲನಚಿತ್ರ ನಿರ್ಮಾಪಕ ಎಸ್.ಎ. ಚನ್ನೇಗೌಡ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ವ.ಚ. ಚನ್ನೇಗೌಡ, ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

## ‘ಆಂಗ್ಲಮಾಧ್ಯಮ ಸೆಳೆತ ಆತ್ಮಹತ್ಯೆಗೆ ಸಮಾನ’

ನವದೆಹಲಿ (ಪಿಟಿಐ): ‘ಸರ್ಕಾರಿ ಶಾಲೆಗಳಲ್ಲಿಯೇ ಈಗ ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದರೂ, ಪೋಷಕರು ಇಂಗ್ಲಿಷ್ ಮಾಧ್ಯಮ ಶಾಲೆಗಳತ್ತಲೇ ಹೆಚ್ಚು ಆಕರ್ಷಣೆಗೆ ಒಳಗಾಗುತ್ತಿರುವುದು ಆತ್ಮಹತ್ಯೆಗೆ ಸಮಾನವಾದುದು’ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ಡಿ.ಪಿ.ಸಕ್ಲಾನಿ ಅವರು ಟೀಕಿಸಿದ್ದಾರೆ.

ಮಂಗಳವಾರ ಪಿಟಿಐ ಸುದ್ದಿಸಂಸ್ಥೆಯ ಸಂಪಾದಕೀಯ ಬಳಗದ ಜೊತೆಗಿನ ಸಂವಾದದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ ಅವರು, ಪ್ರಸ್ತುತ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ತರಬೇತಿ ಪಡೆದ ಶಿಕ್ಷಕರು ಇಲ್ಲ. ಇಂಗ್ಲಿಷ್ ಮಾಧ್ಯಮ ಶಿಕ್ಷಣದಲ್ಲಿರುವ ಈಗಿನ ಪಠ್ಯದಿಂದಾಗಿ ಮಕ್ಕಳು ಈ ನೆಲದ ಸಂಸ್ಕೃತಿ, ಬೇರುಗಳಿಂದಲೂ ದೂರವಾಗುತ್ತಿದ್ದಾರೆ ಎಂದು ವಿಷಾದಿಸಿದರು.

‘ಪೋಷಕರು ಇಂಗ್ಲಿಷ್ ಮಾಧ್ಯಮ ಶಿಕ್ಷಣದ ಶಾಲೆಗಳತ್ತ ಒಲವು ಹೊಂದಿದ್ದಾರೆ. ತರಬೇತಿ ಪಡೆದ ಶಿಕ್ಷಕರಿಲ್ಲದಿದ್ದರೂ ಅಂತಹ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಬಯಸುತ್ತಾರೆ. ಇಂತಹ ಮನಸ್ಥಿತಿಯು ಆತ್ಮಹತ್ಯೆಗೆ ಕಡಿಮೆ ಏನಲ್ಲ. ಇದೇ ಕಾರಣದಿಂದಲೇ ನೂತನ ಶಿಕ್ಷಣ ನೀತಿಯು ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡುವುದಕ್ಕೆ ಒತ್ತು ನೀಡಲಿದೆ’ ಎಂದು ಹೇಳಿದರು.

ಕೇಂದ್ರ ಶಿಕ್ಷಣ ಸಚಿವರು ಈಗ ಒಡಿಶಾದ ಬುಡಕಟ್ಟು ಜನರ ಭಾಷೆಯಲ್ಲೂ ಪ್ರಾಥಮಿಕ ಪಠ್ಯಕ್ರಮ ರೂಪಿಸಲು ಒತ್ತು ನೀಡಿದ್ದಾರೆ. ಪಠ್ಯಕ್ರಮದಲ್ಲಿ ಸ್ಥಳೀಯ ಪರಿಸರ, ಸಂಸ್ಕೃತಿ ಬಿಂಬಿಸುವ ಪೂರಕ ಚಿತ್ರಗಳು, ಕತೆಗಳು, ಗೀತೆಗಳು ಇರಲಿವೆ. ಇದು, ಒಟ್ಟಾರೆಯಾಗಿ ಮಕ್ಕಳಲ್ಲಿ ಮಾತಿನ ಕೌಶಲ ಹೆಚ್ಚಿಸಲಿದ್ದು, ಕಲಿಕೆಯ ಫಲಶ್ರುತಿಯೂ ಇರಲಿದೆ ಎಂದರು.

### 126 ಕೆರೆ ತುಂಬಿಸಲು ಕೆ.ಸಿ ವ್ಯಾಲಿ ನೀರು; ಬೈರತಿ ಸುರೇಶ್ ನೇತೃತ್ವದಲ್ಲಿ ಸಭೆ

# ‘ಸಂಸ್ಕರಿಸಿದ ನೀರು ಕರಾರಿನಂತೆ ಹರಿಸಿ’

ಪ್ರಜಾವಾಣಿ ವಾರ್ತೆ

ಕೋಲಾರ: ಈ ಹಿಂದೆ ಆಗಿರುವ ಕರಾರಿನಂತೆ ಕೆ.ಸಿ.ವ್ಯಾಲಿ ಕೊಳಚೆ ನೀರನ್ನು ಸಂಸ್ಕರಿಸಿ ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕಿನ 126 ಕೆರೆಗಳಿಗೆ ಹರಿಸಬೇಕು ಎಂದು ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಮಂಗಳವಾರ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ ಸುಧಾಕರ್, ಕೋಲಾರ ಜಿಲ್ಲೆಯ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕೆ.ಸಿ ವ್ಯಾಲಿ ಸಂಸ್ಕರಣ ಘಟಕದಿಂದ ಕರಾರಿನಂತೆ 310 ದಶಲಕ್ಷ ಲೀಟರ್ ಹರಿಸಿ ಕೆರೆ ತುಂಬಿಸಬೇಕು ಎಂದರು.

‘ಕಳೆದ ಕೆಲ ತಿಂಗಳಿನಿಂದ 140 ದಶಲಕ್ಷ ಲೀಟರ್ ಅನ್ನು ಮಾತ್ರ ನೀಡಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ವರ್ಷದಿಂದ ಸತತ ಬರಗಾಲವಿದ್ದು ಮಳೆ ಪ್ರಮಾಣ ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನೇರವಾಗಿ ಕೋಲಾರ ಜಿಲ್ಲೆ ಮತ್ತು ಚಿಂತಾಮಣಿ ತಾಲ್ಲೂಕಿನ ಕೆರೆಗಳಿಗೆ ಹರಿಸಬೇಕಾದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಹೊಸಕೋಟೆ ಮತ್ತು ಆನೇಕಲ್ ಪಟ್ಟಣಗಳಿಗೆ ಬಿಡುತ್ತಿರುವುದು ಸರಿಯಾದ ಕ್ರಮವಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ಕೆ.ಸಿ.ವ್ಯಾಲಿ ತ್ಯಾಜ್ಯ ನೀರನ್ನು ಸಂಸ್ಕರಿಸುವ ಎರಡು ಘಟಕಗಳ ಯಂತ್ರೋಪಕರಣಗಳು ಹೊಸದು. ಅದರಲ್ಲಿ ಒಂದು ದುರಸ್ತಿಯಲ್ಲಿದೆ ಎಂದು ಹೇಳುತ್ತೀರಿ. ಇನ್ನೊಂದು ಯಂತ್ರದ ಮೂಲಕ ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿಗೆ ಹರಿಸುವುದನ್ನು ಬಿಟ್ಟು ಆನೇಕಲ್ ತಾಲ್ಲೂಕಿಗೆ ಏಕೆ ಹರಿಸುತ್ತಿದ್ದೀರಿ’ ಎಂದು ಏರು ಧ್ವನಿಯಲ್ಲಿ ಪ್ರಶ್ನಿಸಿ ಸಣ್ಣ ನೀರಾವರಿ ಇಲಾಖೆಯ ಮುಖ್ಯ ಎಂಜಿನಿಯರ್ ಅನ್ನು ತರಾಟೆಗೆ ತೆಗೆದುಕೊಂಡರು.

**ಮುಖ್ಯಾಂಶಗಳು**

- ಕೆ.ಸಿ ವ್ಯಾಲಿ ಕುರಿತು ಬೆಂಗಳೂರಿನಲ್ಲಿ ಸಭೆ
- ಹೊಸಕೋಟೆ,ಆನೇಕಲ್‌ಗೆ ಹರಿಸುತ್ತಿರುವುದಕ್ಕೆ ಆಕ್ಷೇಪ
- ಮೊದಲು ಕೋಲಾರ ಜಿಲ್ಲೆಗೆ ನೀರು ಹರಿಸಲು ನಿರ್ದೇಶನ

**ಶಾಸಕರಿಂದಲೂ ಆಕ್ಷೇಪ:** 108 ದಶಲಕ್ಷ ಲೀಟರ್ ತ್ಯಾಜ್ಯ ನೀರು ಸಂಸ್ಕರಿಸುವ ಘಟಕ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಕಾರಣ ನೀಡಿ ಅದನ್ನೇ ಆನೇಕಲ್‌ಗೆ ಪೂರೈಸುತ್ತಿದ್ದೀರಿ ಎಂದು ಕೋಲಾರ ಜಿಲ್ಲೆಯ ಶಾಸಕರು ಒಟ್ಟಾಗಿ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ಮೇಲೆ ರೇಗಿದರು.

ಆಗ ಮಧ್ಯ ಪ್ರವೇಶಿಸಿದ ಬೈರತಿ ಸುರೇಶ್ ಮತ್ತು ಸುಧಾಕರ್, ಈ ಕುರಿತು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಅವರನ್ನು ಪ್ರಶ್ನಿಸಿದರು.



ಬೆಂಗಳೂರಿನಲ್ಲಿ ಕೆ.ಸಿ.ವ್ಯಾಲಿ ವಿಚಾರವಾಗಿ ಮಂಗಳವಾರ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ ನೇತೃತ್ವದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು

**ಬೋಸರಾಜು ಜೊತೆ ಮಾತುಕತೆ**

ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅವರಿಗೆ ಕರೆ ಮಾಡಿದ ಬೈರತಿ ಸುರೇಶ್, ಸಣ್ಣ ನೀರಾವರಿ ಇಲಾಖೆ ಮುಖ್ಯ ಎಂಜಿನಿಯರ್ ಮತ್ತು ಅಧಿಕಾರಿಗಳು ಮಾಡಿರುವ ಅಚಾತುರ್ಯವನ್ನು ಗಮನಕ್ಕೆ ತಂದರು.

ಮೂಲ ಒಪ್ಪಂದವನ್ನು ಉಲ್ಲಂಘಿಸಿ ತಮ್ಮ ಇಲಾಖೆಯ ಮುಖ್ಯ ಎಂಜಿನಿಯರ್ ಹಾಗೂ ಅಧಿಕಾರಿಗಳು ಕೋಲಾರ ಜಿಲ್ಲೆಗೆ ಹರಿಯುವ ಸಂಸ್ಕರಿಸಿದ ತ್ಯಾಜ್ಯ ನೀರಿನ ದೊಡ್ಡಕೊಳವೆಯಲ್ಲಿ ರಂಧ್ರ ಮಾಡಿ ಅದರ ಮೂಲಕ ಹೊಸಕೋಟೆ ತಾಲ್ಲೂಕಿನ ಕೆರೆಗಳಿಗೆ ಹರಿಸುತ್ತಿದ್ದಾರೆ ಎಂದು ಹೇಳಿದರು. ಈ ಬಗ್ಗೆ ಅಧಿಕಾರಿಗಳ ಸಭೆಯನ್ನು ಕರೆದು ಪರಿಶೀಲಿಸುವುದಾಗಿ ಬೋಸರಾಜು ತಿಳಿಸಿದರು.

ಆಗ ಅಧ್ಯಕ್ಷರು, ‘ತ್ಯಾಜ್ಯ ನೀರನ್ನು ಸಂಸ್ಕರಿಸಿ ಸಣ್ಣ ನೀರಾವರಿ ಇಲಾಖೆಯ ಕೆ.ಸಿ ವ್ಯಾಲಿ ಘಟಕಕ್ಕೆ ಹರಿಸುವುದು ನಮ್ಮ ಕೆಲಸ. ಯಾವ ಜಿಲ್ಲೆಗೆ, ಯಾವ ತಾಲ್ಲೂಕಿಗೆ ಎಷ್ಟು ನೀರು ಬಿಡಬೇಕು ಅಥವಾ ಹರಿಸುವ ಕೆಲಸ ನಮ್ಮದಲ್ಲ’ ಎಂದು ಸ್ಪಷ್ಟ ಪಡಿಸಿದರು.

ಈ ಹಂತದಲ್ಲಿ ಸಚಿವರು, ಶಾಸಕರು, ‘ಮೊದಲು ಕೋಲಾರ ಜಿಲ್ಲೆಗೆ ನೀರು ಹರಿಸಿ. ನಂತರ ಬೇಕಿದ್ದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಮತ್ತು ಆನೇಕಲ್‌ಗೆ ನೀಡಲಿ’ ಎಂದು ತಾಕೀತು ಮಾಡಿದರು.

218 ದಶಲಕ್ಷ ಲೀಟರ್ ಸಂಸ್ಕರಣ ಘಟಕದ ಉನ್ನತಿಕರಣ ಕಾಮಗಾರಿಯನ್ನು ಬೆಂಗಳೂರು ಜಲಮಂಡಳಿ ಕೈಗೆತ್ತಿಕೊಂಡಿರುವುದು ಸಭೆಯಲ್ಲಿ ತಿಳಿದ ನಂತರ ಅದನ್ನು ಅದಷ್ಟು ಬೇಗ ಪೂರ್ಣಗೊಳಿಸುವಂತೆ ಬೈರತಿ ಸುರೇಶ್ ಸೂಚಿಸಿದರು.

ಕೋಲಾರ ತಾಲ್ಲೂಕಿನ ನರಸಾಪುರ ಕೆರೆ ನಂತರ ಮಾಲೂರು ಕೆರೆಗಳು, ತದನಂತರ ಬಂಗಾರಪೇಟೆ, ಕೆ.ಜಿ.ಎಫ್, ಮುಳಬಾಗಿಲು ಮತ್ತು ಶ್ರೀನಿವಾಸಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಕೆರೆಗಳಿಗೆ ಕೆ.ಸಿ.ವ್ಯಾಲಿ ನೀರು ಹರಿಸಬೇಕು ಎಂದರು.

### ಬೆಳಗಾವಿ ಮೂಲದ 27 ವರ್ಷದ ರೋಗಿಯ ಪ್ರಾಣ ಉಳಿಸಿದ ಸೇನೆಯ ವೈದ್ಯ

# ವಿಮಾನದಲ್ಲಿ ಅಸ್ವಸ್ಥ: ತುರ್ತು ಚಿಕಿತ್ಸೆ

ಮುಂಬೈ(ಪಿಟಿಐ): ಪುಣೆಯಿಂದ ಚಂಡೀಗಢಕ್ಕೆ ಹೊರಟಿದ್ದ ಇಂಡಿಗೊ ಸಂಸ್ಥೆಯ ವಿಮಾನದಲ್ಲಿ ಪ್ರಯಾಣಿಸುವ ವೇಳೆ ಅಸ್ವಸ್ಥಗೊಂಡಿದ್ದ, ಬೆಳಗಾವಿಯ 27 ವರ್ಷದ ವ್ಯಕ್ತಿಗೆ ಸೇನೆಯ ವೈದ್ಯರೊಬ್ಬರು ತುರ್ತು ಚಿಕಿತ್ಸೆ ನೀಡಿ, ಪ್ರಾಣ ಉಳಿಸಿದ್ದಾರೆ.

ಹರಿಯಾಣದ ಚಂಡಿ ಮಂದಿರದಲ್ಲಿರುವ ಸೇನೆಯ ವೆಸ್ಟರ್ನ್ ಕಮಾಂಡ್ ಆಸ್ಪತ್ರೆಯಲ್ಲಿ ವೈದ್ಯರಾಗಿರುವ ಮೇಜರ್ ಸಿಮ್ರತ್ ರಾಜದೀಪ್ ಸಿಂಗ್ ತುರ್ತು ಚಿಕಿತ್ಸೆ ಒದಗಿಸಿದವರು.


ವಿಮಾನದಲ್ಲಿ ಲಭ್ಯವಿದ್ದ ಔಷಧಗಳನ್ನು ನೀಡಿದ್ದ ಡಾ.ಸಿಂಗ್, ಮುಂಬೈನಲ್ಲಿ ವಿಮಾನ ಇಳಿಸಿ, ರೋಗಿಯನ್ನು ಆಸ್ಪತ್ರೆಗೆ ದಾಖಲಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ.

ಸೋಮವಾರ ಈ ಘಟನೆ ನಡೆದಿದೆ. ಗೋವಾದಲ್ಲಿ ವಿಮಾನ ಏರಿದ್ದ ಪ್ರಯಾಣಿಕನಿಗೆ ಮಾರ್ಗ ಮಧ್ಯೆ ಉಸಿರಾಟದ ತೊಂದರೆ ಕಾಣಿಸಿಕೊಂಡಿದೆ. ಆಗ, ವಿಮಾನ 39 ಸಾವಿರ ಅಡಿ ಎತ್ತರದಲ್ಲಿ ಸಾಗುತ್ತಿತ್ತು.

**ಮುಖ್ಯಾಂಶಗಳು**

- ಗೋವಾದಲ್ಲಿ ವಿಮಾನ ಏರಿದ್ದ ಪ್ರಯಾಣಿಕನಿಗೆ ಉಸಿರಾಟದ ತೊಂದರೆ
- ಪುಣೆಯಿಂದ ಚಂಡೀಗಢಕ್ಕೆ ಹೊರಟಿದ್ದ ಇಂಡಿಗೊ ಸಂಸ್ಥೆಯ ವಿಮಾನ
- ರೋಗಿಗೆ ಒಂದು ಗಂಟೆ ಸತತ ಆಮ್ಲಜನಕ ಪೂರೈಕೆ

‘ಆತನ ಜೊತೆಯಲ್ಲಿಯೇ ಪ್ರಯಾಣಿಸುತ್ತಿದ್ದ ಸಹೋದರನೊಂದಿಗೆ ಮಾತನಾಡಿ, ರೋಗಿಯ ವೈದ್ಯಕೀಯ ಇತಿಹಾಸ ಕುರಿತು ಮಾಹಿತಿ ಪಡೆದೆ. ರೋಗಿಯು ಚಿಕ್ಕ ಗಾತ್ರದ ಮೂತ್ರಪಿಂಡಗಳನ್ನು ಹೊಂದಿದ್ದು, ಅವು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಣೆ ಮಾಡದಿರುವ ಕುರಿತು ತಿಳಿಯಿತು’ ಎಂದು ಡಾ.ಸಿಂಗ್ ಅವರು ಪಿಟಿಐ ಜೊತೆ ಮಂಗಳವಾರ ದೂರವಾಣಿ ಮೂಲಕ ಮಾತನಾಡಿ ತಿಳಿಸಿದ್ದಾರೆ.



‘ಆರೋಗ್ಯ ಸ್ಥಿತಿ ಗಂಭೀರವಾಗಿತ್ತಲ್ಲದೇ, ರೋಗಿಯು ನಿದ್ರೆಗೆ ಜಾರುತ್ತಿದ್ದರು. ಅವರ ರಕ್ತದೊತ್ತಡವೂ ತೀವ್ರವಾಗಿ ಹೆಚ್ಚುವ ಜೊತೆಗೆ ಇತರ ಆರೋಗ್ಯ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಂಡು, ಉಸಿರಾಡಲು ಕಷ್ಟಪಡುತ್ತಿದ್ದರು’ ಎಂದು ವಿವರಿಸಿದ್ದಾರೆ.

‘ಅಗತ್ಯ ಔಷಧಗಳು ಹಾಗೂ ವೈದ್ಯಕೀಯ ಉಪಕರಣಗಳು ವಿಮಾನ ಸಿಬ್ಬಂದಿ ಬಳಿ ಇದ್ದವು. ಅವುಗಳನ್ನು ಬಳಸಿ ತುರ್ತು ಔಷಧಗಳನ್ನು ರೋಗಿಗೆ ನೀಡಿದೆ. ಒಂದು ಗಂಟೆ ಕಾಲ ಸತತ ಆಮ್ಲಜನಕ ಪೂರೈಸಲಾಯಿತು’

‘ವಿಮಾನವನ್ನು ಮತ್ತಷ್ಟು ಕಡಿಮೆ ಎತ್ತರದಲ್ಲಿ ಹಾರಾಡುವಂತೆ ಮಾಡಿ, ನಂತರ ಸಮೀಪದ ವಿಮಾನ ನಿಲ್ದಾಣದಲ್ಲಿ ‘ಎಮರ್ಜೆನ್ಸಿ ಲ್ಯಾಂಡಿಂಗ್’ ಮಾಡುವಂತೆಯೂ ಸೂಚಿಸಿದೆ. ಮುಂಬೈ ವಿಮಾನ ನಿಲ್ದಾಣವೇ ಹತ್ತಿರವಿದ್ದ ಕಾರಣ, ಅಲ್ಲಿಯೇ ವಿಮಾನವನ್ನು ಇಳಿಸಲಾಯಿತು. ನಂತರ, ರೋಗಿಯನ್ನು ಮುಂಬೈ ಮಹಾನಗರ ಪಾಲಿಕೆಯ ಆರ್.ಎನ್.ಕೂಪರ್ ಆಸ್ಪತ್ರೆಗೆ ದಾಖಲಿಸಲಾಯಿತು’ ಎಂದು ಡಾ.ಸಿಂಗ್ ವಿವರಿಸಿದ್ದಾರೆ.

‘ರೋಗಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರೊಂದಿಗೆ ನಾನು ಮಾತನಾಡಿದ್ದೇನೆ. ರೋಗಿಗೆ ತುರ್ತು ಡಯಾಲಿಸಿಸ್ ಚಿಕಿತ್ಸೆ ನೀಡಲಾಗಿದ್ದು, ಆತ ಚೇತರಿಸಿಕೊಳ್ಳುತ್ತಿದ್ದಾನೆ’ ಎಂದೂ ಡಾ.ಸಿಂಗ್ ಅವರು ಹೇಳಿದ್ದಾರೆ.

# ತಿರುಮೇನಹಳ್ಳಿ: ದುರಸ್ತಿಯಾಗದ ರಸ್ತೆ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಮಂಡೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ತಿರುಮೇನಹಳ್ಳಿಯ ಭೋವಿ-ಕಾಲೋನಿಯಲ್ಲಿ ಸಮರ್ಪಕ ರಸ್ತೆ ಹಾಗೂ ಚರಂಡಿ ನಿರ್ಮಿಸದ ಕಾರಣ ರಸ್ತೆಯಲ್ಲಿ ಕೊಳಚೆ ನೀರು ನಿಂತು ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗುತ್ತಿದೆ ಎಂದು ಗ್ರಾಮಸ್ಥರು ದೂರಿದರು.

ತಿರುಮೇನಹಳ್ಳಿಯ ಭೋವಿ ಕಾಲೊನಿಯಲ್ಲಿ ಐವತ್ತರಿಂದ ಅರವತ್ತು ಕುಟುಂಬದವರು ವಾಸಿಸುತ್ತಿದ್ದಾರೆ. ಈ ಕಾಲೊನಿಗೆ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲ. ಹೀಗಾಗಿ ಮಳೆ ಸುರಿದಾಗ, ನೀರಿನ ಜೊತೆಗೆ ಕೊಳಚೆ ನೀರು ರಸ್ತೆಯಲ್ಲಿ ಹರಿಯುತ್ತದೆ. ಅಲ್ಲಲ್ಲಿ ಕೊಳಚೆ ನೀರು ನಿಂತು ದುರ್ವಾಸನೆ ಬಿರುತ್ತಿದೆ. ಇದರಿಂದ ಜನರ ಸಂಚಾರಕ್ಕೂ ತೊಂದರೆಯಾಗುತ್ತಿದೆ ಎಂದು ತಿರುಮೇನಹಳ್ಳಿ ಚಂದ್ರಶೇಖರ್ ದೂರಿದರು.

‘ಚರಂಡಿ ಮಾಡಿಕೊಡಿ ಎಂದು ಮಂಡೂರು ಪಂಚಾಯತಿ ಅಧಿಕಾರಿಗಳಿಗೆ ಏಳೆಂಟು ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದರೂ ಪ್ರಯೋಜನವಾಗಿಲ್ಲ. ಈ ಹಿಂದೆ ಶಾಸಕರಾಗಿದ್ದ ಅರವಿಂದ ಲಿಂಬಾವಳಿ ಅವರು ಕಾಲೊನಿಗೆ ಭೇಟಿ ನೀಡಿದಾಗ ಅಧಿಕಾರಿಗಳಿಗೆ ಚರಂಡಿ ನಿರ್ಮಿಸುವಂತೆ ಸೂಚಿಸಿದ್ದರು. ಆದರೂ ಈವರೆಗೆ ಕಾಮಗಾರಿ ಕೈಗೆತ್ತಿಕೊಂಡಿಲ್ಲ. ಚರಂಡಿ, ರಸ್ತೆ ಮಾಡಿಸಿಕೊಡುವಂತೆ ರಾಷ್ಟ್ರಪತಿಯವರಿಗೂ ಇ-ಮೇಲ್ ಮೂಲಕ ಮನವಿ ಸಲ್ಲಿಸಿದ್ದಾರೆ. ಆದರೂ ಪ್ರಯೋಜನವಾಗಿಲ್ಲ‘ ಎಂದರು.



ತಿರುಮೇನಹಳ್ಳಿಯಲ್ಲಿ ರಸ್ತೆಯ ದುಸ್ಥಿತಿ

ಚರಂಡಿ ನಿರ್ಮಿಸದೆ ಇರುವುದರಿಂದ ಕೊಳಚೆ ನೀರು ರಸ್ತೆ ಮೇಲೆ ನಿಂತು ದುರ್ವಾಸನೆ ಬಿರುತ್ತಿದೆ. ಇದರಿಂದಾಗಿ ಸೊಳ್ಳೆಗಳ ಆವಾಸ ಸ್ಥಾನವಾಗಿದೆ. ಸೊಳ್ಳೆಗಳಿಂದಾಗಿ ಜನರು ಸಾಂಕ್ರಾಮಿಕ ರೋಗಗಳಾದ ಡೆಂಗಿ, ಮಲೇರಿಯಾ, ಚಿಕೂನ ಗುನ್ಯಾದಂತಹ ಕಾಯಿಲೆಗಳು ಹರಡುವ ಸಾಧ್ಯತೆ ಇದೆ ಎಂದು ಗ್ರಾಮದ ರವಿ ಆಕ್ರೋಶ ವ್ಯಕ್ತಪಡಿಸಿದರು.

‘ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಇಲ್ಲ-ವಾದ್ದರಿಂದ ಮನೆಯಲ್ಲಿ ಪಾತ್ರೆ ತೊಳೆದ ನೀರನ್ನು, ಮನೆಗಳ ಎದುರು ಗುಂಡಿಗಳನ್ನು ಮಾಡಿಕೊಂಡು ಬಿಡುತ್ತಿದ್ದೇವೆ. ಪಾತ್ರೆ ತೊಳೆದ ನೀರು ತುಂಬಿದ ನಂತರ ಊರ ಹೊರಗಡೆ ಹಾಕುವ ಸ್ಥಿತಿ ಇದೆ. ಇಲ್ಲಿನ ಸ್ಥಿತಿ ಹೇಳತೀರದಾಗಿದೆ’ ಎಂದು ಗ್ರಾಮದ ನಿವಾಸಿ ವಿನೋದಮ್ಮ ಹೇಳಿದರು.

ಈಗ ಮಳೆಗಾಲ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಮಳೆ ನೀರಿನ ಹರಿಯುವ ಪ್ರಮಾಣ ಹೆಚ್ಚಾಗುತ್ತದೆ. ಅದರೊಂದಿಗೆ ಕೊಳಚೆ ನೀರು ಸೇರಿಕೊಳ್ಳುತ್ತದೆ. ಬಿಬಿಎಂಪಿ ಈ ಬಗ್ಗೆ ತಕ್ಷಣ ಗಮನಹರಿಸಿ, ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಅಪಘಾತವೆಂದು ಬಿಂಬಿಸಿ ₹63 ಲಕ್ಷ ಮೌಲ್ಯದ ಮದ್ಯ ವಂಚನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೋಟ್ಯಂತರ ರೂಪಾಯಿ ಮದ್ಯ ಸಾಗಿಸುತ್ತಿದ್ದ ಲಾರಿ ಚಾಲಕ ಮತ್ತು ಇತರರು ಮಾರ್ಗ ಮಧ್ಯದಲ್ಲಿ ಲಾರಿ ಉರುಳಿ ಬಿದ್ದಿದೆ ಎಂದು ಬಿಂಬಿಸಿ, ₹63.16 ಲಕ್ಷ ಮೌಲ್ಯದ ಮದ್ಯದ ಬಾಕ್ಸ್‌ಗಳನ್ನು ತಾವೇ ಇಟ್ಟುಕೊಂಡು ವಂಚಿಸಿದ ಆರೋಪದಡಿ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗಾವಿಯ ಟ್ರಾನ್ಸ್‌ಪೋರ್ಟ್‌ವೊಂದರ ಶಾಖಾ ಮ್ಯಾನೇಜರ್ ಪರಮೇಶ್ವರ ಧನರಾಜ್ ಅವರು ನೀಡಿದ ದೂರಿನ ಅನ್ವಯ ಚಾಲಕ ಸೇರಿ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಜೂನ್ 8ರ ರಾತ್ರಿ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಮದ್ಯದ ತಯಾರಿಕೆ ಕಂಪನಿಗೆ ಸೇರಿದ 1,100 ಮದ್ಯದ ಪೆಟ್ಟಿಗೆಗಳನ್ನು ಲೋಡ್ ಮಾಡಿಕೊಂಡ ಚಾಲಕ ಬೆಳಗಾವಿಯ ರಾಯಬಾಗದಿಂದ ಬೀದರ್‌ಗೆ ಹೊರಟರು. ಜೂನ್ 10ರ ಬೆಳಿಗ್ಗೆ 10.55ಕ್ಕೆ ಲಾರಿ ಮಾಲೀಕ ಶಿವಕುಮಾರ ಅವರು ಪರಮೇಶ್ವರ ಅವರಿಗೆ ಕರೆ ಮಾಡಿ, 'ವಾಹನದ ಗೇರ್ ಬಾಕ್ಸ್ ಕೆಟ್ಟು ಹೋಗಿದೆ' ಎಂದು ಹೇಳಿದರು. ಮರುದಿನ (ಜೂ.11) ಬೆಳಿಗ್ಗೆ 11ಕ್ಕೆ ಮತ್ತೆ ಕರೆ ಮಾಡಿ ಸಂಜೆವರೆಗೂ ಬೀದರ್ ತಲುಪುವುದಾಗಿ ಹೇಳಿದರು. ಆ ಹೊತ್ತಿಗೆ ಕರೆ ಮಾಡಿದರೂ ಸ್ವೀಕರಿಸಲಿಲ್ಲ ಎಂದು ಮ್ಯಾನೇಜರ್ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ.

ಜೂ.12ರ ಬೆಳಿಗ್ಗೆ 8ಕ್ಕೆ ವಾಹನದ ಮಾಲೀಕ ಮತ್ತೆ ಮ್ಯಾನೇಜರ್‌ಗೆ ಕರೆ ಮಾಡಿ, 'ಮದ್ಯ ಸಾಗಿಸುತ್ತಿದ್ದ ಲಾರಿ ಫರಹತಾಬಾದ್ ಸಮೀಪ ಉರುಳಿ ಬಿದ್ದಿದೆ' ಎಂದರು. ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ದೂರು ಕೊಡುವ ಬದಲು ವಾಹನದ ಮಾಲೀಕ ಸಂಚಾರ ಪೊಲೀಸ್ ಠಾಣೆ–1ರಲ್ಲಿ 1,100 ಮದ್ಯದ ಪೆಟ್ಟಿಗೆಗಳ ಪೈಕಿ ಸುಮಾರು 603 ಪೆಟ್ಟಿಗೆಗಳು ಕಳುವಾಗಿದ್ದಾಗಿ ದೂರು ಕೊಟ್ಟರು ಎಂದು ಮ್ಯಾನೇಜರ್ ದೂರಿನಲ್ಲಿ ತಿಳಿಸಿದ್ದಾರೆ.

ಲಾರಿ ಉರುಳಿ ಬಿದ್ದ ಸ್ಥಳಕ್ಕೆ ಅಬಕಾರಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು. ಗಾಯವಾಗದೆ ಇದ್ದರೂ ವಾಹನದ ಚಾಲಕ ತಲೆಗೆ ಪಟ್ಟಿ ಕಟ್ಟಿಕೊಂಡಿದ್ದರು. ಲಾರಿಯ ಗಾಜಿಗೂ ಯಾವುದೇ ಹಾನಿಯಾಗಿರಲಿಲ್ಲ. ಲಾರಿಯಲ್ಲಿ ವಿವಿಧ ಬ್ರ್ಯಾಂಡ್‌ಗಳ ₹ 1.81 ಕೋಟಿ ಮೌಲ್ಯದ ಮದ್ಯದ ಬಾಕ್ಸ್‌ಗಳು ಇದ್ದವು. ಅವುಗಳ ಪೈಕಿ ₹63.16 ಲಕ್ಷ ಮೌಲ್ಯದ ಮದ್ಯದ ಪೆಟ್ಟಿಗೆಗಳು ಲಾರಿ ಉರುಳಿ ಬಿದ್ದ ಸ್ಥಳದಲ್ಲಿ ಇರಲಿಲ್ಲ. ವಾಹನದ ಚಾಲಕ ಮತ್ತು ಇತರರು ನಂಬಿಕೆ ದ್ರೋಹ ಮಾಡಿದ್ದಾರೆ ಎಂದು ಆರೋಪಿಸಿ ಮ್ಯಾನೇಜರ್ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

## 'ಶನಿಯಂತೆ ಕಾಡಲಿದ್ದಾರೆ ನಾಯ್ಡು–ನಿತೀಶ್'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಎನ್‌ಡಿಎ ಪಾಲುದಾರರಾಗಿರುವ ತೆಲುಗು ದೇಶಂ ಪಕ್ಷದ ಮುಖ್ಯಸ್ಥ, ಆಂಧ್ರದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಮತ್ತು ಜೆಡಿಯು ಮುಖಂಡ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶನಿಗಳಂತೆ ಕಾಡಲಿದ್ದಾರೆ. ಮೋದಿ ಅವರು ಬಹುದಿನಗಳವರೆಗೆ ಪ್ರಧಾನಿ ಹುದ್ದೆಯಲ್ಲಿ ಮುಂದುವರಿಯುವುದಿಲ್ಲ' ಎಂದು ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಅಖಿಲ ಭಾರತ ವೀರಶೈವ – ಲಿಂಗಾಯತ ಮಹಾಸಭಾ ಮಂಗಳವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ನೂತನ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

'ಬಿಜೆಪಿಗೆ ಇನ್ನೂ ಹತ್ತು ಸ್ಥಾನಗಳು ಕಡಿಮೆ ಬಂದಿದ್ದರೆ ಮೋದಿ ಪ್ರಧಾನಿ ಆಗುತ್ತಿರಲಿಲ್ಲ. ಕೇಂದ್ರದಲ್ಲಿ ಕಿಚಡಿ ಸರ್ಕಾರ ರಚನೆಯಾಗಿದ್ದು, ಬಹುದಿನಗಳವರೆಗೆ ಮೋದಿ ಹುದ್ದೆಯಲ್ಲಿ ಇರುತ್ತಾರೆ ಎಂಬ ನಂಬಿಕೆ ಇಲ್ಲ' ಎಂದರು.

ಚರ್ಚೆಗೆ ಗ್ರಾಸವಾದ ಆರ್‌ಎಸ್‌ಎಸ್ ತೀರ್ಮಾನ

# ಬಿಜೆಪಿ: ಪದಾಧಿಕಾರಿಗಳು ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಮುಗಿದ ಹಿಂದೆಯೇ ರಾಜ್ಯ ಬಿಜೆಪಿಯ ಹತ್ತು ವಲಯ ಸಂಘಟನಾ ಕಾರ್ಯದರ್ಶಿಗಳನ್ನು ಆರ್‌ಎಸ್‌ಎಸ್ ವಾಪಸ್ ಕರೆಯಿಸಿಕೊಂಡಿರುವುದು ಪಕ್ಷದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಸಂಘಟನಾ ಕಾರ್ಯದರ್ಶಿ ಜಿ.ವಿ. ರಾಜೇಶ್ ಅವರನ್ನು ವಾಪಸ್ ಕರೆಸಿಕೊಂಡ ಬೆನ್ನಲ್ಲೇ ಈ ವಿದ್ಯಮಾನ ನಡೆದಿದೆ. ಇದು ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡುವಿನ ಮುಸುಕಿನ ಗುದ್ದಾಟದ ಪರಿಣಾಮ ಎಂದು ಬಿಜೆಪಿ ವಲಯದಲ್ಲಿ ವಿಶ್ಲೇಷಿಸಲಾಗಿದೆ.

ಚುನಾವಣೆಯಲ್ಲಿ ಈ ಬಾರಿ ಸಂಘದ ಕಾರ್ಯಕರ್ತರು ಬಿಜೆಪಿ ಪರ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಿಲ್ಲ ಎಂಬ ವದಂತಿ ಹರಡಿತ್ತು. ಚುನಾವಣೆ ಮುಗಿದ ಬಳಿಕ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಪರೋಕ್ಷವಾಗಿ ಪ್ರಧಾನಿ ಕುರಿತು ಆಡಿದ ಮಾತುಗಳು ಬಿಜೆಪಿ, ಸಂಘದ ಮಧ್ಯೆ ಕಂದಕ ಮೂಡಿರುವುದರ ಸೂಚನೆ ಎಂಬ ಚರ್ಚೆ ಇದೆ.

ಬಿ.ಎಲ್.ಸಂತೋಷ್ ಅವರು ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಆಗಿದ್ದಾಗ ಎಲ್ಲ ವಿಚಾರಗಳಲ್ಲಿ ಹಸ್ತಕ್ಷೇಪ ನಡೆಯುತ್ತಿದೆ ಎಂಬ ಟೀಕೆ ಕೇಳಿಬಂದಿತ್ತು. ಪದಾಧಿಕಾರಿಗಳ ನೇಮಕ, ಟಿಕೆಟ್ ಹಂಚಿಕೆ, ವಿಧಾನಪರಿಷತ್, ರಾಜ್ಯಸಭೆಗಳಿಗೆ ನಾಮಕರಣದಲ್ಲೂ ಸಂಘಟನಾ ಕಾರ್ಯದರ್ಶಿ ಮಾತೇ ಅಂತಿಮವಾಗುತ್ತಿತ್ತು. ಹೀಗಾಗಿ ನಾಯಕರು ಸ್ವಷ್ಟ ತೀರ್ಮಾನ ಕೈಗೊಳ್ಳಲಾಗುತ್ತಿಲ್ಲ ಎಂಬ ಬೇಸರ ಹಲವು ನಾಯಕರಲ್ಲಿದೆ.

ಸಂಘದ ನಿರ್ದೇಶನಗಳನ್ನು ಪಕ್ಷಕ್ಕೆ ತಿಳಿಸುವ ಹೊಣೆ ಸಂಘಟನಾ ಪ್ರಧಾನ ಕಾರ್ಯದರ್ಶಿಗಳದ್ದು. ಸಂಘಟನಾ ಕಾರ್ಯದರ್ಶಿಗಳು ತಮ್ಮ ಜವಾಬ್ದಾರಿ ಚೌಕಟ್ಟು ಮೀರಿ 'ಶಕ್ತಿಕೇಂದ್ರ'ವಾಗಿ ಬೆಳೆದಿದ್ದು, ಪರಿಸ್ಥಿತಿ ಜಟಿಲವಾಗಲು ಕಾರಣವಾಯಿತು ಎನ್ನಲಾಗಿದೆ.

2018 ಮತ್ತು 2023ರ ವಿಧಾನಸಭಾ ಚುನಾವಣೆಗಳಲ್ಲಿ ಟಿಕೆಟ್ ಹಂಚಿಕೆಯಲ್ಲಿ ಸಂಘಟನಾ ಕಾರ್ಯದರ್ಶಿಗಳ ಪ್ರಭಾವ ದೊಡ್ಡ ಮಟ್ಟದಲ್ಲಿತ್ತು. ಹಿರಿಯ ರಾಜಕಾರಣಿಗಳೇ ಇವರ ಮುಂದೆ ಟಿಕೆಟ್‌ಗಾಗಿ ನಿಲ್ಲುವ ಸ್ಥಿತಿ ನಿರ್ಮಾಣವಾಗಿತ್ತು. ಕಳೆದ ಲೋಕಸಭಾ ಚುನಾವಣೆಯಲ್ಲಿ ಚಿಕ್ಕೋಡಿ ಮತ್ತು ಬೀದರ್ ಕ್ಷೇತ್ರಗಳಲ್ಲಿ ಅಣ್ಣಾ ಸಾಹೇಬ ಜೊಲ್ಲೆ, ಭಗವಂತ್ ಖೂಬಾ ಅವರು ಟಿಕೆಟ್ ಪಡೆಯಲು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಯವರೇ ಕಾರಣ. ಇಲ್ಲಿ ಅಭ್ಯರ್ಥಿಗಳನ್ನು ಬದಲಿಸಿದ್ದರೆ, ಎರಡೂ ಕ್ಷೇತ್ರ ಗೆಲ್ಲಬಹುದಿತ್ತು ಎಂಬುದು ಬಿಜೆಪಿಯ ಕೆಲವು ನಾಯಕರ ನಂಬಿಕೆ.

ಈಗ ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ ಹುದ್ದೆ ಖಾಲಿ ಉಳಿದಿದೆ. ವಿಭಾಗೀಯ ಸಂಘಟನಾ ಕಾರ್ಯದರ್ಶಿಗಳ ಹುದ್ದೆಗಳೂ ತೆರವಾಗಿವೆ. ಕೇರಳದ ಪಾಲಕ್ಕಾಡ್‌ನಲ್ಲಿ ಆಗಸ್ಟ್ ಕೊನೆಯಲ್ಲಿ ನಡೆಯುವ ಸಂಘ ಮತ್ತು ಬಿಜೆಪಿ ನಾಯಕರ ಸಮನ್ವಯ ಸಭೆಯ ಬಳಿಕ ಸ್ಪಷ್ಟ ನಿರ್ದೇಶನ ಹೊರಬೀಳಬಹುದು ಎಂದು ಮೂಲಗಳು ತಿಳಿಸಿವೆ.

## ನಕಲಿ ವೈದ್ಯೆ: ಯಂತ್ರಗಳು ವಶಕ್ಕೆ



ಜಮಖಂಡಿಯಲ್ಲಿ ನಕಲಿ ವೈದ್ಯೆ ಸುರೇಖಾ ಚರಕಿ (ಎಡ ತುದಿ) ಎಂಬುವವರ ಮನೆ ಮೇಲೆ ದಾಳಿ ನಡೆಸಿದ ವೇಳೆ ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ, ಟಿಎಚ್‌ಒ ಜಿ.ಎಸ್.ಗಲಗಲಿ, ಸಿಪಿಐ ಮಲ್ಲಪ್ಪ ಮಡ್ಡಿ, ಪಿಎಸ್‌ಐ ಎನ್.ಆರ್.ಖಿಲಾರಿ ಅವರು ಮಾಹಿತಿ ಪಡೆದರು.

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ನಗರದ ಕುಂಬಾರ ಗಲ್ಲಿಯಲ್ಲಿ ಅನಧಿಕೃತವಾಗಿ ಹೆರಿಗೆ ಆಸ್ಪತ್ರೆ ನಡೆಸುತ್ತಿದ್ದ ಆರೋಪಿ ಸುರೇಖಾ ಚರಕಿ (62) ಎಂಬುವರ ಮನೆ ಮೇಲೆ ಮಂಗಳವಾರ ದಾಳಿ ನಡೆಸಿದ ಅಧಿಕಾರಿಗಳು ಆರೋಗ್ಯ ತಪಾಸಣಾ ಕೊಠಡಿಗೆ ಬೀಗ ಜಡಿದರು.

'ಎಸ್‌ಎಸ್‌ಎಲ್‌ಸಿ ಓದಿರುವ ಸುರೇಖಾ ಚರಕಿ ನಕಲಿ ವೈದ್ಯೆಯಾಗಿದ್ದು, ಗರ್ಭಿಣಿಯರ ಆರೋಗ್ಯ ತಪಾಸಣೆ ಮಾಡುವ ಖಚಿತ ಸುಳಿವಿನ ಆಧಾರದ ಮೇಲೆ ಡಾ.ಜಿ.ಎಸ್.ಗಲಗಲಿ, ಪಿಎಸ್‌ಐ ನಾಗರಾಜ ಖಿಲಾರಿ ಮತ್ತಿತರರ ಸಹಯೋಗದಲ್ಲಿ ಕಾರ್ಯಾಚರಣೆ ನಡೆಯಿತು' ಎಂದು ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ ಸುದ್ದಿಗಾರರಿಗೆ ತಿಳಿಸಿದರು.

'ಗರ್ಭಪಾತ ಮಾಡುವ ಮಾತ್ರೆ, ಔಷಧಿ, ವಿಟಮಿನ್, ನಿದ್ರೆ ಮಾತ್ರೆ, ಸಲಾಯಿನ್, ಸ್ಟೆತಾಸ್ಕೋಪ್ ಸೇರಿ ಇತರೆ ಎಲೆಕ್ಟ್ರಾನಿಕ್ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ನಗರದ ಕೃಷ್ಣಾ ಮೆಡಿಕಲ್ ಮತ್ತು ವಿಜಯಪುರದಿಂದ ಔಷಧಿಗಳನ್ನು ತರಿಸುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ. ಮುಂದಿನ ತನಿಖೆ ನಡೆಸಿ ಕ್ರಮ ಜರುಗಿಸಲಾಗುವುದು' ಎಂದರು.

'ಸ್ಕ್ಯಾನಿಂಗ್ ಮಾಡಲು ಕಳುಹಿಸುತ್ತಿದ್ದನ್ನು, ಗರ್ಭಪಾತ ಮಾಡಿರುವುದನ್ನು ವಿಚಾರಣೆ ವೇಳೆ ಆರೋಪಿ ಒಪ್ಪಿಕೊಂಡಿದ್ದಾರೆ. ಎಷ್ಟು ಜನರಿಗೆ ಚಿಕಿತ್ಸೆ ನೀಡಿದ್ದಾರೆ ಎಂಬುದಕ್ಕೆ ದಾಖಲೆಗಳಿಲ್ಲ. ಅವರ ಅಕ್ರಮ ಕಾರ್ಯಕ್ಕೆ ಸಹಕರಿಸಿದವರನ್ನು ವಿಚಾರಿಸಿ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದರು

## ರೀಲ್ಸ್ ಮಾಡಲು ಹೋಗಿ ಪ್ರಾಣ ಬಿಟ್ಟ ಯುವತಿ



ಅಪಘಾತಕ್ಕೆ ಮುನ್ನ ಕಾರಿನಲ್ಲಿ ಶ್ವೇತಾ

ಬೆಳಗಾವಿ: ಮಹಾರಾಷ್ಟ್ರದ ಸಂಭಾಜಿನಗರ ಜಿಲ್ಲೆಯ ಸುಲಿಭಂಜನ್ ಗ್ರಾಮದಲ್ಲಿ ಶ್ವೇತಾ (25) ಎಂಬುವರು ಕಾರ್‌ನ್ನು ಹಿಂದಕ್ಕೆ ಚಲಿಸಿ ರೀಲ್ಸ್ ಮಾಡುತ್ತಿದ್ದ ವೇಳೆ ಬೆಟ್ಟದಿಂದ ಬಿದ್ದು ಮೃತಪಟ್ಟಿದ್ದಾರೆ. ಅಪಘಾತದ ವಿಡಿಯೊ ತುಣುಕುಗಳು ಜಿಲ್ಲೆಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

'ಮೂವರು ಸ್ನೇಹಿತರ ಜತೆಗೆ ಸೋಮವಾರ ಸುಲಿಭಂಜನ್ ಗ್ರಾಮದ ದತ್ತ ಮಂದಿರಕ್ಕೆ ತೆರಳಿದ್ದ ಶ್ವೇತಾ ಅವರು ಕಾರ್‌ನ್ನು ಹಿಂದಕ್ಕೆ ಚಲಿಸಿ, ಬೆಟ್ಟದ ತುದಿಗೆ ನಿಲ್ಲಿಸಿ ರೀಲ್ಸ್ ಮಾಡಲು ಮುಂದಾದರು. ಸ್ನೇಹಿತರು ಹೊರಗೆ ನಿಂತು ಚಿತ್ರೀಕರಣ ಮಾಡುವಾಗ ಶ್ವೇತಾ ಕಾರ್‌ನ್ನು ಹಿಮ್ಮುಖವಾಗಿ ಚಾಲನೆ ಮಾಡಿದರು. ನಂತರ ಕಾರ್‌ನ್ನು ನಿಲ್ಲಿಸುವಂತೆ ಸ್ನೇಹಿತರು ಕೂಗಿದರೂ, ಶ್ವೇತಾ ನಿಲ್ಲಿಸಲಿಲ್ಲ. 15 ಸೆಕೆಂಡ್‌ಗಳಲ್ಲಿ ಕಾರು ಆಳ ಪ್ರಪಾತಕ್ಕೆ ಬಿದ್ದು, ಅವರು ಸ್ಥಳದಲ್ಲೇ ಪ್ರಾಣ ಬಿಟ್ಟರು' ಎಂದು ಮೂಲಗಳು ತಿಳಿಸಿವೆ.

## ಅಂಧ ಮಹಿಳೆಯ ಮೇಲೆ ಅತ್ಯಾಚಾರ: 10 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ


ಮೈಸೂರು: ಅಂಧ ಮಹಿಳೆ ಮೇಲಿನ ಅತ್ಯಾಚಾರ ಆರೋಪ ಸಾಬೀತಾಗಿದ್ದರಿಂದ, ಹುಣಸೂರು ತಾಲ್ಲೂಕಿನ ಬಿಳಿಕೆರೆಯ ಕೊಮ್ಮೇಗೌಡನ ಕೊಪ್ಪಲಿನ ನಿವಾಸಿ ಚಲುವರಾಯ (50) ಎಂಬಾತನಿಗೆ 7ನೇ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.

ಪ್ರಕರಣದ ಬಗ್ಗೆ ಅಂದಿನ ಇನ್‌ಸ್ಪೆಕ್ಟರ್ ಕೆ.ಸಿ.ಪೂವಯ್ಯ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆಯಲ್ಲಿ ಚಲುವರಾಯ ಅಪರಾಧಿಯೆಂದು ಸಾಬೀತಾಗಿದ್ದರಿಂದ ನ್ಯಾಯಾಧೀಶ ಎಂ.ರಮೇಶ್ ಅವರು 10 ವರ್ಷ ಕಠಿಣ ಶಿಕ್ಷೆ ಹಾಗೂ ₹20 ಸಾವಿರ ದಂಡ ವಿಧಿಸಿ ತೀರ್ಪು ಪ್ರಕಟಿಸಿದರು. ಸರ್ಕಾರದ ಪರವಾಗಿ ಕೆ.ನಾಗರಾಜ್ ವಾದಿಸಿದರು.

ಮಯೂರ ಓದಿರಿ

# ತಂತ್ರಜ್ಞಾನ



# ‘ಎಪಿಕೆ’ ಫೈಲ್: ಕ್ಲಿಕ್‌ಗೆ ಮುನ್ನ ಇರಲಿ ಎಚ್ಚರ

ಅವಿನಾಶ್ ಬಿ.


ಮಾರ್ಚ್ ತಿಂಗಳಲ್ಲಿ ಕೋಲ್ಕತ್ತದಿಂದ ವರದಿಯಾದ ಒಂದು ಘಟನೆ. ಆತ ಐಟಿ ಎಂಜಿನಿಯರ್. ಸ್ನೇಹಿತನಿಂದಲೋ ಅಥವಾ ಯಾವುದೋ ಗ್ರೂಪಿನಲ್ಲೋ ಬಂದ ‘ಎಪಿಕೆ’ ಫೈಲ್ ಒಂದನ್ನು ಆಂಡ್ರಾಯ್ಡ್ ಮೊಬೈಲ್ ಫೋನ್‌ನಲ್ಲಿ ಅಳವಡಿಸಿಕೊಂಡಿದ್ದಾನೆ. ಕೆಲವೇ ಕ್ಷಣಗಳ ಬಳಿಕ ಹಂತ ಹಂತವಾಗಿ ಆತನ ಖಾತೆಯಿಂದ ₹16.5 ಲಕ್ಷ ಹೋಗಿಯೇ ಬಿಟ್ಟಿತು. ಅಷ್ಟೇ ಅಲ್ಲ! ತಿಂಗಳ ಬಳಿಕ ‘ನೀವು ತೆಗೆದುಕೊಂಡ ₹14 ಲಕ್ಷ ಸಾಲದ ಕಂತು ಇನ್ನೂ ಕಟ್ಟಿಲ್ಲವೇಕೆ’ ಎಂಬ ನೋಟಿಸ್ ಕೂಡ ಬಂದಿತ್ತು. ಎಂದರೆ, ಆತನ ಹೆಸರಲ್ಲಿ ಸೈಬರ್ ವಂಚಕರು ಬ್ಯಾಂಕ್ ಸಾಲವನ್ನೂ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ!

ಮತ್ತೊಂದು ಪ್ರಕರಣ, ಕಳೆದ ನವೆಂಬರ್ ತಿಂಗಳಲ್ಲಿ ಪುಣೆಯಿಂದ ವರದಿಯಾಗಿತ್ತು. 72ರ ವೃದ್ಧರೊಬ್ಬರು, ಪಿಂಚಣಿ ಬರಬೇಕಿದ್ದರೆ ಪ್ಯಾನ್ ಕಾರ್ಡ್ ಅಪ್‌ಡೇಟ್ ಮಾಡಿಕೊಳ್ಳಿ ಎಂಬ ಸೂಚನೆಯೊಂದಿಗೆ ಬಂದ ಎಪಿಕೆ ಫೈಲ್ ಒಂದನ್ನು ಅಳವಡಿಸಿಕೊಂಡು, ಖಾತೆಯಿಂದ ₹13.86 ಲಕ್ಷ ಕಳೆದುಕೊಂಡಿದ್ದರು.

ಬ್ಯಾಂಕ್ ಖಾತೆಯಲ್ಲಿದ್ದ ಲಕ್ಷಾಂತರ ರೂಪಾಯಿ ಹಣವನ್ನು ವಿದ್ಯಾವಂತರು, ಹಿರಿಯ ನಾಗರಿಕರು ಕಳೆದುಕೊಂಡ ಅದೆಷ್ಟೋ ಘಟನೆಗಳು ಇತ್ತೀಚೆಗೆ ಹೆಚ್ಚೇ ವರದಿಯಾಗುತ್ತಿವೆ. ಇದಕ್ಕೆಲ್ಲ ಕಾರಣ, ತಂತ್ರಜ್ಞಾನದ ಬಗೆಗೆ ನಮಗಿರುವ ಅವಜ್ಞೆ ಮತ್ತು ಅರಿವಿನ ಕೊರತೆ. ಮೊಬೈಲ್ ಎಂಬ ಅನುಗಾಲದ ಸಂಗಾತಿಯನ್ನು ಸ್ವಲ್ಪವೂ ಎಚ್ಚರಿಕೆಯಿಲ್ಲದೆ ಬಳಸಿದ ಪರಿಣಾಮ. ಹೊಸ ಹೊಸ ವಿಧಾನಗಳ ಮೂಲಕ ಇಂಥವರನ್ನೇ ಬಲೆಗೆ ಹಾಕಿಕೊಳ್ಳಲು ಕಾದು ಕುಳಿತಿರುತ್ತಾರೆ, ಸೈಬರ್ ವಂಚಕರು. ಈ ತಂತ್ರಜ್ಞಾನದ ಯುಗದಲ್ಲಿ ಹಣ ಸಂಪಾದನೆ ಕಷ್ಟ, ಆದರೆ ಕಳೆದುಕೊಳ್ಳುವುದು ತೀರಾ ಸುಲಭ. ಕೂಡಿಟ್ಟಿದ್ದ ಅಷ್ಟೂ ಹಣ ಹೋಗಿದ್ದು ಹೇಗೆಂದರೆ, ಅವರು ತಮಗೆ ವಾಟ್ಸ್‌ಆ್ಯಪ್, ಟೆಲಿಗ್ರಾಂ ಅಥವಾ ಬೇರಾವುದೇ ಮೆಸೆಂಜರ್ ಆ್ಯಪ್‌ಗಳಲ್ಲಿ ಬಂದಿದ್ದ ಒಂದು ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡಿದ್ದರು.

ಸೈಬರ್ ವಂಚಕರ ಹೊಸ ಅಸ್ತ್ರವಿದು. ಬ್ಯಾಂಕಿಂಗ್ ಅಥವಾ ಬೇರಾವುದೇ ಯೋಜನೆಗಳ ಹೆಸರಿನ ಕುತಂತ್ರಾಂಶವನ್ನು (ಮಾಲ್‌ವೇರ್) ಬಳಸಿ ಜನರನ್ನು ಸುಲಿಯುವ ಪ್ರಕ್ರಿಯೆಯಿದು. ಪ್ಯಾನ್-ಆಧಾರ್ ಲಿಂಕ್ ಮಾಡಬೇಕು, ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಮಾಡಬೇಕು, ಸರಕಾರೀ ಯೋಜನೆಯ ಹಣ ಪಡೆಯಬೇಕು, ಪೆನ್ಷನ್ ಪಡೆಯಬೇಕು ಎಂದೆಲ್ಲ ಕಾಳಜಿ ಹೊಂದಿರುವವರಿಗಾಗಿಯೇ ಇಂಥ ಕುತಂತ್ರಾಂಶಗಳು ಸಿದ್ಧವಾಗಿರುತ್ತವೆ ಎಂಬುದೂ ನೆನಪಿರಲಿ.

ಎಪಿಕೆ ಫೈಲ್‌ಗಳು ಹೀಗೆ ಬರಬಹುದು.






## ಏನಿದು ಎಪಿಕೆ?

ನಿಮ್ಮಲ್ಲೂ ಅನೇಕರಿಗೆ ವಾಟ್ಸ್‌ಆ್ಯಪ್ ಸಂದೇಶದ ಮೂಲಕ ‘.apk’ ಎಂದು ಕೊನೆಗೊಳ್ಳುವ ಫೈಲ್ ನೇಮ್ ಇರುವ ಫೈಲ್ ಬಂದಿದ್ದಿರಬಹುದು. ಆಂಡ್ರಾಯ್ಡ್ ಅಪ್ಲಿಕೇಶನ್ ಪ್ಯಾಕೇಜ್ ಅಥವಾ ಆಂಡ್ರಾಯ್ಡ್ ಪ್ಯಾಕೇಜ್ ಕಿಟ್ ಎಂಬುದರ ಸಂಕ್ಷಿಪ್ತ ರೂಪ ಎಪಿಕೆ. ಈ ಫೈಲ್ ಅಪರಿಚಿತ ಸಂಖ್ಯೆಯಿಂದ ಮಾತ್ರವೇ ಅಲ್ಲ, ಅಸಲಿಯೆಂದು ನಂಬಿ ಗ್ರೂಪಲ್ಲೋ ಅಥವಾ ವೈಯಕ್ತಿಕವಾಗಿ ಫಾರ್ವರ್ಡ್ ಮಾಡುವ ನಿಮ್ಮ ಸ್ನೇಹಿತ ವರ್ಗದಿಂದಲೇ ಬಂದಿರಬಹುದು! (ಇದು ಎಚ್ಚರಿಕೆ ವಹಿಸಬೇಕಾದ ವಿಚಾರ; ಏಕೆಂದರೆ ಪರಿಚಿತರನ್ನು ನಾವು ಬೇಗನೇ ನಂಬುತ್ತೇವೆ ಎಂಬುದು ಸೈಬರ್ ವಂಚಕರಿಗೆ ಗೊತ್ತಿದೆ. ಹೀಗಾಗಿ ಇಂಥವನ್ನು ಫಾರ್ವರ್ಡ್ ಮಾಡಲೇಬಾರದು ಎಂಬ ಅರಿವು ನಮಗಿರಬೇಕು.) ಈ ಫೈಲ್‌ನ ಹೆಸರು ಹೇಗಿರುತ್ತದೆಯೆಂದರೆ, ಕೆವೈಸಿ (Know Your Customer ಎಂಬ ಪ್ರಕ್ರಿಯೆ), ಆಧಾರ್-ಪಾನ್ ಲಿಂಕ್, ಎಸ್‌ಬಿಐ ಅಕೌಂಟ್ ಅಪ್‌ಡೇಟ್, ಪ್ರಧಾನಮಂತ್ರಿ ಆವಾಸ್ ಯೋಜನೆ, ರಿವಾರ್ಡ್ ಪಾಯಿಂಟ್ಸ್, ಬ್ಯಾಂಕಿನ ಹೆಸರು ಅಥವಾ ಬೇರಾವುದೇ ಸರಕಾರಿ ಯೋಜನೆಯನ್ನು ಹೋಲುತ್ತದೆ, ಸಂಬಂಧಿಸಿದ ಚಿತ್ರವೂ ಇರಬಹುದು. ಅಷ್ಟೇ ಅಲ್ಲ, ಕೆವೈಸಿ ಮಾಡಿಸದಿದ್ದರೆ, ನಿಮ್ಮ ಖಾತೆಯೇ ಬ್ಲಾಕ್ ಆಗುತ್ತದೆ ಎಂಬ ಎಚ್ಚರಿಕೆ ಕೊಡುವವರೂ ಇದ್ದಾರೆ. ಒಟ್ಟಿನಲ್ಲಿ, ಇದ್ದರೂ ಇರಬಹುದೆಂಬ ದ್ವಂದ್ವದಲ್ಲಿ ಸಿಲುಕುವ ನಾವು ಅದನ್ನು ಕ್ಲಿಕ್ ಮಾಡಿದರೆ ಈ ಎಪಿಕೆ ಫೈಲ್ ನಮ್ಮ ಮೊಬೈಲ್ ಫೋನ್‌ನಲ್ಲಿ ಇನ್‌ಸ್ಟಾಲ್ ಆಗುತ್ತದೆ.

ಇದೊಂದು ಆ್ಯಪ್. ಆದರೆ ಇದನ್ನು ಅಳವಡಿಸಿಕೊಳ್ಳುವುದು ಅಷ್ಟೇನೂ ಸುಲಭವಿಲ್ಲ. ಇಂಥವನ್ನು ಅಳವಡಿಸಿಕೊಳ್ಳದಂತೆ ಆಂಡ್ರಾಯ್ಡ್ ಮೊಬೈಲ್ ಫೋನ್‌ನಲ್ಲೇ ಒಂದು ರಕ್ಷಾ ಕವಚವಿದೆ. ಅದನ್ನು ಭೇದಿಸುವುದು ಹೇಗೆ ಅಂತ ವಂಚಕರೇ ನಿಮಗೆ ಫೋನ್ ಅಥವಾ ಪತ್ರ ಮೂಲಕ ಸೂಚನೆ ನೀಡಿ, ನಮ್ಮಿಂದಲೇ ಕೆಲಸ ಮಾಡಿಸಿಕೊಳ್ಳುತ್ತಾರೆ.

ಅದು ಹೇಗೆಂದರೆ, ಫೋನ್‌ನ ಸೆಟ್ಟಿಂಗ್‌ನಲ್ಲಿ, ‘ಆ್ಯಪ್ ಮ್ಯಾನೇಜ್‌ಮೆಂಟ್’ ಎಂಬಲ್ಲಿ ‘ಆ್ಯಪ್ ಆ್ಯಕ್ಸೆಸ್’ ವಿಭಾಗ ಇರುತ್ತದೆ (ಬೇರೆ ಬೇರೆ ಮೊಬೈಲ್ ಬ್ರ್ಯಾಂಡ್‌ಗಳಲ್ಲಿ ವಿಭಿನ್ನ ಹೆಸರು ಇರಬಹುದು). ಆದರೆ Install Unknown App ಎಂಬುದು ಬಹುತೇಕ ಎಲ್ಲದರಲ್ಲಿಯೂ ಏಕರೂಪದಲ್ಲಿರುತ್ತದೆ. ಇದರಲ್ಲಿ ಗೂಗಲ್ ಪ್ಲೇ ಸ್ಟೋರ್ ಹೊರತಾಗಿ ಬೇರಾವುದೇ ಕಡೆಯಿಂದಲೂ ಆ್ಯಪ್ ಇನ್‌ಸ್ಟಾಲ್ ಮಾಡಲು ಮೂಲತಃ (ಡೀಫಾಲ್ಟ್ ಆಗಿ) ಅನುಮತಿ ಇರುವುದಿಲ್ಲ. ಆದರೆ, ಇಲ್ಲಿ ಹೋಗಿ ಎನೇಬಲ್ ಮಾಡಿಕೊಂಡರೆ, ಬೇರೆ ಕಡೆಯಿಂದಲೂ (ಉದಾಹರಣೆಗೆ, ವೆಬ್ ಸೈಟಿನಿಂದ, ವಾಟ್ಸ್‌ಆ್ಯಪ್‌ನಿಂದ, ಇಮೇಲ್‌ನಿಂದ ಇತ್ಯಾದಿ) ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಬಹುದಾಗಿದೆ.

ಬ್ಯಾಂಕ್ ಖಾತೆಯಲ್ಲಿದ್ದ ಲಕ್ಷಾಂತರ ರೂಪಾಯಿ ಹಣವನ್ನು ವಿದ್ಯಾವಂತರು, ಹಿರಿಯ ನಾಗರಿಕರು ಕಳೆದುಕೊಂಡ ಘಟನೆಗಳು ಇತ್ತೀಚೆಗೆ ಹೆಚ್ಚೇ ವರದಿಯಾಗುತ್ತಿವೆ. ಇದಕ್ಕೆಲ್ಲ ಕಾರಣ, ತಂತ್ರಜ್ಞಾನದ ಬಗೆಗೆ ನಮಗಿರುವ ಅರಿವಿನ ಕೊರತೆ. ಮೊಬೈಲ್ ಎಂಬ ಅನುಗಾಲದ ಸಂಗಾತಿಯನ್ನು ಸ್ವಲ್ಪವೂ ಎಚ್ಚರಿಕೆಯಿಲ್ಲದೆ ಬಳಸಿದ ಪರಿಣಾಮ.

ನಾವೇ ಈ ರಕ್ಷಾ ಕವಚವನ್ನು ಭೇದಿಸಿ, ಕುತಂತ್ರಿ ಆ್ಯಪ್ ಇನ್‌ಸ್ಟಾಲ್ ಮಾಡಲು ಅನುವು ಮಾಡಿಕೊಡುತ್ತೇವೆ. ತಡ ಮಾಡಿದರೆ, ಮರುದಿನ ನಮಗೆ ಕರೆಯೊಂದು ಬರಬಹುದು, ಇನ್ನೂ ಯಾಕೆ ಕೆವೈಸಿ ಅಪ್‌ಡೇಟ್ ಮಾಡಿಲ್ಲ? ಮಾಡದಿದ್ದರೆ ನಿಮ್ಮ ಖಾತೆಗೆ ಪೆನ್ಷನ್ ಹಣ ಬರುವುದಿಲ್ಲ ಅಂತಲೋ, ಖಾತೆಯೇ ಸ್ಥಗಿತವಾಗುತ್ತದೆ ಎಂದೋ ಎಚ್ಚರಿಕೆಯನ್ನೂ ನೀಡಲಾಗುತ್ತದೆ. ಮತ್ತೊಮ್ಮೆ, ಇದ್ದರೂ ಇರಬಹುದೆಂದುಕೊಳ್ಳುವ ನಾವದನ್ನು ಇನ್‌ಸ್ಟಾಲ್ ಮಾಡಿಕೊಳ್ಳುತ್ತೇವೆ. ಅಂತೆಯೇ ಅದು ಕೇಳುವ, ಕ್ಯಾಮೆರಾ, ಮೈಕ್ರೋಫೋನ್, ಜಿಪಿಎಸ್, ಎಸ್‌ಎಂಎಸ್, ಕಾಂಟ್ಯಾಕ್ಟ್ಸ್... ಹೀಗೆ ಎಲ್ಲದಕ್ಕೂ ಅನುಮತಿಯನ್ನು (ಓದದೆಯೇ ಒಕೆ ಎಂದು ಕ್ಲಿಕ್ ಮಾಡುತ್ತಾ) ನೀಡಿರುತ್ತೇವೆ.

ಈಗ ನಮ್ಮ ಫೋನ್‌ನಲ್ಲಿರುವ ಬ್ಯಾಂಕಿಂಗ್ ಅಥವಾ ಕ್ರೆಡಿಟ್ ಕಾರ್ಡ್ ಮಾಹಿತಿಯನ್ನೆಲ್ಲವನ್ನೂ ಹುಡುಕಾಡಿ ಸಂಗ್ರಹಿಸಿಕೊಳ್ಳುವ ಈ ಆ್ಯಪ್, ಅದನ್ನು ತನ್ನ ಒಡೆಯನಿಗೆ (ಆ್ಯಪ್ ರೂಪಿಸಿದ ವಂಚಕರಿಗೆ) ರವಾನಿಸುತ್ತದೆ. ಅಥವಾ ನಮ್ಮ ಮೊಬೈಲ್ ಫೋನೇ ಈ ವಂಚಕರ ಹಿಡಿತಕ್ಕೆ ಸಿಲುಕುತ್ತದೆ. ಹೀಗಾಗಿ, ಅದಕ್ಕೆ ಬರುವ ಒಟಿಪಿ (ಏಕ ಬಳಕೆಯ ಪಾಸ್‌ವರ್ಡ್ - ಎಂದರೆ ಒಂದು ಬಾರಿಯಷ್ಟೇ ಬಳಸಬಹುದಾದ ಪಿನ್ ಅಥವಾ ಪಾಸ್‌ವರ್ಡ್) ಅವರಿಗೆ ನಾವೇ ಹೇಳಬೇಕಾಗುವುದಿಲ್ಲ. ತಮ್ಮಲ್ಲಿರುವ ಕಂಪ್ಯೂಟರ್ ಅಥವಾ ಫೋನ್ ಮೂಲಕವೇ ಅವರು ನಮ್ಮ ಮೊಬೈಲ್ ಮೇಲೆ ಹಿಡಿತ ಸಾಧಿಸಬಲ್ಲರು. ಹೀಗೆ ಈ ಸೈಬರ್ ವಂಚಕನೊಬ್ಬ ಕುಳಿತಲ್ಲಿಂದಲೇ ನಮ್ಮ ಬ್ಯಾಂಕ್ ಖಾತೆಯನ್ನು ಬರಿದಾಗಿಸುವುದು ಸುಲಭವಾಗುತ್ತದೆ. ಕೆಲವೇ ಕ್ಷಣಗಳಲ್ಲಿ ಠಣ್ ಅಂತ ‘ನಿಮ್ಮ ಖಾತೆಯಿಂದ 10 ಲಕ್ಷ ರೂ. ಡೆಬಿಟ್ ಆಗಿದೆ’ ಮುಂತಾದ ಸಂದೇಶ ಬರಲೂಬಹುದು, ಬಾರದೆಯೂ ಇರಬಹುದು. ಖಾತೆಯಿಂದ ಹಣ ಹೋಗಿರುತ್ತದೆ.

## ಏನು ಮಾಡಬೇಕು?

ಎಲ್ಲ ಬ್ಯಾಂಕ್‌ಗಳೂ ತಮ್ಮ ಗ್ರಾಹಕರಿಗೆ ಈ ರೀತಿಯ ಎಪಿಕೆ ವಂಚನೆಯ ಬಗೆಗೆ ಇಮೇಲ್ ಮೂಲಕ ಎಚ್ಚರಿಕೆ ಸಂದೇಶಗಳನ್ನು ನೀಡುತ್ತಲೇ ಇವೆ. ವಂಚಕರ ಗಾಳಕ್ಕೆ ಸಿಲುಕದಿರಲು, ಅಧಿಕೃತ ಪ್ಲೇ ಸ್ಟೋರ್ ನಿಂದ ಮಾತ್ರವೇ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಿ. Install Unknown Apps ಎಂಬುದನ್ನು ಯಾವತ್ತೂ ಎನೇಬಲ್ ಮಾಡಬೇಡಿ. ಗೊತ್ತಿಲ್ಲದ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಲೇಬೇಡಿ ಮತ್ತು ಯಾವುದನ್ನೂ ಓದದೆ ‘OK’ ಕ್ಲಿಕ್ ಮಾಡಲು ಹೋಗಬೇಡಿ. ಈಗಾಗಲೇ ಇನ್‌ಸ್ಟಾಲ್ ಮಾಡಿದ್ದಿದ್ದರೆ, ತಕ್ಷಣ ‘ಅನ್‌ಇನ್‌ಸ್ಟಾಲ್’ ಮಾಡಿಬಿಡಿ. ❖

# ನಾಯಿಭಾಷೆಗೂ ಕೃತಕ ಬುದ್ಧಿಮತ್ತೆ!



ನೇಸರ ಕಾಡನಕುಪ್ಪೆ

**ಸಾಕುನಾಯಿಗಳನ್ನು** ಪ್ರಾಣಿಗಳೆಂದು ನೋಡದೆ ಮನೆಯ ಸದಸ್ಯರೆಂದೇ ಪರಿಗಣಿಸಲಾಗುತ್ತದೆ. ನಾಯಿಗಳ ಸಹಜವಾದ ಪ್ರೀತಿ, ನಿಷ್ಠೆ ಇವೆಲ್ಲವೂ ಮಾನವ–ಶ್ವಾನಸಂಬಂಧವನ್ನು ಸಹಸ್ರಾರು ವರ್ಷಗಳಿಂದ ಗಟ್ಟಿಗೊಳಿಸಿವೆ. ಆದರೂ, ನಾಯಿಗಳ ಭಾಷೆಯೇ ಬೇರೆ, ಮಾನವನ ಭಾಷೆಯೇ ಬೇರೆ. ಭಾಷೆಯ ಅಗತ್ಯವೇ ಇಲ್ಲದೇ ಪರಸ್ಪರ ಸಂಬಂಧ ಸಾಧ್ಯವಿದ್ದರೂ ನಾಯಿಗಳು ಏನೆಲ್ಲಾ ಸಂವಹನ ಮಾಡುತ್ತವೆ ಎಂದು ತಿಳಿದುಕೊಳ್ಳುವ ಕುತೂಹಲವಂತೂ ಇದ್ದೇ ಇರುತ್ತದೆ. ಬಹುಶಃ ಸಾಕಿದ ನಾಯಿ ಏನನ್ನು ಹೇಳಲು ಬಯಸುತ್ತದೆ ಎಂದು ಅರಿಯುವ ಕಾಲ ತೀರಾ ದೂರವೇನೂ ಉಳಿದಿಲ್ಲ!. ಹೌದು, ನಾಯಿಯ ಮಾತನ್ನು ಅರ್ಥ ಮಾಡಿಕೊಂಡು, ಮಾನವಭಾಷೆಗೆ ಭಾಷಾಂತರ ಮಾಡುವ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಪ್ರಾಯೋಗಿಕವಾಗಿ ಸಿದ್ಧವಾಗಿದೆ. ಮೆಕ್ಸಿಕೋದ ರಾಷ್ಟ್ರೀಯ ಬಾಹ್ಯಾಕಾಶಭೌತ ವಿಜ್ಞಾನ ಸಂಸ್ಥೆ ಹಾಗೂ ಪ್ಯೂಬ್ಲಾದಲ್ಲಿರುವ ಎಲೆಕ್ಟ್ರಾನಿಕ್ಸ್ ಮತ್ತು ಆಪ್ಟಿಕ್ಸ್ ಸಂಸ್ಥೆಗಳು ಜಂಟಿಯಾಗಿ ಈ ಪ್ರಯೋಗವನ್ನು ಮಾಡಿವೆ. ಕೃತಕ ಬುದ್ಧಿಮತ್ತೆಗೆ ಮಾನವ ಹಾಗೂ ಶ್ವಾನಭಾಷಾ ಸಂವಹನ ವಿಧಾನಗಳನ್ನು ಪರಿಚಯಿಸಿ ಶ್ವಾನವೊಂದು ಏನು ಹೇಳುತ್ತಿರಬಹುದು ಎಂಬುದನ್ನು ಭಾಷಾಂತರ ಮಾಡಲು ಯಶಸ್ವಿಯಾಗಿದ್ದಾರೆ.

ಭಾಷೆಯೆಂದರೆ ಅದು ಭಾವನೆಗಳ ಮಿಶ್ರಣ. ಅದರಲ್ಲಿ ಕೋಪ, ಪ್ರೀತಿ, ಬೇಸರ, ಆತಂಕ, ಸಮಾಧಾನ ಇತ್ಯಾದಿ ಭಾವನೆಗಳು ಅಥವಾ ಮನಃಸ್ಥಿತಿಗಳು ಅಡಕವಾಗಿರುತ್ತವೆ. ಈ ಭಾವನೆಗಳನ್ನು ಅರ್ಥ ಮಾಡಿಕೊಂಡರೆ ಯಾವುದೇ ಭಾಷೆಯನ್ನೂ ಅಸ್ಪಷ್ಟವಾಗಿಯಾಗಿಯಾದರೂ ಅರ್ಥಮಾಡಿಕೊಳ್ಳಬಹುದು. ಈಗಲೂ ನಾಯಿಯ ಭಾಷೆ ನೇರವಾಗಿ ಅರ್ಥವಾಗದೇ ಇದ್ದರೂ, ಅದು ಏನು ಹೇಳುತ್ತಿದೆ ಎಂಬುದನ್ನು ಅದರ ವರ್ತನೆ, ಭಾವನೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು ಸಾಧ್ಯವಿದೆಯಲ್ಲವೇ? ಇತರ ಭಾಷಿಗರು ಮಾತನಾಡುವುದನ್ನೂ ಇದೇ ರೀತಿ ಅಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಿದೆ. ಇದೇ ತರ್ಕವನ್ನು ಕೃತಕ ಬುದ್ಧಿಮತ್ತೆಗೆ ಅನ್ವಯಿಸಿ ನಾಯಿಗಳ ಭಾಷೆಯನ್ನು ಅಭ್ಯಸಿಸುವ ಪ್ರಯತ್ನವನ್ನು ಮಾಡಲಾಗಿದೆ ಎಂದು ಕಂಪ್ಯೂಟರ್ ವಿಜ್ಞಾನ ಹಾಗೂ ಎಂಜಿನಿಯರಿಂಗ್ ವಿಜ್ಞಾನಿಗಳಾದ ರಾಡಾ ಮಿಕಾಲಿಯಾ ಹಾಗೂ ಜಾನಿಸ್ ಎಂ. ಜೆನ್‌ಕಿನ್ಸ್ ಹೇಳಿದ್ದಾರೆ.

ಮಾನವರು ಬಳಸುವ ವಿವಿಧ ಭಾಷೆಗಳ ದತ್ತಾಂಶ ಈಗಾಗಲೇ ಕೃತಕ ಬುದ್ಧಿಮತ್ತೆಯ ಬಳಿ ಇವೆ. ಯಾವುದೇ ಭಾಷೆಯನ್ನು ಯಾವ ಭಾಷೆಗಾದರೂ ಅನುವಾದ ಮಾಡಬಲ್ಲ ಸಾಮರ್ಥ್ಯ ಕೃತಕ ಬುದ್ಧಿಮತ್ತೆಗೆ ಲಭಿಸಿದೆ. ಅದರ ನೈಪುಣ್ಯದ ಮಟ್ಟ ಇನ್ನೂ ಸುಧಾರಿಸಿಲ್ಲದಿರಬಹುದು ಅಷ್ಟೇ. ಆದರೆ, ಕೃತಕ ಬುದ್ಧಿಮತ್ತೆ ನಿತ್ಯ ವಿಕಸನ ಹೊಂದುವ ಸಾಮರ್ಥ್ಯ ಇರುವ ವಿಜ್ಞಾನವಾಗಿರುವ ಕಾರಣ ಅದು ನಿಖರತೆಯನ್ನು ಹೊಂದುವ ಕಾಲ ದೂರವಿಲ್ಲ. ಮಾನವನ ಭಾಷೆಯ ವಿವಿಧ ಭಾವನೆಗಳನ್ನು ಕೃತಕ ಬುದ್ಧಿಮತ್ತೆಗೆ ಪರಿಚಯಿಸಲಾಗಿದೆ. ಯಾವ ಪದ ಯಾವ ಭಾವನೆಯಲ್ಲಿ ಹೇಗೆ ಮೂಡಿಬರುತ್ತದೆ, ಆಗ ಮುಖದ ಭಾವನೆಗಳು ಹೇಗಿರುತ್ತವೆ ಇತ್ಯಾದಿ ಧ್ವನಿ ಹಾಗೂ ಭೌತಿಕ ದತ್ತಾಂಶಗಳನ್ನು ಒದಗಿಸಲಾಗಿದೆ. ಜೊತೆಗೆ, ನಾಯಿಗಳು ವಿವಿಧ ಭಾವನೆಗಳಲ್ಲಿ ಬಳಸುವ ವಿವಿಧ ಶಬ್ದಗಳು, ಅವುಗಳ ಮುಖಚರ್ಯೆ, ವರ್ತನೆಯ ವಿಡಿಯೊಗಳನ್ನೂ ಕೃತಕ ಬುದ್ಧಿಮತ್ತೆಗೆ ಒದಗಿಸಲಾಗಿದೆ. ಈ ಎರಡು ವಿವಿಧ ಪ್ರಬೇಧಗಳ ಭಾಷೆ, ವರ್ತನೆ, ಭಾವನೆಗಳನ್ನು ಪರಸ್ಪರ ಹೋಲಿಸಿ ಸಾಮ್ಯತೆಯನ್ನು ಗುರುತಿಸುವಂತೆ ಕೃತಕ ಬುದ್ಧಿಮತ್ತೆಗೆ ಸೂಚಿಸಲಾಗಿದೆ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.

ಈ ಪ್ರಕ್ರಿಯೆಯಲ್ಲಿ ಬಹು ಕುತೂಹಲಕಾರಿ ಉತ್ತರಗಳು ವಿಜ್ಞಾನಿಗಳಿಗೆ ಸಿಕ್ಕಿವೆ. ಮಾನವನ ಭಾಷೆ, ವರ್ತನೆ ಹಾಗೂ ಭಾವನೆಗಳಿಗೂ ಶ್ವಾನಗಳ ಭಾಷೆ, ವರ್ತನೆ ಹಾಗೂ ಭಾವನೆಗಳಿಗೂ ಜೈವಿಕವಾಗಿ ಸಾಕಷ್ಟು ಸಾಮ್ಯಗಳಿರುವುದು ಬೆಳಕಿಗೆ ಬಂದಿದೆ. ಈ ದತ್ತಾಂಶದ ಆಧಾರದ ಮೇಲೆ ಕೃತಕ ಬುದ್ಧಿಮತ್ತೆಯು ನಾಯಿಗಳು ಸಂವಹಿಸುವಾಗ ಅವನ್ನು ಮಾನವ ಪದಗಳಿಗೆ ಭಾಷಾಂತರಿಸಿ ಸ್ಥಳದಲ್ಲೇ ಶಬ್ದ ಹಾಗೂ ಅಕ್ಷರಗಳಾಗಿ ಅನುವಾದಿಸಿ ಕೊಡುವಲ್ಲಿ ಯಶಸ್ವಿಯಾಗಿದೆ.

ಇದು ಇನ್ನೂ ತೀರಾ ಆರಂಭದ ಹಂತದಲ್ಲಿದೆ. ಕೆಲವೇ ಕೆಲವು ಪದಗಳನ್ನು ಅನುವಾದಿಸಿ ಅವುಗಳ ಅರ್ಥವು ನಿಜವೇ ಇಲ್ಲವೇ ಎಂಬುದನ್ನು ತಾಳೆ ಹಾಕಿ ನೋಡಲಾಗಿದೆ. ಈ ರೀತಿಯ ಅರ್ಥವನ್ನು ನಾವು ಕೃತಕ ಬುದ್ಧಿಮತ್ತೆ ಇಲ್ಲದಿದ್ದರೂ ತಿಳಿದುಕೊಳ್ಳಬಹುದು. ಆದರೆ, ಈ ಸಣ್ಣ ಹೆಜ್ಜೆ ನಾಳೆ ಬೆಳೆದು ದೊಡ್ಡದಾಗುವುದರಲ್ಲಿ ಸಂದೇಹ ಬೇಡ. ನಾಯಿ ಅಥವಾ ಇತರ ಪ್ರಾಣಿಗಳ ಬುದ್ಧಿಮತ್ತೆ ಮನುಷ್ಯನ ಬುದ್ಧಿಮತ್ತೆಯಷ್ಟು ಸುಧಾರಿತವಾಗಿ ಇಲ್ಲದೇ ಇದ್ದರೂ, ಬುದ್ಧಿವಂತ ಪ್ರಾಣಿಗಳ ಚಿಂತನಾಕ್ರಮ, ಪ್ರಾಕೃತಿಕ ಕೊಡುಗೆಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಈ ಸಂಶೋಧನೆ ಸಹಕಾರಿಯಾಗಲಿದೆ ಎಂದು ವಿಜ್ಞಾನಿ ರಾಡಾ ಮಿಕಾಲಿಯಾ ಅಭಿಪ್ರಾಯಪಟ್ಟಿದ್ದಾರೆ.

ಪ್ರಾಣಿಗಳನ್ನು ಬಳಸಿಕೊಂಡು ಈಗಾಗಲೇ ವಿವಿಧ ವೈಜ್ಞಾನಿಕ ಪ್ರಯೋಗ, ಸೈನ್ಯದಂತಹ ಕ್ಷೇತ್ರಗಳಲ್ಲಿ ಬಳಕೆ ಇದ್ದೇ ಇದೆ. ಪ್ರಾಣಿಗಳ ಭಾಷೆ ಅರ್ಥ ಮಾಡಿಕೊಂಡರೆ ಪರಸ್ಪರ ಸಂವಹನ ಹೆಚ್ಚು ಪರಿಣಾಮಕಾರಿ ಆಗಬಲ್ಲ ಸಾಧ್ಯತೆ ಇರುವುದರಿಂದ ಅದರ ಅನುಕೂಲಗಳು ಹೆಚ್ಚು ಎಂದು ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ. ❖

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

## ಜೀವ ಕ್ರಿಯೆಗಳು

**29) ಸಸ್ಯಗಳಲ್ಲಿ ಸಾಗಾಣಿಕೆಗಳ ಬಗ್ಗೆ ಬರೆಯಿರಿ**


ಉತ್ತರ:– (.....ಹಿಂದಿನ ಸಂಚಿಕೆಯಿಂದ)

ಸಸ್ಯವು ಸಾಕಷ್ಟು ನೀರಿನ ಪೂರೈಕೆಯನ್ನು ಹೊಂದಿದ್ದರೆ ಪತ್ರರಂಧ್ರಗಳ ಮೂಲಕ ನಷ್ಟವಾದ ನೀರು ಎಲೆಗಳಲ್ಲಿನ ಕ್ಸೈಲಂ ನಳಿಕೆಗಳ ಮೂಲಕ ಮರುಪೂರೈಕೆಯಾಗುತ್ತದೆ. ವಾಸ್ತವವಾಗಿ ಎಲೆಗಳ ಜೀವಕೋಶದಿಂದ ಆವಿಯಾಗುವ ನೀರಿನ ಅಣುಗಳು ಚೋಷಣ (suction)ವನ್ನು ಉಂಟುಮಾಡುತ್ತದೆ ಇದು ಬೇರುಗಳ ಕ್ಸೈಲಂಕೋಶಗಳಿಂದ ನೀರನ್ನು ಎಳೆದುಕೊಳ್ಳುತ್ತದೆ. ಗಾಳಿಗೆ ತೆರೆದ ಸಸ್ಯದ ಭಾಗಗಳಿಂದ ಆವಿಯ ರೂಪದಲ್ಲಿ ನೀರು ನಷ್ಟವಾಗುವುದನ್ನು ಬಾಷ್ಪವಿಸರ್ಜನೆ ಎನ್ನುವರು. ಹೀಗೆ ಬಾಷ್ಪವಿಸರ್ಜನೆಯು ಬೇರಿನಿಂದ ಎಲೆಗಳಿಗೆ ನೀರು ಮತ್ತು ಅದರಲ್ಲಿ ಕರಗಿರುವ ಲವಣಗಳ ಹೀರುವಿಕೆ ಮತ್ತು ಮೇಲ್ಮುಖ ಚಲನೆಗೆ ಸಹಾಯ ಮಾಡುತ್ತದೆ. ತಾಪದ ನಿಯಂತ್ರಣದಲ್ಲೂ ಇದು ನೆರವಾಗುತ್ತದೆ. ನೀರಿನ ಸಾಗಾಣಿಕೆಯಲ್ಲಿ ಬೇರಿನ ಒತ್ತಡದ ಪರಿಣಾಮವು ರಾತ್ರಿಯ ಸಮಯದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಬೆಳಗಿನ ಸಮಯದಲ್ಲಿ ಪತ್ರರಂಧ್ರಗಳು ತೆರೆದಿದ್ದಾಗ ಬಾಷ್ಪವಿಸರ್ಜನೆಯ ಸೆಳೆತವು ಕ್ಸೈಲಮ್‌ನಲ್ಲಿ ನೀರಿನ ಚಲನೆಗೆ ಪ್ರಮುಖ ಚಾಲಕ ಶಕ್ತಿಯಾಗುತ್ತದೆ.

ಎಲೆಗಳಿಂದ ಸಸ್ಯದ ಉಳಿದ ಭಾಗಗಳಿಗೆ ಚಯಾಪಚಯ ಕ್ರಿಯೆಗಳ, ವಿಶೇಷವಾಗಿ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳು ಸಾಗಾಣಿಕೆಯಾಗುತ್ತವೆ ವಿಲೀನಗೊಳ್ಳಬಲ್ಲ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಸಾಗಾಣಿಕೆಯನ್ನು ವಸ್ತು ಸ್ಥಾನಾಂತರಣ (translocation) ಎಂದು ಕರೆಯುತ್ತಾರೆ ಮತ್ತು ಇದು ವಾಹಕ ಅಂಗಾಂಶದ ಫ್ಲೋಯಂ ಭಾಗದಲ್ಲಿ ಜರುಗುತ್ತದೆ. ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಜೊತೆಗೆ ಅಮೈನೋ ಆಮ್ಲಗಳು ಮತ್ತು ಇತರ ವಸ್ತುಗಳನ್ನು ಫ್ಲೋಯಂ ಸಾಗಿಸುತ್ತದೆ. ಈ ವಸ್ತುಗಳು ವಿಶೇಷವಾಗಿ ಬೇರುಗಳು, ಹಣ್ಣುಗಳು ಮತ್ತು ಬೀಜಗಳಂಥ ಸಂಗ್ರಹಣಾ ಅಂಗಗಳಿಗೆ ಮತ್ತು ಬೆಳೆಯುತ್ತಿರುವ ಅಂಗಗಳಿಗೆ ಪೂರೈಸಲ್ಪಡುತ್ತವೆ. ಆಹಾರ ಮತ್ತು ಇತರ ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ಮೇಲ್ಮುಖ ಹಾಗೂ ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ. ಸರಳ ಭೌತ ಬಲಗಳಿಂದ ವ್ಯಾಪಕವಾಗಿ ವಿವರಿಸಲ್ಪಟ್ಟ ಕ್ಸೈಲಂನಲ್ಲಿನ ಸಾಗಾಣಿಕೆಗೆ ಹೋಲಿಸಿದರೆ, ಫ್ಲೋಯಂನಲ್ಲಿ ಶಕ್ತಿಯನ್ನು ಬಳಸಿಕೊಂಡು ವಸ್ತುಗಳ ಸ್ಥಾನಾಂತರಣವನ್ನು ಸಾಧಿಸಲಾಗುತ್ತದೆ. ಎಟಿಪಿ ಯಿಂದ ಶಕ್ತಿಯನ್ನು ಬಳಸಿಕೊಂಡು ಸುಕ್ರೋಸ್‌ನಂತಹ ವಸ್ತುವನ್ನು ಫ್ಲೋಯಂ ಅಂಗಾಂಶಕ್ಕೆ ವರ್ಗಾಯಿಸಲಾಗುತ್ತದೆ. ಇದು ಅಂಗಾಂಶದ ಅಭಿಸರಣ ಒತ್ತಡವನ್ನು (osmotic pressure) ಹೆಚ್ಚಿಸಿ ನೀರು ಅದರೊಳಗೆ ಪ್ರವೇಶಿಸಲು ಕಾರಣವಾಗುತ್ತದೆ. ಈ ಒತ್ತಡವು ಫ್ಲೋಯಂನಿಂದ ವಸ್ತುಗಳು ಕಡಿಮೆ ಒತ್ತಡವಿರುವ ಅಂಗಾಂಶಗಳಿಗೆ ಚಲಿಸುವಂತೆ ಮಾಡುತ್ತದೆ. ಇದು ಸಸ್ಯದ ಅವಶ್ಯಕತೆಗೆ ಅನುಗುಣವಾಗಿ ವಸ್ತುಗಳನ್ನು ಸಾಗಿಸಲು ಫ್ಲೋಯಂಗೆ ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ಬೇಸಿಗೆ ಕಾಲದಲ್ಲಿ ಮೊಗ್ಗುಗಳು ಬೆಳವಣಿಗೆಯಾಗಲು ಶಕ್ತಿಯ ಅಗತ್ಯವಿರುವುದರಿಂದ ಬೇರು ಅಥವಾ ಕಾಂಡದ ಅಂಗಾಂಶಗಳಲ್ಲಿ ಸಂಗ್ರಹವಾಗಿರುವ ಶರ್ಕರ ಪದಾರ್ಥಗಳು ಮೊಗ್ಗುಗಳಿಗೆ ಸಾಗಿಸಲ್ಪಡುತ್ತವೆ.

**30) ಮನುಷ್ಯರ ವಿಸರ್ಜನಾಂಗವ್ಯೂಹದ ಚಿತ್ರದ ಬರೆಯಿರಿ**

ಉತ್ತರ:–




**31) ಮನುಷ್ಯರ ವಿಸರ್ಜನಾಂಗವ್ಯೂಹದ ಬಗ್ಗೆ ಬರೆಯಿರಿ**

**ಉತ್ತರ:–** ಮನುಷ್ಯರಲ್ಲಿ ವಿಸರ್ಜನೆ ಮನುಷ್ಯರ ವಿಸರ್ಜನಾಂಗವ್ಯೂಹವು ಒಂದು ಜೊತೆ ಮೂತ್ರಪಿಂಡಗಳು, ಒಂದು ಜೊತೆ ಮೂತ್ರನಾಳಗಳು, ಒಂದು ಮೂತ್ರಕೋಶ ಮತ್ತು ಒಂದು ಮೂತ್ರದ್ವಾರವನ್ನು ಒಳಗೊಂಡಿದೆ.

ಮೂತ್ರಪಿಂಡಗಳು ಉದರಭಾಗದಲ್ಲಿ, ಬೆನ್ನುಮೂಳೆಯ ಎರಡೂ ಪಾರ್ಶ್ವಗಳಲ್ಲಿ ಒಂದೊಂದರಂತೆ ಇವೆ. ಮೂತ್ರವು ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗಿ ಮೂತ್ರನಾಳಗಳ ಮೂಲಕ ಹರಿದು ಮೂತ್ರದ್ವಾರದ ಮೂಲಕ ವಿಸರ್ಜನೆಯಾಗುವವರೆಗೂ ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ

ರಕ್ತದಿಂದ ತ್ಯಾಜ್ಯವಸ್ತುಗಳನ್ನು ಸೋಸಿ ಹೊರತೆಗೆಯುವುದು ಮೂತ್ರ ತಯಾರಿಕೆಯ ಉದ್ದೇಶವಾಗಿದೆ. ಶ್ವಾಸಕೋಶಗಳಲ್ಲಿ ರಕ್ತದಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ತೆಗೆದುಹಾಕುವಂತೆ ಮೂತ್ರಪಿಂಡಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥ ನೈಟ್ರೋಜನ್‌ಯುಕ್ತ ತ್ಯಾಜ್ಯಗಳನ್ನು ತೆಗೆದುಹಾಕಲಾಗುತ್ತದೆ. ಮೂತ್ರಪಿಂಡಗಳಲ್ಲಿರುವ ಮೂಲಭೂತ ಸೋಸುವ ಘಟಕಗಳೆಂದರೆ ಶ್ವಾಸಕೋಶಗಳಲ್ಲಿರುವಂಥ ಅತ್ಯಂತ ತೆಳುವಾದ ಭಿತ್ತಿಯನ್ನು ಹೊಂದಿರುವ ಲೋಮನಾಳಗಳ ಗುಂಪು ಎಂಬುದು ಆಶ್ಚರ್ಯವಲ್ಲ. ಮೂತ್ರಪಿಂಡದಲ್ಲಿರುವ ಪ್ರತಿಯೊಂದು ಲೋಮನಾಳಗಳ ಗುಂಪು ಸೋಸಲ್ಪಟ್ಟ ದ್ರವವನ್ನು ಸಂಗ್ರಹಿಸುವ ಬಟ್ಟಲಿನಾಕಾರದ ತುದಿ ಇರುವ ಒಂದು ನಾಳದ ಸಂಪರ್ಕದಲ್ಲಿ ಇರುತ್ತದೆ

ಪ್ರತಿಯೊಂದು ಮೂತ್ರಪಿಂಡವು ನೆಫ್ರಾನ್‌ಗಳೆಂದು ಕರೆಯಲ್ಪಡುವ ಒತ್ತೊತ್ತಾಗಿ ಜೋಡಿಸಲ್ಪಟ್ಟ ಈ ಸೋಸುವ ಘಟಕಗಳನ್ನು ಭಾರೀ ಸಂಖ್ಯೆಯಲ್ಲಿ ಹೊಂದಿದೆ. ಪ್ರಾರಂಭಿಕ ಹಂತದ ಸೋಸುವಿಕೆಯಲ್ಲಿ ಶೋಧಿಸಲ್ಪಟ್ಟ ಗ್ಲುಕೋಸ್, ಅಮೈನೋ ಆಮ್ಲ, ಲವಣಗಳು ಮತ್ತು ಹೆಚ್ಚಿನ ಪ್ರಮಾಣದ ನೀರಿನಂಥ ಆಯ್ದ ಕೆಲವು ವಸ್ತುಗಳು ಮೂತ್ರವು ನಾಳದಲ್ಲಿ ಮುಂದೆ ಹರಿದಂತೆ ಪುನಃ ಹೀರಲ್ಪಡುತ್ತವೆ. ಮರುಹೀರಿಕೆಯಾಗುವ ನೀರಿನ ಪ್ರಮಾಣವು ದೇಹದಲ್ಲಿ ನೀರು ಎಷ್ಟು ಅಧಿಕವಾಗಿದೆ ಮತ್ತು ಎಷ್ಟು ಪ್ರಮಾಣದ ಕರಗಿದ ತ್ಯಾಜ್ಯಗಳನ್ನು ವಿಸರ್ಜಿಸಬೇಕಾಗುತ್ತದೆ ಎಂಬುದನ್ನು ಆಧರಿಸಿದೆ.

ಪ್ರತಿಯೊಂದು ಮೂತ್ರಪಿಂಡದಲ್ಲಿ ಉತ್ಪತ್ತಿಯಾದ ಮೂತ್ರವು ಅಂತಿಮವಾಗಿ ಮೂತ್ರಪಿಂಡಗಳನ್ನು (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

## MOLECULAR BASIS OF INHERITANCE

**10. Mention some differences Between Mendelian Disorders and Chromosomal Disorders.**

| *Mendelian Disorders* | *Chromosomal Disorders* |
|---|---|
| They are caused by defective alleles. | They are caused by Chromosomal aberrations and anomalies |
| Defective alleles are produced due to mutations. | The Chromosomal aberrations and anomalies develop due to defective synapsis and disjunction during meiosis. |
| They follow mendelian pattern of inheritance. | The disorders may or may not be transmitted. |
| The chances of having the disorder can be known through pedigree analysis Eg:- Sickle cell Anaemia, | The disorder can be known through amniocentesis. Eg:- Down's Syndrome, Turner's Syndrome. |

**11. Write a note on autosomal disorders.**

**Ans:- Autosomal Disorders**


**(a) Sickle Cell Anaemia** - It is a recessive hereditary disorder of autosomal nature.

It is caused by mutation of the gene controlling β-chain of haemoglobin. The gene is situated on **11th chromosome**. The mutated gene is called $Hb^s$. The wild type gene is known as $Hb^A$. $H^S$ causes one change in amino acid sequence of β-chain. It replaces glutamine present at 6th position by amino acid valine. Haemoglobin-S behaves like normal haemoglobin A, except under conditions of oxygen deficiency as during excessive exercise or at high altitude. Oxygen stress builds hydrophobic bonds between valine of haemoglobin-S and other haemoglobin chains. This distorts haemoglobin structure. The erythrocytes lose their circular shape and become sickle Shaped. Membrane elasticity is lost. As a result sickle-shaped erythrocytes are unable to pass through fine blood capillaries. The blood capillaries are clogged. Blood supply to many vital organs is affected. Sickle celled erythrocytes degenerate after some time resulting in deficiency of erythrocytes.

The **major effect** of $Hb^s$ is the formation of sickles or sickle celled erythrocytes. Clogging of blood capillaries, anaemia, reduced blood supply to vital organs jaundice, muscle cramps, headache and damage to spleen, brain and other vital organs, etc. are side effects of $Hb^s$.

$Hb^A$ and $Hb^S$ are codominants. The affected individuals live normally except under oxygen stress. Rather they are benefitted in malaria prone areas as the malarial parasites are unable to feed and multiply inside $Hb^S$ carrying erythrocytes. The homozygous individuals,

$Hb^S$. $Hb^S$ are not that lucky. Their erythrocytes become sickle shaped even under normal conditions so that the homozygous individuals die before attaining maturity. A cross between two heterozygous $Hb^A$ $Hb^S$ individuals, therefore, produces offspring consisting of 1 severely anaemic: 2 carriers: 1 normal. The suffering from death of severely anaemic child can be avoided by discouraging marriages between heterozygous individuals ($Hb^A$ $Hb^S$).




**(b) Thalassemia** - It is heterogeneous group of hereditary diseases caused by haemolytic anaemia that develops due to imbalanced synthesis of generally α and β globins of haemoglobin.

The effect is pronounced when the defective genes occur in homozygous state. In heterozygous state the adverse effect is minor. Thalassemia originated in Mediterranean region. It is more prevalent in Mediterranean, middle east, Indian subcontinent and south-east Africa. Thalassemia is of three types-α, β and δ.

(i) Alpha Thalassemia - It is caused by defective alpha globin genes present on chromosome 16. Deletion in p-segment of chromosome also produces the same effect. There is decreased synthesis of alpha globin resulting in excess of beta globin in adults and excess of gamma chain in new borns. As a result haemoglobin tetramers are unstable and there is abnormal oxygen dissociation curve. There are two pairs of alleles (HBA1, HBA2). Persons with one defective allele are silent carriers. Ones with two defective alleles have α-thalassemia minor with mild anaemia. Persons having three defective alleles are likely to have haemoglobin H (HbH) disease. *(Contd......)*

ಸುರಕ್ಷತೆಗಾಗಿ ಗಮನಾರ್ಹ ಪ್ರಮಾಣದ ಬಂಡವಾಳ ಹೂಡಿಕೆ • ಕವಚ್ ಅಳವಡಿಕೆ ಸಂಕೀರ್ಣ ಕಾರ್ಯ

# ರೈಲ್ವೆ ಸುರಕ್ಷತೆ: 1.52 ಲಕ್ಷ ಹುದ್ದೆಗಳು ಖಾಲಿ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆಯ ಸುರಕ್ಷತಾ ವಿಭಾಗದಲ್ಲಿ 1.52 ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ರೈಲ್ವೆ ಸಚಿವಾಲಯ ಹೇಳಿದೆ.

ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಹಾಕಿರುವ ಅರ್ಜಿಗೆ ಪ್ರತಿಕ್ರಿಯಿಸಿರುವ ಸಚಿವಾಲಯ, ‘ಸುರಕ್ಷತಾ ವಿಭಾಗದಲ್ಲಿ ವಿಭಾಗಕ್ಕೆ 10,00,941 ಲಕ್ಷ ಹುದ್ದೆಗಳು ಮಂಜೂರಾಗಿವೆ. ಈ ವರ್ಷದ ಮಾರ್ಚ್ ಅಂತ್ಯಕ್ಕೆ 8,48,207 ಹುದ್ದೆಗಳು ಭರ್ತಿಯಾಗಿದ್ದು, 1,52,734 ಹುದ್ದೆಗಳು ಖಾಲಿ ಇವೆ’ ಎಂದು ಹೇಳಿದೆ.

‘ಸಿಬ್ಬಂದಿ ಕೊರತೆ ಇದ್ದರೂ, ರೈಲುಗಳ ಸುರಕ್ಷತೆಗೆ ಪ್ರಮುಖವಾಗಿ ಆದ್ಯತೆ ನೀಡಲಾಗುತ್ತಿದೆ. 10 ವರ್ಷಗಳ ಅವಧಿಯಲ್ಲಿ ರೈಲ್ವೆಯು ಸುರಕ್ಷತೆಗಾಗಿ ಗಮನಾರ್ಹ ಬಂಡವಾಳ ಹೂಡಿದೆ. ಜೊತೆಗೆ ಹಲವು ರಚನಾತ್ಮಕ ಮತ್ತು ಸಮಗ್ರ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಇವು ರೈಲುಗಳ ಸುಗಮ ಕಾರ್ಯನಿರ್ವಹಣೆ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುರಕ್ಷತಾ ವಿಭಾಗದ ಹುದ್ದೆಗಳಲ್ಲಿ ರೈಲು ಚಾಲಕರು, ಇನ್‌ಸ್ಪೆಕ್ಟರ್‌ಗಳು, ಸಿಬ್ಬಂದಿ ನಿಯಂತ್ರಕರು, ರೈಲು ನಿಯಂತ್ರಕರು, ಹಳಿ ನಿರ್ವಾಹಕರು, ಸ್ಟೇಷನ್ ಮಾಸ್ಟರ್‌ಗಳು, ವಿದ್ಯುತ್ ಸಿಗ್ನಲ್ ನಿರ್ವಾಹಕರು, ಪಾಯಿಂಟ್ಸ್‌ಮೆನ್, ಸಿಗ್ನಲಿಂಗ್ ಮೇಲ್ವಿಚಾರಕರು ಬರುತ್ತಾರೆ.

ರೈಲುಗಳ ಕಾರ್ಯಾಚರಣೆಯಲ್ಲಿ ಈ ಸಿಬ್ಬಂದಿ ನೇರವಾಗಿ ಭಾಗಿಯಾಗುವುದರಿಂದ, ರೈಲುಗಳ ಸುಗಮ ಸಂಚಾರದಲ್ಲಿ ಈ ಹುದ್ದೆಗಳು ಪ್ರಮುಖ ಪಾತ್ರ ವಹಿಸುತ್ತವೆ.

ಮೇಲ್, ಎಕ್ಸ್‌ಪ್ರೆಸ್, ಪ್ಯಾಸೆಂಜರ್, ಗೂಡ್ಸ್ ಸೇರಿದಂತೆ ಎಲ್ಲ ರೀತಿಯ ರೈಲುಗಳ ಚಾಲಕರ 70,093 ಹುದ್ದೆಗಳು ಮಂಜೂರಾಗಿದ್ದು, 14,429 ಹುದ್ದೆಗಳು ಖಾಲಿ ಇವೆ ಎಂದು ಸಚಿವಾಲಯ ಹೇಳಿದೆ.

ಮಧ್ಯಪ್ರದೇಶದ ಚಂದ್ರ ಶೇಖರ್ ಗೌರ್ ಅವರು ಆರ್‌ಟಿಐ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆ.



## ಅಶ್ವಿನಿ ವೈಷ್ಣವ್ ರಾಜೀನಾಮೆಗೆ ಆಗ್ರಹ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ರೈಲ್ವೆ ವ್ಯವಸ್ಥೆಯನ್ನು ‘ನಾಶಪಡಿಸಿದೆ’ ಎಂದು ಟೀಕಿಸಿರುವ ಕಾಂಗ್ರೆಸ್ ಪಕ್ಷ, ‘ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲು ಅಪಘಾತದ ನೈತಿಕ ಹೊಣೆ ಹೊತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರಾಜೀನಾಮೆ ನೀಡಬೇಕು’ ಎಂದು ಆಗ್ರಹಪಡಿಸಿದೆ.

ರೈಲ್ವೆ ಅಪಘಾತದ ಸ್ಥಳಕ್ಕೆ ಸಚಿವರು ಬೈಕ್‌ನಲ್ಲಿ ಹಿಂಬದಿ ಸವಾರರಾಗಿ ತೆರಳಿದ್ದರು ಎಂಬುದನ್ನು ಟೀಕಿಸಿರುವ ವಿರೋಧ ಪಕ್ಷವು, ‘ಅಶ್ವಿನಿ ವೈಷ್ಣವ್ ಅವರು ರೈಲ್ವೆ ಸಚಿವರಾ ಅಥವಾ ರೀಲ್ ಸಚಿವರಾ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ‘ರೈಲು ಅಪಘಾತ ಸಂಭವಿಸಿದಾಗ ರೈಲ್ವೆ ಸಚಿವರು ಕ್ಯಾಮೆರಾ ಬೆಳಕಿನ ಜೊತೆಗೆ ಭೇಟಿ ನೀಡುತ್ತಾರೆ. ಎಲ್ಲವೂ ಸರಿಯಾಗಿದೆ ಎಂಬಂತೆ ಬಿಂಬಿಸುತ್ತಾರೆ. ನರೇಂದ್ರ ಮೋದಿಯವರೇ ಹೇಳಿ. ಇದರ ಹೊಣೆ ಯಾರು ಹೊರಬೇಕು. ರೈಲ್ವೆ ಸಚಿವರಾ ಅಥವಾ ನೀವಾ ಎಂದು ಪ್ರಶ್ನಿಸಿದ್ದಾರೆ.

## ಸಿಯಾಲ್ದಾ ತಲುಪಿದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್

ಕೋಲ್ಕತ್ತ (ಪಿಟಿಐ): ಅಪಘಾತಕ್ಕೆ ಈಡಾಗಿದ್ದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲು ಮಂಗಳವಾರ ನಸುಕಿನಲ್ಲಿ ಸಿಯಾಲ್ದಾ ನಿಲ್ದಾಣವನ್ನು ತಲುಪಿದೆ ಎಂದು ಪೂರ್ವ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸರಕು ಸಾಗಣೆ ರೈಲು ಡಿಕ್ಕಿ ಹೊಡೆದ ಪರಿಣಾಮವಾಗಿ ಈ ರೈಲಿನ ಹಿಂಭಾಗದ ನಾಲ್ಕು ಬೋಗಿಗಳು ಹಾನಿಗೀಡಾಗಿದ್ದವು. ಅಪಘಾತದಲ್ಲಿ ಒಟ್ಟು ಹತ್ತು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಹಾನಿ ಆಗಿರದ ಬೋಗಿಗಳು, ಅಂದಾಜು 850 ಪ್ರಯಾಣಿಕರನ್ನು ಹೊತ್ತು ಸಿಯಾಲ್ದಾ ನಿಲ್ದಾಣವನ್ನು ನಸುಕಿನ 3.16ಕ್ಕೆ ತಲುಪಿವೆ.

ಕೋಲ್ಕತ್ತ ಮೇಯರ್ ಫಿರ್ಹದ್ ಹಕೀಂ, ಪಶ್ಚಿಮ ಬಂಗಾಳದ ಸಾರಿಗೆ ಸಚಿವ ಸ್ನೇಹಾಶೀಷ್ ಚಕ್ರವರ್ತಿ, ಸಿಯಾಲದಹ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ದೀಪಕ್ ನಿಗಮ್ ಅವರು ನಿಲ್ದಾಣದಲ್ಲಿ ಇದ್ದು, ಪ್ರಯಾಣಿಕರಿಗೆ ಮುಂದಿನ ಪ್ರಯಾಣಕ್ಕೆ ಅನುಕೂಲ ಮಾಡಿಕೊಟ್ಟರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಪಘಾತದಿಂದಾಗಿ ಆತಂಕ್ಕೆ ಒಳಗಾಗಿದ್ದ ಪ್ರಯಾಣಿಕರಿಗೆ ವಿವಿಧ ರೈಲು ನಿಲ್ದಾಣಗಳಲ್ಲಿ ವೈದ್ಯಕೀಯ ಸೌಲಭ್ಯ, ಆಹಾರ, ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಿಯಾಲದಹ ನಿಲ್ದಾಣದಿಂದ ಪ್ರಯಾಣಿಕರು ತಮ್ಮ ಮನೆಗಳಿಗೆ ತಲುಪುವಂತೆ ಆಗಲು ಸಾರಿಗೆ ಇಲಾಖೆಯು ಬಸ್ಸುಗಳು ಹಾಗೂ ಇತರ ವಾಹನಗಳ ಸೌಲಭ್ಯ ಕಲ್ಪಿಸಿತ್ತು ಎಂದು ರಾಜ್ಯ ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಭರದಿಂದ ಸಾಗಿದೆ ಕವಚ್ ಅಳವಡಿಕೆ: ಸಚಿವಾಲಯ

ನವದೆಹಲಿ (ಪಿಟಿಐ): ರೈಲುಗಳು ಪರಸ್ಪರ ಡಿಕ್ಕಿ ಆಗುವುದನ್ನು ತಡೆಯುವ ‘ಕವಚ್’ ವ್ಯವಸ್ಥೆಯನ್ನು ಅಳವಡಿಸುವ ಕಾರ್ಯವು 3,000 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ ಭರದಿಂದ ಸಾಗಿದೆ ಎಂದು ರೈಲ್ವೆ ಸಚಿವಾಲಯ ಹೇಳಿದೆ.

ಕವಚ್ ವ್ಯವಸ್ಥೆಯನ್ನು ಅಳವಡಿಸುವುದು ಬಹಳ ಸಂಕೀರ್ಣವಾದ ಕೆಲಸ. ಇದರಲ್ಲಿ ಆರು ಪ್ರಮುಖ ಉಪ ವ್ಯವಸ್ಥೆಗಳನ್ನು ಅಳವಡಿಸಬೇಕಾಗುತ್ತದೆ. ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ರೈಲು ಮಾರ್ಗದ ಉದ್ದಕ್ಕೂ ಅಳವಡಿಸಬೇಕು, ದೂರಸಂಪರ್ಕ ಟವರ್‌ಗಳನ್ನು ಅಳವಡಿಸಬೇಕು, ದೂರಸಂಪರ್ಕ ಉಪಕರಣಗಳನ್ನು ಈ ಟವರ್‌ಗಳಲ್ಲಿ ಹಾಗೂ ರೈಲುಗಳಲ್ಲಿ ಅಳವಡಿಸಬೇಕು, ರೈಲು ನಿಲ್ದಾಣಗಳಲ್ಲಿ ದತ್ತಾಂಶ ಕೇಂದ್ರಗಳನ್ನು ಸ್ಥಾಪಿಸಬೇಕು ಹಾಗೂ ಇವುಗಳನ್ನು ಸಿಗ್ನಲ್ ವ್ಯವಸ್ಥೆಯ ಜೊತೆ ಜೋಡಿಸಬೇಕು. ನಂತರದಲ್ಲಿ ಕೆಲವು ಉಪಕರಣಗಳನ್ನು ರೈಲ್ವೆ ಎಂಜಿನ್‌ಗಳಲ್ಲಿ ಅಳವಡಿಸಬೇಕು ಎಂದು ಸಚಿವಾಲಯ ವಿವರಿಸಿದೆ.

‘ಈ ವ್ಯವಸ್ಥೆಗೆ 2019ರಲ್ಲಿ ಅನುಮತಿ ಸಿಕ್ಕಿತು. ಕೋವಿಡ್ ಒಡ್ಡಿದ ಸವಾಲುಗಳ ನಡುವೆಯೂ ಕೆಲಸದಲ್ಲಿ ಪ್ರಗತಿ ಸಾಧಿಸಲಾಗಿದೆ’ ಎಂದು ಹೇಳಿದೆ.



## ಮೆರವಣಿಗೆ

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಮಾರಾಟ ತೆರಿಗೆ ಹೆಚ್ಚಳ ವಿರೋಧಿಸಿ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಕುದುರೆ ಗಾಡಿಯ ಮೆರವಣಿಗೆ ನಡೆಸಿದರು

ಪ್ರಜಾವಾಣಿ ಚಿತ್ರ

# ‘ದೇವದಾರಿ ಗಣಿಗಾರಿಕೆಗೆ ಒಪ್ಪಿದ್ದು ರಾಜ್ಯ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಡೂರಿನ ದೇವದಾರಿ ಬ್ಲಾಕ್‌ನಲ್ಲಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ (ಕೆಐಒಸಿಎಲ್) ಗಣಿಗಾರಿಕೆ ನಡೆಸಲು ಒಪ್ಪಿಗೆ ನೀಡಿರುವುದು ರಾಜ್ಯ ಸರ್ಕಾರ. ಅದು ತಮ್ಮ ತೀರ್ಮಾನ ಅಲ್ಲ ಎಂದು ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಕೆಐಒಸಿಎಲ್ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರಿಗೆ ಈ ಕುರಿತು ಪ್ರತಿಕ್ರಿಯಿಸಿದ ಅವರು, ‘ದೇವದಾರಿ ಬ್ಲಾಕ್‌ನ 992 ಎಕರೆ 31 ಗುಂಟೆ ವಿಸ್ತೀರ್ಣದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿದ್ದ ರಾಜ್ಯ ಸರ್ಕಾರ, ಪುನರ್ ಅರಣ್ಯೀಕರಣ ಚಟುವಟಿಕೆ ನಡೆಸಲು ಕಂಪನಿಯಿಂದ ₹194 ಕೋಟಿ ಪಡೆದಿದೆ. ಗಣಿಗಾರಿಕೆಗೆ ಅರಣ್ಯ ಇಲಾಖೆಯ ವಿರೋಧವಿದ್ದರೆ ಕೆಐಒಸಿಎಲ್‌ನಿಂದ ರಾಜ್ಯ ಸರ್ಕಾರ ಹಣ ಪಡೆದಿದ್ದು ಏಕೆ’ ಎಂದು ಪ್ರಶ್ನಿಸಿದರು.

‘ಗಣಿಗಾರಿಕೆಗೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳೂ 2023ರಲ್ಲೇ ಪೂರ್ಣಗೊಂಡಿದ್ದವು. ರಾಜ್ಯ ಸರ್ಕಾರವು ಒಪ್ಪಿಗೆ ಸೂಚಿಸಿದ ಬಳಿಕ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಅಂತಿಮ ಅನುಮೋದನೆ ನೀಡಿತ್ತು’ ಎಂದರು.

ದೇವದಾರಿ ಬ್ಲಾಕ್‌ನ ಗಣಿಗಾರಿಕೆಯಿಂದ ಕೆಐಒಸಿಎಲ್‌ಗೆ ಅನುಕೂಲ ಆಗುವುದರ ಜತೆಯಲ್ಲೇ ಅರಣ್ಯೀಕರಣಕ್ಕೂ ಸಹಾಯವಾಗುತ್ತದೆ. 1976ರಲ್ಲಿ ಆರಂಭವಾದ ಕಂಪನಿ 2005ರವರೆಗೂ ಲಾಭದಾಯಕ ಸ್ಥಿತಿಯಲ್ಲೇ ಇತ್ತು. 1,600ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿತ್ತು. ಗಣಿಗಾರಿಕೆ ಚಟುವಟಿಕೆ ಸ್ಥಗಿತಗೊಂಡ ಬಳಿಕ ಹಲವು ಸವಾಲುಗಳ ಮಧ್ಯೆಯೂ 595 ನೌಕರರು ಉಳಿದಿದ್ದಾರೆ ಎಂದು ಹೇಳಿದರು.

‘ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ನಾನು ಅನುಮತಿ ನೀಡಿಲ್ಲ ಎಂಬುದನ್ನು ಸಂಡೂರಿನ ಜನರಿಗೆ ಸ್ಪಷ್ಟಪಡಿಸಲು ಬಯಸುತ್ತೇನೆ. ಕೆಐಒಸಿಎಲ್ 808 ಹೆಕ್ಟೇರ್ ವಿಸ್ತೀರ್ಣದಲ್ಲಿ ಅರಣ್ಯೀಕರಣ ಚಟುವಟಿಕೆ ನಡೆಸಲಿದೆ. ಈ ಯೋಜನೆಯು ಕೆಐಒಸಿಎಲ್ ಅನ್ನು ಲಾಭದ ಹಳಿಗೆ ತರುವುದಕ್ಕೆ ಸೀಮಿತವಾಗಿಲ್ಲ. ಅದರ ಜತೆಯಲ್ಲೇ ಅರಣ್ಯೀಕರಣದ ಮೂಲಕ ಜೀವವೈವಿಧ್ಯ ಸಂರಕ್ಷಣೆಯೂ ಸೇರಿದೆ’ ಎಂದರು.

ಅಧಿಕಾರಿಗಳ ಜತೆ ಸಭೆ ನಡೆಸಿದ ಕುಮಾರಸ್ವಾಮಿ ಕೆಐಒಸಿಎಲ್ ಚಟುವಟಿಕೆಗಳ ಕುರಿತು ಮಾಹಿತಿ ಪಡೆದರು. ಕಂಪನಿಯ ಅಧ್ಯಕ್ಷ ಗಂಟಿ ವೆಂಕಟ ಕಿರಣ್ ಅವರು ಉತ್ಪಾದನಾ ಚಟುವಟಿಕೆಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ತಯಾರಿಕಾ ಕಾರ್ಖಾನೆ ಪುನಶ್ಚೇತನದ ಬಗ್ಗೆಯೂ ಅಧಿಕಾರಿಗಳ ಜತೆ ಚರ್ಚಿಸಿದರು.



ಬಿಹಾರದ ಅರಾರಿಯ ಜಿಲ್ಲೆಯಲ್ಲಿ ಕುಸಿದುಬಿದ್ದಿರುವ ಸೇತುವೆ —ಪಿಟಿಐ ಚಿತ್ರ

# ಬಿಹಾರ: ಕುಸಿದು ಬಿದ್ದ ಹೊಸ ಸೇತುವೆ

ಅರಾರಿಯ, ಬಿಹಾರ (ಪಿಟಿಐ): ರಾಜ್ಯದ ಅರಾರಿಯ ಜಿಲ್ಲೆಯಲ್ಲಿ ಬಾಕ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಸೇತುವೆಯ ಒಂದು ಭಾಗ ಮಂಗಳವಾರ ಕುಸಿದುಬಿದ್ದಿದೆ. ಪ್ರಾಣಹಾನಿಯ ವರದಿಯಾಗಿಲ್ಲ. ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ.

ರಾಜ್ಯ ಸರ್ಕಾರ ನಿರ್ಮಿಸಿದ್ದ ಈ ಸೇತುವೆಯ ಸಂಪರ್ಕ ರಸ್ತೆಗಳ ನಿರ್ಮಾಣ ಬಾಕಿ ಉಳಿದಿದ್ದುದರಿಂದ ಇನ್ನು ಸಾರ್ವಜನಿಕ ಬಳಕೆಗೆ ಮುಕ್ತವಾಗಿರಲಿಲ್ಲ.

ಅರಾರಿಯಾ ಜಿಲ್ಲೆಯಲ್ಲಿನ ಕುರ್ಸಾ ಕಾಂತಾ ಮತ್ತು ಸಿಕ್ಟಿ ನಡುವೆ ಸಂಪರ್ಕ ಕಲ್ಪಿಸುವುದು ಸೇತುವೆ ನಿರ್ಮಾಣದ ಉದ್ದೇಶವಾಗಿತ್ತು.

ಸುದ್ದಿಸಂಸ್ಥೆಯ ಜೊತೆಗೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ರಂಜನ್ ಅವರು, ಹೊಸ ಸೇತುವೆಯು ಭಾಗಶಃ ಕುಸಿದಿದೆ. ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದು, ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದಾರೆ’ ಎಂದು ತಿಳಿಸಿದರು.

ಈ ವರ್ಷದ ಮಾರ್ಚ್‌ನಲ್ಲಿ ಕೋಸಿ ನದಿಗೆ ಅಡ್ಡಲಾಗಿ ಸುಪೌಲ್ ಜಿಲ್ಲೆಯಲ್ಲಿ ನಿರ್ಮಾಣ ಆಗುತ್ತಿದ್ದ ಸೇತುವೆಯು ಕುಸಿದಿತ್ತು. ಆಗ ಒಬ್ಬರು ಸತ್ತಿದ್ದು, 10 ಮಂದಿ ಗಾಯಗೊಂಡಿದ್ದರು.

# ಅರಣ್ಯೀಕರಣಕ್ಕೂ ಒತ್ತು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಳ್ಳಾರಿಯ ಸಂಡೂರಿನ ದೇವದಾರಿಯ 404 ಹೆಕ್ಟೇರ್ ಪ್ರದೇಶದಲ್ಲಿ ಅದಿರು ಉತ್ಪಾದನೆಗೆ ಅವಕಾಶ ನೀಡಲಾಗಿದೆ. ಅದಕ್ಕೆ ಪರ್ಯಾಯವಾಗಿ 808 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ ಮಾಡಲಾಗುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಗಣಿಗಾರಿಕೆ ಗುತ್ತಿಗೆ ಪಡೆದ ಕಂಪನಿ ₹390 ಕೋಟಿ ವೆಚ್ಚದಲ್ಲಿ ಅರಣ್ಯೀಕರಣ ಮತ್ತು ಜೀವ ಸಂಕುಲ ಸಂರಕ್ಷಣೆಗೆ ಮುಂದಾಗಿದೆ. ರಾಜ್ಯದ ಅರಣ್ಯ ಇಲಾಖೆಗೆ ಈಗಾಗಲೇ ಹಣವನ್ನೂ ಪಾವತಿಸಿದೆ. ರಾಜ್ಯ ಸರ್ಕಾರ ಅರಣ್ಯ ಬೆಳೆಸಲು ಮುಂದಾಗಬೇಕು. ಗಣಿಗಾರಿಕೆ ವಿರೋಧಿಸುವ ಪರಿಸರವಾದಿಗಳು ಇದನ್ನು ತಿಳಿಕೊಳ್ಳಬೇಕು’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ನಾನು ಅದಿರು ಮಾರಲು ಸಹಿ ಹಾಕಿಲ್ಲ. 2005ರಲ್ಲಿ ಕುದುರೆಮುಖ ಭಾಗದಲ್ಲಿ ಗಣಿಗಾರಿಕೆ ನಿಂತಿತ್ತು. ಅದರ ನಂತರ, ಅಲ್ಲಿ ಗುತ್ತಿಗೆ ಪಡೆದ ಕಂಪನಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜೊತೆ ಸಾಕಷ್ಟು ಪ್ರಕ್ರಿಯೆ ನಡೆಸಿತ್ತು. 2016ರಲ್ಲಿ ರಾಜ್ಯ ಸರ್ಕಾರ ದೇವದಾರಿ ಅರಣ್ಯ ಪ್ರದೇಶದಲ್ಲಿ 404 ಹೆಕ್ಟೇರ್ ಪ್ರದೇಶದಲ್ಲಿ ಅದಿರು ಉತ್ಪಾದನೆ ಮಾಡುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಅದರ ಮುಂದುವರಿದ ಭಾಗವಾಗಿ ಕೇಂದ್ರ ಸರ್ಕಾರ ಸಮ್ಮತಿಸಿದೆ’ ಎಂದರು.

‘ಗಣಿಗಾರಿಕೆಗೆ ಉದ್ದೇಶಿಸಿದ ದೇವದಾರಿ ಪ್ರದೇಶದಲ್ಲಿ 90 ಸಾವಿರ ಮರಗಳಿವೆ ಎಂದು ಹೇಳಲಾಗುತ್ತಿದೆ. ಆದರೆ, ನಿಖರ ಮಾಹಿತಿ ಇಲ್ಲ. ಈ ಗಣಿಗಾರಿಕೆ 40 ರಿಂದ 50 ವರ್ಷ ನಡೆಯುವ ನಿರಂತರ ಪ್ರಕ್ರಿಯೆ ಆಗಿರುವ ಕಾರಣ ಹಂತಹಂತವಾಗಿ ಮರ ಕಡಿಯಲಾಗುತ್ತದೆ. ಇದರೊಂದಿಗೆ ಅರಣ್ಯೀಕರಣವೂ ನಡೆಯುತ್ತದೆ’ ಎಂದರು.



**ರಾಜ್ಯ ಸರ್ಕಾರವು 30 ರಿಂದ 35 ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಿದೆ ಎಂದು ತಿಳಿದು ಬಂದಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ**

**ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

## ‘ಚರ್ಚೆಗೆ ಸಿದ್ಧ’

ಧಾರವಾಡ: ‘ದೇವದಾರಿ ಅರಣ್ಯದಲ್ಲಿ ಗಣಿಗಾರಿಕೆ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜ ಪರಿವರ್ತನಾ ಸಮುದಾಯದ ಅಧ್ಯಕ್ಷ ಎಸ್.ಆರ್.ಹಿರೇಮಠ ಜೊತೆ ಚರ್ಚಿಸಲು ಸಿದ್ಧ ಇದ್ದೇನೆ. ಅವರು ಯಾವಾಗಲಾದರೂ ನಮ್ಮ ಕಚೇರಿಗೆ ಬರಬಹುದು’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ‘ಅವರು ಕಚೇರಿಗೆ ಬಂದರೆ ಎಲ್ಲ ದಾಖಲೆ ಪತ್ರ ತೋರಿಸುವೆ’ ಎಂದರು.

## ‘ಗಣಿ ಗುತ್ತಿಗೆ ರದ್ದುಪಡಿಸಿ’

ಧಾರವಾಡ: ‘ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ 450 ಹೆಕ್ಟೇರ್ ಜಾಗ ನೀಡಿರುವುದು, ಸ್ವಾಮಿಮಲೈ ಭಾಗದ ಅರಣ್ಯದ ಸುಮಾರು 99 ಸಾವಿರ ಮರಗಳಿಗೆ ಕುತ್ತಾಗುವ ಗಣಿ ಗುತ್ತಿಗೆ ಹಾಗೂ ವಿಐಎಸ್‌ಎಲ್‌ಗೆ ನೀಡಿರುವ 60.7 ಹೆಕ್ಟೇರ್ ಗಣಿ ಗುತ್ತಿಗೆ ರದ್ದುಪಡಿಸಬೇಕು’ ಎಂದು ಸಮಾಜ ಪರಿವರ್ತನ ಸಮುದಾಯ (ಎಸ್‌ಪಿಎಸ್) ಸ್ಥಾಪಕ ಅಧ್ಯಕ್ಷ ಎಸ್.ಆರ್.ಹಿರೇಮಠ ಒತ್ತಾಯಿಸಿದರು.

‘ಈ ಪ್ರದೇಶದಲ್ಲಿ ಗಣಿ ಗುತ್ತಿಗೆ ನೀಡಬಾರದು ಎಂದು ಅರಣ್ಯ ಇಲಾಖೆಯವರು ತಿಳಿಸಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಎಸ್‌ಪಿಎಸ್, ಇತರರು ವರ್ಸಸ್ ಕರ್ನಾಟಕ, ಆಂಧ್ರ ಪ್ರದೇಶ ಸರ್ಕಾರ, ಇತರರು) ಸಂಬಂಧಿಸಿದಂತೆ ನೀಡಿದ ಆದೇಶವನ್ನು ಸರ್ಕಾರ ಪರಿಗಣಿಸಬೇಕು’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸಿಇಸಿ ಮತ್ತು ಮಾನಿಟರಿಂಗ್ ಸಮಿತಿಗಳು ಓವರ್‌ಸೈಟ್ ಅಥಾರಿಟಿಯ ಸಲಹೆ, ಶಿಫಾರಸುಗಳಿಗೆ ಅನುಗುಣವಾಗಿ ಗಣಿಗಾರಿಕೆಯ ಮೂರು ಜಿಲ್ಲೆಗಳಲ್ಲಿ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಂಡು ವರದಿಯನ್ನು ಕೋರ್ಟ್‌ಗೆ ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಅದಿರು ತೆಗೆಯುವ ಪ್ರಮಾಣಕ್ಕೆ ಮಿತಿಗಳನ್ನು ಹೇರಬೇಕೆ? ಅದಿರು ಹೊರತೆಗೆಯುವ ಪ್ರಮಾಣದ ಮಿತಿ ಹೆಚ್ಚಿಸಬೇಕೆ ಅಥವಾ ಕಡಿಮೆ ಮಾಡಬೇಕೆ ಎಂಬುದನ್ನು ಪರಿಶೀಲಿಸಬೇಕು. ಜುಲೈ 14ರೊಳಗೆ ಕೋರ್ಟ್‌ಗೆ ವರದಿ ಸಲ್ಲಿಸಬೇಕು’ ಎಂದು ಮಾಹಿತಿ ನೀಡಿದರು.

‘ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರಾಗಿ ಅಧಿಕಾರ ವಹಿಸಿಕೊಂಡ ದಿನವೇ ಗಣಿ ಗುತ್ತಿಗೆಗಳಿಗೆ ಅನುಮತಿ ನೀಡಿದ್ದಾರೆ. ಕೆಐಒಸಿಎಲ್ ಪ್ರಸ್ತಾವವನ್ನು ವಿವರವಾಗಿ ಅವರು ಅಧ್ಯಯನ ಮಾಡಿಲ್ಲ. ಈ ಹಿಂದೆ ಅವರು ಸಂಡೂರಿನ ಗ್ರಾಮಗಳಿಗೆ ನೀಡಿದ್ದ ಆಶ್ವಾಸನೆಗಳನ್ನ ಗಮನಿಸದೆ ಇಂತಹ ಕ್ರಮ ತೆಗೆದುಕೊಂಡಿದ್ದಾರೆ. ಅವರು ನಿರ್ಧಾರವನ್ನು ಮರುಪರಿಶೀಲನೆ ಮಾಡಬೇಕು’ ಎಂದು ಒತ್ತಾಯಿಸಿದರು.

# ಹರಿಯಾಣ: ‘ಕೈ’ ತೊರೆದ ಕಾರ್ಯಾಧ್ಯಕ್ಷೆ, ಶಾಸಕಿ ಕಿರಣ್

ನವದೆಹಲಿ (ಪಿಟಿಐ): ಹರಿಯಾಣ ಕಾಂಗ್ರೆಸ್‌ನ ಹಿರಿಯ ನಾಯಕರಾದ ಶಾಸಕಿ ಕಿರಣ್ ಚೌಧರಿ ಮತ್ತು ಅವರ ಪುತ್ರಿ ಶ್ರುತಿ ಚೌಧರಿ (ಕಾರ್ಯಾಧ್ಯಕ್ಷೆ) ಅವರು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದು, ಬುಧವಾರ ಬಿಜೆಪಿ ಸೇರಲಿದ್ದಾರೆ.

ಅಕ್ಟೋಬರ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ರಾಜ್ಯದಲ್ಲಿ ಈ ಇಬ್ಬರು ನಾಯಕರು ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ.

ಪಕ್ಷದ ಸಂಘಟನೆಯನ್ನು ನಾಯಕ ಭೂಪಿಂದರ್ ಸಿಂಗ್ ಹೂಡಾ ಅವರು ವೈಯಕ್ತಿಕ ದ್ವೇಷ ಸಾಧನೆಗೆ ಬಳಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಈ ನಾಯಕರು ಬಿಜೆಪಿ ಸೇರುತ್ತಿರುವುದು ಕೇಸರಿ ಪಕ್ಷಕ್ಕೆ ಹೆಚ್ಚಿನ ಬಲ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿರುವ ದೀಪೇಂದರ್ ಹೂಡಾ ಅವರಿಂದ ತೆರವಾದ ರಾಜ್ಯಸಭಾ ಸ್ಥಾನಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಿರಣ್ ಅವರು ಕಣಕ್ಕಿಳಿಯುವ ಸಾಧ್ಯತೆಗಳಿವೆ. ಭಿವಾನಿ ಮಹೇಂದ್ರಗಢ ಲೋಕಸಭಾ ಕ್ಷೇತ್ರದಿಂದ ಶ್ರುತಿ ಅವರಿಗೆ ಟಿಕೆಟ್ ನಿರಾಕರಿಸಿದ್ದಕ್ಕಾಗಿ ಚೌಧರಿ ಅವರು ಕಾಂಗ್ರೆಸ್ ನಾಯಕತ್ವದೊಂದಿಗೆ ಅಸಮಾಧಾನಗೊಂಡಿದ್ದಾರೆ. ಅಲ್ಲದೆ ಹೂಡಾ ಅವರಿಂದಾಗಿ ಟಿಕೆಟ್ ಕೈತಪ್ಪಿತು ಎಂಬುದು ಅವರ ಸಿಟ್ಟಿಗೆ ಪ್ರಮುಖ ಕಾರಣ ಎಂದು ಮೂಲಗಳು ಹೇಳಿವೆ.

# 27ರಂದು ರಾಜ್ಯವ್ಯಾಪಿ ಕೆಂಪೇಗೌಡರ ಜಯಂತಿ ಆಚರಣೆ

ಒಂದನೇ ಪುಟದಿಂದ...

ಕೆಂಪೇಗೌಡರ 515ನೇ ಜಯಂತಿಯನ್ನು ಇದೇ 27ರಂದು ಅರಮನೆ ಮೈದಾನ ಅಥವಾ ಸ್ಟೇಡಿಯಂನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಹುಲಿಯೂರು ದುರ್ಗ, ಮಾಗಡಿ, ಆವತಿ ಸೇರಿದಂತೆ ಬೆಂಗಳೂರಿನ ಎಲ್ಲಾ ದಿಕ್ಕುಗಳಿಂದ ಪ್ರತಿ ವರ್ಷದಂತೆ ಈ ವರ್ಷವೂ ಗೋಪುರ ಮತ್ತು ಜ್ಯೋತಿಗಳ ಮೆರವಣಿಗೆ ಬರುತ್ತವೆ ಎಂದು ಹೇಳಿದರು

ವಿಧಾನಪರಿಷತ್‌ನ ಮಾಜಿ ಸಭಾಪತಿ ಬಿ.ಎಲ್.ಶಂಕರ್ ನೇತೃತ್ವದಲ್ಲಿ ಕೆಂಪೇಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚನೆ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಡಿಎ, ಬಿಬಿಎಂಪಿಯಿಂದ ಪ್ರಶಸ್ತಿ ನೀಡಲು ಯೋಜಿಸಲಾಗಿದೆ ಎಂದು ಹೇಳಿದರು.

ಕೆಂಪೇಗೌಡರ ಮೂಲ ಸಮಾಧಿ ಸ್ಥಳ, ಕೋಟೆಯನ್ನು ಅಭಿವೃದ್ಧಿಪಡಿಸುವ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ದೇವನಹಳ್ಳಿ ಕ್ಷೇತ್ರದಲ್ಲಿ ಕೆಂಪೇಗೌಡ ಜನ್ಮಸ್ಥಳ ಅಭಿವೃದ್ಧಿಗೆ 10 ಎಕರೆ ಮಂಜೂರು ಮಾಡಲಾಗಿದೆ. ಶೀಘ್ರದಲ್ಲೇ ಸ್ಥಳ ಪರಿಶೀಲನೆ ನಡೆಸಲಾಗುವುದು. ಸುಮನಹಳ್ಳಿಯಲ್ಲಿ ಕೆಂಪೇಗೌಡ ಪ್ರಾಧಿಕಾರದ ಕಚೇರಿಗಾಗಿ 5 ಎಕರೆ ಜಾಗವನ್ನು ಮಂಜೂರು ಮಾಡಲಾಗಿದೆ. ಜಯಂತಿಯ ದಿನವೇ ಗುದ್ದಲಿಪೂಜೆ ನೆರವೇರಿಸಲು ಉದ್ದೇಶಿಸಲಾಗಿದೆ ಎಂದರು.

## ‘ಹೆಚ್ಚು ಸ್ಥಾನಕ್ಕೆ ಇವಿಎಂ ಕಾರಣ’

ವಿದ್ಯುನ್ಮಾನ ಮತಯಂತ್ರ (ಇವಿಎಂ) ಕಾರಣಕ್ಕೆ ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿಗೆ ನಿರೀಕ್ಷೆಗಿಂತ ಹೆಚ್ಚು ಸ್ಥಾನಗಳು ಬಂದಿದ್ದು, ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ನಡೆಸಬೇಕಾಗಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.



ಇವಿಎಂ ಪದ್ಧತಿ ತೊಲಗಬೇಕು. ಮತಪತ್ರ ಆಧಾರಿತ ಮತದಾನ ವ್ಯವಸ್ಥೆ ಮತ್ತೆ ಬರಬೇಕು. ಫಲಿತಾಂಶ ಬಂದಾಗಿರುವುದರಿಂದ ಈಗೇನೂ ಮಾಡಲು ಆಗುವುದಿಲ್ಲ ಎಂದು ಅವರು ಹೇಳಿದರು.

ಮಧ್ಯಪ್ರದೇಶದಲ್ಲಿ ಮತಪತ್ರ ಆಧಾರಿತ ಮತದಾನ ಇದ್ದಾಗ ಮೂರರಲ್ಲಿ ಎರಡು ಭಾಗದಷ್ಟು ಮತಗಳು ಕಾಂಗ್ರೆಸ್ ಪರವಾಗಿ ಬೀಳುತ್ತಿದ್ದವು. ಇವಿಎಂ ಕಾರಣಕ್ಕೆ ಈಗ ಪರಿಸ್ಥಿತಿ ಬದಲಾಗಿದೆ. ಇದರ ಬಗ್ಗೆ ಇನ್ನಷ್ಟು ಆಳವಾಗಿ ಚಿಂತನೆ ನಡೆಸಬೇಕಾಗಿದೆ ಎಂದರು.

# ಕಾಸಿಗಾಗಿ ಜಮೀನು: ಬಿಜೆಪಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳ ಹೆಚ್ಚುವರಿ ಹೊರೆ ನಿಭಾಯಿಸಲು ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಜಮೀನುಗಳನ್ನು ಬಳಸುವ ರಾಜ್ಯ ಸರ್ಕಾರದ ಚಿಂತನೆಯನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದೆ. ರಾಜ್ಯ ಸರ್ಕಾರ ದಿವಾಳಿಯಾಗಿರುವ ಕಾರಣದಿಂದ ಈ ಹೆಜ್ಜೆ ಇರಿಸಿದೆ ಎಂದು ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದಾರೆ.

‘ಬಜೆಟ್ ಮತ್ತು ಆರ್ಥಿಕತೆಯ ಬಗ್ಗೆ ಭಾರಿ ಜ್ಞಾನವಿದೆ ಎಂದು ಜಂಭ ಕೊಚ್ಚಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಗತಿಶೀಲ ರಾಜ್ಯವನ್ನು ದುಸ್ಥಿತಿಗೆ ತಂದು ನಿಲ್ಲಿಸಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಿವಾಳಿಯಾಗಿರುವ ತಮ್ಮ ಸರ್ಕಾರ ಉಳಿಸಿಕೊಳ್ಳಲು 25,000 ಎಕರೆ ಸರ್ಕಾರಿ ಜಮೀನು ಬಳಸಿಕೊಳ್ಳಲು ಹೊರಟಿದ್ದಾರೆ. ಮುಂದೊಂದು ದಿನ ವಿಧಾನಸೌಧವನ್ನೇ ಅಡಮಾನ ಇಟ್ಟರೂ ಆಶ್ಚರ್ಯವಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ ‘ಪ್ರಜಾವಾಣಿ’ಯ ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಕಾಸಿಗೆ 25 ಸಾವಿರ ಎಕರೆ ಆಸರೆ’ ವರದಿಯ ತುಣುಕನ್ನು ಹಂಚಿಕೊಂಡಿರುವ ಅವರು, ‘15 ಬಜೆಟ್ ಮಂಡಿಸಿರುವ ಸ್ವಯಂಘೋಷಿತ ಆರ್ಥಿಕ ತಜ್ಞರಾದ ನಿಮಗೆ ಈ ಬಾರಿಯ ಬಜೆಟ್ ಮಂಡಿಸುವಾಗ ಸರ್ಕಾರದ ಆದಾಯ ಮತ್ತು ವೆಚ್ಚದ ಬಗ್ಗೆ ಜ್ಞಾನ ಇರಲಿಲ್ಲವೆ’ ಎಂದು ಕೇಳಿದ್ದಾರೆ.

ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಂತಹ ಪ್ರಸ್ತಾವವನ್ನೇ ಅಲ್ಲಗಳೆದಿದ್ದಾರೆ.

ವಿಶಾಖಪಟ್ಟಣದ ರುಷಿಕೊಂಡದ ನೆತ್ತಿಯಲ್ಲಿ ಐಷಾರಾಮಿ ಬಂಗಲೆ

# ವಿವಾದದಲ್ಲಿ ‘ಜಗನ್ ಅರಮನೆ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ವಿಶಾಖಪಟ್ಟಣದ ರುಷಿಕೊಂಡದ ನೆತ್ತಿಯಲ್ಲಿ ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರ ನಿರ್ಮಿಸಿರುವ ವೈಭವೋಪೇತ ‘ಅರಮನೆ’ಯು ಈಗ ಆಂಧ್ರದಲ್ಲಿ ವಿವಾದ ಹುಟ್ಟುಹಾಕಿದೆ.

ಈ ಐಷಾರಾಮಿ ಕಟ್ಟಡವನ್ನು ರೆಸಾರ್ಟ್ ಎಂದು ಆರಂಭದಲ್ಲಿ ಹೇಳಲಾಗಿತ್ತು. ಆದರೆ, ವಾಸ್ತವವಾಗಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಗೆದ್ದಿದ್ದರೆ ಅವರ ವಾಸದ ಉದ್ದೇಶಕ್ಕಾಗಿ ಇದನ್ನು ನಿರ್ಮಿಸಲಾಗಿದೆ. ಹಾಗಾಗಿ, ಈ ‘ಅರಮನೆ’ ಈಗ ವಿವಾದದ ಮೂಲವಾಗಿದೆ.

ಲಕ್ಷಾಂತರ ರೂಪಾಯಿ ಮೌಲ್ಯದ ಬಾತ್‌ಟಬ್, ಕಮೋಡ್‌ಗಳನ್ನು ಅಳವಡಿಸಿರುವ ಐಷಾರಾಮಿ ಸ್ನಾನಗೃಹಗಳನ್ನು ಹೊಂದಿರುವ ಈ ವಿಲಾಸಿ ಬಂಗಲೆಯನ್ನು ತುಂಬಾ ರಹಸ್ಯವಾಗಿ ₹500 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

‘ಜಗನ್ ಅವರ ಶೋಕಿಗಾಗಿ ಹಿಂದಿನ ಸರ್ಕಾರ ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ’ ಎಂದು ಆಡಳಿತಾರೂಢ ಟಿಡಿಪಿ ಹೇಳಿದೆ.

**ಮುಖ್ಯಾಂಶಗಳು**

- **9.8 ಎಕರೆ ಪ್ರದೇಶದಲ್ಲಿ ನಿರ್ಮಾಣ**
- **₹500 ಕೋಟಿಗೂ ಹೆಚ್ಚು ವೆಚ್ಚ**
- **ಟಿಡಿಪಿ–ವೈಎಸ್‌ಆರ್‌ಸಿಪಿ ನಡುವೆ ವಾಕ್ಸಮರ**

‘ಅದು ಸರ್ಕಾರದ ಆಸ್ತಿಯಾಗಿದ್ದು, ಹಾಲಿ ಸರ್ಕಾರ ಸಾರ್ವಜನಿಕ ಉದ್ದೇಶಗಳಿಗೆ ಈ ಕಟ್ಟಡವನ್ನು ಬಳಸಬಹುದು’ ಎಂದು ವೈಎಸ್‌ಆರ್‌ಸಿಪಿ ಪ್ರತಿಕ್ರಿಯಿಸಿದೆ.

ಆಂಧ್ರದ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 2021ರಲ್ಲಿ ರುಷಿಕೊಂಡದ ತುದಿಯಲ್ಲಿದ್ದ ಹರಿತಾ ರೆಸಾರ್ಟ್ ಅನ್ನು ನೆಲಸಮಗೊಳಿಸಿ ಹೊಸ ರೆಸಾರ್ಟ್ ನಿರ್ಮಾಣ ಕಾಮಗಾರಿಯನ್ನು ಆರಂಭಿಸಿತ್ತು. ಈ ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಅಂದಿನ ವೈಎಸ್‌ಆರ್‌ಸಿಪಿ ಸರ್ಕಾರದ ವಿರುದ್ಧ ನಿರಂತರವಾಗಿ ವಾಗ್ದಾಳಿ, ಹೋರಾಟ ನಡೆಸುತ್ತಾ ಬಂದಿದ್ದವು.

ಪರಿಸರ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಆರೋಪಿಸಿದ್ದ ಟಿಡಿಪಿ, ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ನುಗ್ಗಿ ಪ್ರತಿಭಟನೆ ನಡೆಸಲು ಹಲವು ಬಾರಿ ಯತ್ನಿಸಿತ್ತು.

ಹಾಲಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ವಿರೋಧ ಪಕ್ಷದಲ್ಲಿದ್ದಾಗ ರುಷಿಕೊಂಡಕ್ಕೆ ಭೇಟಿ ನೀಡಲು ಯತ್ನಿಸಿದ್ದರು. ಇದನ್ನು ತಡೆಯಲು ಅಂದಿನ ಸರ್ಕಾರ ಭದ್ರತಾ ಪಡೆಗಳನ್ನು ಬಳಸಿತ್ತು.

ಬೆಟ್ಟದ ಮೇಲಿರುವ 61 ಎಕರೆ ವಿಸ್ತೀರ್ಣದ ಜಾಗದ ಪೈಕಿ 9.8 ಎಕರೆ ಪ್ರದೇಶದಲ್ಲಿ ರೆಸಾರ್ಟ್ ಇದೆ.



ವಿಶಾಖಪಟ್ಟಣದ ರುಷಿಕೊಂಡದಲ್ಲಿ ನಿರ್ಮಿಸಲಾಗಿರುವ ಐಷಾರಾಮಿ ಬಂಗಲೆ

## ಬಂಗಲೆಯಲ್ಲಿ ಏನೇನಿದೆ?

ಪುನರ್‌ನಿರ್ಮಾಣಗೊಂಡ ಬಂಗಲೆಯಲ್ಲಿ ಖಾಸಗಿ ವಿಲಾಸಿ ವಿಲ್ಲಾಗಳು, ಬೀಚ್‌ನತ್ತ ಮುಖ ಮಾಡಿರುವ ವಿಶಾಲ ಕೊಠಡಿಗಳು, ಪ್ರಧಾನ ಕೊಠಡಿಗಳು, ಅತಿಥಿಗಳಿಗೆ ಮೀಸಲಾಗಿರುವ ವಿಶಾಲ ಕೋಣೆಗಳು, ಭೋಜನ ಸಭಾಂಗಣ, ಕೆಫೆಟೇರಿಯಾ, ಜಿಮ್ನಾಶಿಯಂ ಸೌಲಭ್ಯಗಳು, ಈಜುಕೊಳಗಳು, ಬಾಂಕ್ವೆಟ್ ಹಾಲ್, ಭದ್ರತಾ ವ್ಯವಸ್ಥೆಗೆ ಸ್ಥಳಾವಕಾಶ, ಕಚೇರಿಗಳಿಗೆ ವ್ಯವಸ್ಥೆ, ಅಡುಗೆ ಕೋಣೆ ಸೇರಿದಂತೆ ಹಲವು ಸೌಲಭ್ಯಗಳಿವೆ.

# ಅಲ್ಪ ಲೋಪವನ್ನೂ ಸಹಿಸಲ್ಲ: ‘ಸುಪ್ರೀಂ’

ಒಂದನೇ ಪುಟದಿಂದ...

**ವಂಚಕ ವೈದ್ಯನಾದರೆ ಹಾನಿ:** ವಿದ್ಯಾರ್ಥಿಗಳು ಈ ಪರೀಕ್ಷಾ ಸಿದ್ಧತೆಗೆ ಬಹಳ ಪರಿಶ್ರಮ ಹಾಕಿರುತ್ತಾರೆ ಎಂಬುದು ತಿಳಿದಿದೆ. ಆದರೆ, ಪರೀಕ್ಷೆಯಲ್ಲಿ ವಂಚನೆ ಮಾಡಿದ ವ್ಯಕ್ತಿ ವೈದ್ಯನಾದರೆ ಸಮಾಜಕ್ಕೆ ಹೆಚ್ಚಿನ ಹಾನಿ ಆಗುತ್ತದೆ. ಆದ್ದರಿಂದ ಈ ದಿಸೆಯಲ್ಲಿ ಸಮಯೋಚಿತ ಕ್ರಮ ತೆಗೆದುಕೊಳ್ಳುವುದನ್ನು ಬಯಸುತ್ತೇವೆ ಎಂದು ಪೀಠ ಹೇಳಿತು.

‘ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತೇವೆ’ ಎಂದು ಕೇಂದ್ರದ ಪರ ಹಾಜರಾದ ವಕೀಲ ಕನು ಅಗರ್‌ವಾಲ್ ಹೇಳಿದರು.

ಎಲ್ಲಿ ತಪ್ಪಾಗಿದೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟವೇನಲ್ಲ ಎಂದ ಪೀಠವು, ‘ಎಷ್ಟು ಮೊಬೈಲ್ ಫೋನ್‌ಗಳನ್ನು ಬಳಸಲಾಗಿದೆ...’ ಎಂದು ಪ್ರಶ್ನಿಸಿತು.

**ಕೇಂದ್ರ, ಎನ್‌ಟಿಎಗೆ ನೋಟಿಸ್:** ಮೇ 5ರಂದು ನಡೆದ ಪರೀಕ್ಷೆ ಮತ್ತು ಜೂನ್ 4ರಂದು ಪ್ರಕಟಿಸಿದ ಫಲಿತಾಂಶಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಹೊಸ ಅರ್ಜಿಗಳಿಗೆ 15 ದಿನಗಳಲ್ಲಿ ಪ್ರತಿಕ್ರಿಯಿಸುವಂತೆ ಪೀಠವು ಕೇಂದ್ರ ಮತ್ತು ಎನ್‌ಟಿಎಗೆ ನೋಟಿಸ್ ಜಾರಿ ಮಾಡಿದೆ. ಈ ಕುರಿತ ಅರ್ಜಿಗಳನ್ನು ಇತರ ಅರ್ಜಿಗಳ ಜತೆ ಜುಲೈ 8ರಂದು ವಿಚಾರಣೆ ನಡೆಸುವುದಾಗಿ ಪೀಠ ತಿಳಿಸಿತು.

**ಪ್ರಕರಣದ ಹಿನ್ನೆಲೆ:** ಮೇ 5ರಂದು ದೇಶದಾದ್ಯಂತ ನಡೆದಿದ್ದ ‘ನೀಟ್–ಯುಜಿ’ ಪರೀಕ್ಷೆಯನ್ನು ಸುಮಾರು 24 ಲಕ್ಷ ಅಭ್ಯರ್ಥಿಗಳು ಬರೆದಿದ್ದರು. ಕೆಲವೆಡೆ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಇತರ ಅಕ್ರಮಗಳ ಕುರಿತು ಆರೋಪಗಳು ವ್ಯಕ್ತವಾದವು. ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಸಮಯ ನಷ್ಟ ಅನುಭವಿಸಿದ 1,563 ಅಭ್ಯರ್ಥಿಗಳಿಗೆ ಕೃಪಾಂಕಗಳನ್ನು ನೀಡಲಾಯಿತು. ಇದು ಇತರ ಆಕಾಂಕ್ಷಿಗಳ ಅಸಮಾಧಾನಕ್ಕೆ ಕಾರಣವಾಗಿ, ದೇಶದ ವಿವಿಧೆಡೆ ಪ್ರತಿಭಟನೆಗಳು ಜರುಗಿದವು.

ದೇಶದಾದ್ಯಂತ 67 ಅಭ್ಯರ್ಥಿಗಳು 720ಕ್ಕೆ 720 ಅಂಕಗಳನ್ನು ಪಡೆದು ಅಗ್ರ ಶ್ರೇಯಾಂಕವನ್ನು ಹಂಚಿಕೊಂಡಿದ್ದರು. ಇದರಲ್ಲಿ ಹರಿಯಾಣದ ಫರೀದಾಬಾದ್‌ನ ಒಂದೇ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿತು. ಪರೀಕ್ಷಾ ಸಮಯದಲ್ಲಿ ಆದ ನಷ್ಟವನ್ನು ಸರಿದೂಗಿಸಲು ನೀಡಲಾದ ಕೃಪಾಂಕಗಳಿಂದ ಈ ಆರು ಅಭ್ಯರ್ಥಿಗಳಿಗೆ ಗರಿಷ್ಠ ಅಂಕಗಳು ದೊರೆತಿದ್ದವು ಎಂದು ಎನ್‌ಟಿಎ ಹೇಳಿತ್ತು. ಈ ಕುರಿತ ಅಕ್ರಮಗಳನ್ನು ಪ್ರಶ್ನಿಸಿ ಕೆಲ ಅಭ್ಯರ್ಥಿಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಸಿದ್ದು, ವಿಚಾರಣೆ ನಡೆಯುತ್ತಿದೆ.

ಇದರ ಬೆನ್ನಲ್ಲೇ 1,563 ಅಭ್ಯರ್ಥಿಗಳಿಗೆ ನೀಡಲಾಗಿದ್ದ ಕೃಪಾಂಕವನ್ನು ಹಿಂತೆಗೆದುಕೊಂಡು, ಆ ಅಭ್ಯರ್ಥಿಗಳಿಗೆ ಇದೇ 23ರಂದು ಮರು ಪರೀಕ್ಷೆ ನಡೆಸಿ, ಇದೇ 30ರಂದು ಫಲಿತಾಂಶ ಪ್ರಕಟಿಸುವುದಾಗಿ ಎನ್‌ಟಿಎ ಜೂನ್ 13ರಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿತು. ಇದಕ್ಕೆ ನ್ಯಾಯಾಲಯ ಅನುಮೋದನೆ ನೀಡಿತು. ಅಲ್ಲದೆ ಜುಲೈ 6ರಿಂದ ಪ್ರಾರಂಭವಾಗಲಿರುವ ಕೌನ್ಸೆಲಿಂಗ್ ಪ್ರಕ್ರಿಯೆ ಸ್ಥಗಿತಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು.

## ಎಎಪಿ ಪ್ರತಿಭಟನೆ

ನೀಟ್ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ಖಂಡಿಸಿ ಆಮ್ ಆದ್ಮಿ ಪಕ್ಷವು (ಎಎಪಿ) ಮಂಗಳವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿತು.

ನೀಟ್ ಪರೀಕ್ಷೆ ಅಕ್ರಮ ಆರೋಪಗಳ ಕುರಿತು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ಆಗಬೇಕು ಎಂದು ಪಕ್ಷದ ಮುಖಂಡ, ದೆಹಲಿ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಆಗ್ರಹಿಸಿದರು.

‘ಸುಮಾರು 24 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗಿದ್ದರು. ಅವರು ಪರೀಕ್ಷೆಗಾಗಿ ಪ್ರತಿ ದಿನ 16 ರಿಂದ 18 ಗಂಟೆ ತಯಾರಿ ನಡೆಸಿದ್ದರು. ಆದರೆ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಲಂಚ ನೀಡಿದ್ದಾರೆ ಎಂಬುದನ್ನು ಜನರು ಹಿಂದೆಂದೂ ಕೇಳಿರಲಿಲ್ಲ’ ಎಂದರು. ಪಟ್ನಾದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ನೀಟ್ ಪ್ರಶ್ನೆ ಪತ್ರಿಕೆಯು ಪರೀಕ್ಷೆಗೆ ಒಂದು ದಿನ ಮುಂಚಿತವಾಗಿ ಲಭಿಸಿತ್ತು ಎಂದು ಆರೋಪಿಸಿದರು.

## ‘ನೀಟ್ ಅಗತ್ಯವಿಲ್ಲ’

ಬೆಂಗಳೂರು: ‘ನೀಟ್ ನಡೆಸುವ ಬಗ್ಗೆ ನಮಗೂ ಆಕ್ಷೇಪವಿದೆ. ತಮಿಳುನಾಡಿನ ಮಾದರಿಯಲ್ಲಿ ನೀಟ್ ವಿರೋಧಿಸುವ ಆಲೋಚನೆ ಇದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜ್ಯದಲ್ಲಿ ನಮ್ಮವರೇ ಕಟ್ಟಿ ಬೆಳೆಸಿದ ವೈದ್ಯಕೀಯ ಕಾಲೇಜುಗಳಲ್ಲಿ ನಮ್ಮವರಿಗೇ ಸೀಟು ಸಿಗುತ್ತಿಲ್ಲ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪರೀಕ್ಷೆಯಲ್ಲಿ ಅನ್ಯಾಯಕ್ಕೆ ಒಳಗಾದ ವಿದ್ಯಾರ್ಥಿಗಳ ಜತೆ ನಾವಿದ್ದೇವೆ. ಕೇವಲ 1,563 ಅಭ್ಯರ್ಥಿಗಳಿಗಲ್ಲದೇ ಎಲ್ಲ ಅಭ್ಯರ್ಥಿಗಳಿಗೂ ಮರುಪರೀಕ್ಷೆ ಬರೆಯಲು ಅವಕಾಶ ನೀಡಬೇಕು’ ಎಂದು ಅವರು ಆಗ್ರಹಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



## ಸುಭಾಷಿತ

ನಿಮ್ಮಿಂದ ಮಾಡಲು ಸಾಧ್ಯ ಎಂದು ನೀವು ನಂಬಿದ್ದೇ ಆದರೆ, ಆ ಕಾರ್ಯದಲ್ಲಿ ನೀವು ಅರ್ಧ ದಾರಿ ಸವೆಸಿದಂತೆಯೇ ಸರಿ.

–ಥಿಯೊಡೊರ್ ರೂಸ್‌ವೆಲ್ಟ್

# ಕಾಂಚನ್‌ಜುಂಗಾ ರೈಲು ಅಪಘಾತ ಪ್ರಯಾಣಿಕರ ಸುರಕ್ಷತೆ ಆದ್ಯತೆಯಾಗಲಿ

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಸೋಮವಾರ ನಡೆದ ರೈಲು ಅಪಘಾತದಲ್ಲಿ ಹತ್ತು ಮಂದಿ ಮೃತಪಟ್ಟಿದ್ದಾರೆ, ಹಲವರಿಗೆ ಗಾಯಗಳಾಗಿವೆ. ರೈಲ್ವೆ ಇಲಾಖೆಯು ಪ್ರಯಾಣಿಕರ ಸುರಕ್ಷತೆಯ ವಿಚಾರವಾಗಿ ಹೆಚ್ಚಿನ ಆಸ್ಥೆ ತೋರುತ್ತಿಲ್ಲ ಎಂಬುದಕ್ಕೆ ಇದು ಇನ್ನೊಂದು ನಿದರ್ಶನ. ನಿಂತಿದ್ದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ಪ್ರಯಾಣಿಕ ರೈಲಿಗೆ ಸರಕು ಸಾಗಣೆ ರೈಲೊಂದು ಡಿಕ್ಕಿ ಹೊಡೆದಾಗ ಈ ದುರ್ಘಟನೆ ಸಂಭವಿಸಿದೆ. ಈ ಅಪಘಾತಕ್ಕೆ ಮನುಷ್ಯನ ಲೋಪವೇ ಕಾರಣ ಎಂದು ಭಾವಿಸಲಾಗಿದೆ. ಆದರೆ ಇದು ತನಿಖೆಯಿಂದ ಇನ್ನಷ್ಟೇ ಖಚಿತವಾಗಬೇಕಿದೆ. ಒಡಿಶಾದ ಬಾಲೇಶ್ವರದಲ್ಲಿ ಕಳೆದ ವರ್ಷ ನಡೆದ ರೈಲು ಅಪಘಾತದಲ್ಲಿ ಕನಿಷ್ಠ 290 ಮಂದಿ ಪ್ರಾಣ ಕಳೆದುಕೊಂಡಿದ್ದರು. ಇದಾದ ನಂತರ ಚೆನ್ನೈ–ಹೌರಾ ರೈಲು ಮಾರ್ಗದಲ್ಲಿ ನಡೆದ ಅಪಘಾತವೊಂದರಲ್ಲಿ 15 ಮಂದಿ ಸತ್ತಿದ್ದರು. ಈ ವರ್ಷದ ಫೆಬ್ರುವರಿಯಲ್ಲಿ ಸರಕು ಸಾಗಣೆ ರೈಲೊಂದು ಚಾಲಕನೇ ಇಲ್ಲದೆ ಜಮ್ಮುವಿನಿಂದ ಪಂಜಾಬ್ ಕಡೆಗೆ ಅಂದಾಜು 70 ಕಿ.ಮೀ. ಚಲಿಸಿತ್ತು! ದೇಶದ ಇತರ ಹಲವೆಡೆ ರೈಲು ಅಪಘಾತಗಳು ನಡೆದಿವೆ, ಅಲ್ಲೆಲ್ಲ ಮೃತರ ಸಂಖ್ಯೆ ಕಡಿಮೆ ಇದ್ದಿರಬಹುದು. ರೈಲು ಅಪಘಾತಗಳು ಪ್ರಾಣಹರಣಕ್ಕೆ ಕಾರಣವಾಗುತ್ತವೆ, ರೈಲ್ವೆ ಇಲಾಖೆಗೆ ನಷ್ಟ ಉಂಟುಮಾಡುತ್ತವೆ ಹಾಗೂ ರೈಲ್ವೆ ಸೇವೆಗಳಿಗೆ ಅಡ್ಡಿಪಡಿಸುತ್ತವೆ. ಲಕ್ಷಾಂತರ ಮಂದಿಯ ಪ್ರಯಾಣಕ್ಕೆ ಹಾಗೂ ಭಾರಿ ಪ್ರಮಾಣದ ಸರಕು ಸಾಗಣೆಗೆ ನೆರವು ಒದಗಿಸುತ್ತ, ದೇಶದಲ್ಲಿ ಸಾರಿಗೆ ಸೇವೆ ಒದಗಿಸುವ ಅತಿದೊಡ್ಡ ವ್ಯವಸ್ಥೆಯಾಗಿರುವ ರೈಲ್ವೆಯ ಪಾಲಿಗೆ ಇವು ಕೆಟ್ಟ ಹೆಸರು ತರುತ್ತವೆ.



ರೈಲಿನಲ್ಲಿ ಪ್ರಯಾಣಿಸುವವರ ಜೀವಕ್ಕೆ ಯಾವುದೇ ಅಪಾಯ ಇರುವುದಿಲ್ಲ ಎಂಬುದನ್ನು ಖಾತರಿಪಡಿಸುವ ಕೆಲಸ ಆಗಬೇಕು

ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್‌ನ ದುರಂತಕ್ಕೆ ಸಂಬಂಧಿಸಿದಂತೆ, ರೈಲು ಮಾರ್ಗದ ಒಂದು ಕಡೆ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ, ಸರಕು ಸಾಗಣೆ ರೈಲಿನ ಚಾಲಕ ಸಿಗ್ನಲ್‌ಗಳನ್ನು ಅಲಕ್ಷಿಸಿದ್ದ ಎಂದು ಕೆಲವು ವರದಿಗಳು ಹೇಳಿವೆ. ಬಾಲೇಶ್ವರದ ದುರಂತ ನಡೆದ ನಂತರದಲ್ಲಿ, ದುರ್ಘಟನೆಗಳನ್ನು ತಡೆಯಲು ಅಥವಾ ಅವುಗಳ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೆ ತರಲು ಸುರಕ್ಷಾ ಕ್ರಮಗಳನ್ನು ಜಾರಿಗೆ ತರಲಾಗುತ್ತದೆ ಎಂದು ಘೋಷಿಸಲಾಗಿತ್ತು. ರೈಲುಗಳು ಪರಸ್ಪರ ಡಿಕ್ಕಿಯಾಗುವುದನ್ನು ತಡೆಯುವ ‘ಕವಚ್’ ವ್ಯವಸ್ಥೆಯನ್ನು ಕೆಲವು ವರ್ಷಗಳ ಹಿಂದೆ ಅನಾವರಣಗೊಳಿಸಲಾಗಿದೆ. ಆದರೆ ಈ ವ್ಯವಸ್ಥೆಯನ್ನು ರೈಲ್ವೆ ಜಾಲದ ಆದ್ಯಂತ ಇನ್ನೂ ಅಳವಡಿಸಲಾಗಿಲ್ಲ. ಕವಚ್ ವ್ಯವಸ್ಥೆಯ ಅಳವಡಿಕೆ ಕಾರ್ಯವು ಈಗಿನ ವೇಗದಲ್ಲೇ ನಡೆದರೆ, ಅಳವಡಿಕೆ ಪೂರ್ಣಗೊಳ್ಳಲು ಇನ್ನೂ ಹಲವು ವರ್ಷಗಳು ಬೇಕಾಗುತ್ತವೆ. ರೈಲು ಅಪಘಾತಕ್ಕೆ ಹಲವು ಅಂಶಗಳು ಕಾರಣವಾಗುತ್ತಿವೆ. ಮೂಲಸೌಕರ್ಯದಲ್ಲಿ ಲೋಪಗಳು ಇರುವುದು ಅಥವಾ ಅವು ಸಮರ್ಪಕವಾಗಿ ಇಲ್ಲದಿರುವುದು, ತಾಂತ್ರಿಕವಾಗಿ ಪರಿಣತಿ ಇಲ್ಲದೇ ಇರುವುದು, ಕ್ರಾಸಿಂಗ್‌ಗಳಲ್ಲಿನ ಸಮಸ್ಯೆಗಳು ಇಂತಹ ಕಾರಣಗಳ ಪೈಕಿ ಪ್ರಮುಖವಾದವು. ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸುವುದು, ಸ್ವತಂತ್ರವಾದ ಸುರಕ್ಷಾ ಆಯೋಗವನ್ನು ರಚಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಹಲವು ಸಮಿತಿಗಳ ಶಿಫಾರಸುಗಳಲ್ಲಿ ಹೇಳಲಾಗಿದೆ. ಆದರೆ ಆ ಶಿಫಾರಸುಗಳ ಪೈಕಿ ಹಲವನ್ನು ಇನ್ನೂ ಅನುಷ್ಠಾನಕ್ಕೆ ತಂದಿಲ್ಲ.

ಹೆಚ್ಚಿನ ವೇಗದಲ್ಲಿ ಸಾಗುವ ವಂದೇ ಭಾರತ್ ಹಾಗೂ ನಮೋ ಭಾರತ್ ರೈಲುಗಳ ಸಂಚಾರಕ್ಕೆ ಕೇಂದ್ರ ಸರ್ಕಾರವು ಈಚಿನ ವರ್ಷಗಳಲ್ಲಿ ಹೆಚ್ಚು ಆದ್ಯತೆ ನೀಡುತ್ತಿದೆ. ಬುಲೆಟ್ ರೈಲುಗಳ ಕಡೆಗೂ ಗಮನಹರಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನಿನ ಪ್ರಧಾನಿ ಫುಮಿಯೊ ಕಿಷಿದಾ ಅವರು, ಭಾರತದಲ್ಲಿ ಬುಲೆಟ್ ರೈಲು ಯೋಜನೆಗೆ ವೇಗ ನೀಡುವ ತೀರ್ಮಾನ ಕೈಗೊಂಡಿದ್ದಾರೆ. ಇವೆಲ್ಲ ಬಹಳ ಮಹತ್ವಾಕಾಂಕ್ಷೆಯ ಯೋಜನೆಗಳು. ಇವು ರೈಲ್ವೆ ಕುರಿತ ಚಿತ್ರಣವನ್ನು ಬದಲಾಯಿಸುವಂಥವು. ಆದರೆ ಎಲ್ಲ ರೈಲುಗಳಲ್ಲಿ ಇರುವ ಸುರಕ್ಷಾ ಮಾನದಂಡಗಳನ್ನು ಹೆಚ್ಚಿಸುವುದು ಬಹಳ ಮುಖ್ಯವಾಗಿ ಆಗಬೇಕಾದ ಕೆಲಸ. ರೈಲಿನಲ್ಲಿ ಪ್ರಯಾಣಿಸುವವರ ಜೀವಕ್ಕೆ ಯಾವುದೇ ಅಪಾಯ ಇರುವುದಿಲ್ಲ ಎಂಬುದನ್ನು ಖಾತರಿಪಡಿಸುವ ಕೆಲಸ ಆಗಬೇಕು. 2017ರ ನಂತರದಲ್ಲಿ ರೈಲ್ವೆಯ ಮೂಲಭೂತ ನಿರ್ವಹಣಾ ಕೆಲಸಗಳಿಗೆ ಮಾಡುವ ವೆಚ್ಚ ಕಡಿಮೆ ಆಗಿದೆ ಎಂದು ಮಹಾಲೇಖಪಾಲರ ವರದಿಯೊಂದು ಹೇಳಿದೆ. ಪ್ರಯಾಣಿಕರಿಗೆ ಸುರಕ್ಷಿತವಾದ ಪ್ರಯಾಣದ ಸೇವೆ ಒದಗಿಸುವುದು ರೈಲ್ವೆಯ ಅತ್ಯಂತ ಪ್ರಮುಖ ಆದ್ಯತೆ ಆಗಬೇಕು.

## ದಿನದ ಟ್ವೀಟ್

### ಭ್ರಷ್ಟಾಚಾರದ ಪರಮಾವಧಿ



ಬಿಹಾರದಲ್ಲಿ ಮತ್ತೊಂದು ಸೇತುವೆ ಉದ್ಘಾಟನೆಗೆ ಮುನ್ನವೇ ಕುಸಿದಿದೆ... ಬಿಹಾರ ಸರ್ಕಾರ ಮತ್ತು ಅಲ್ಲಿನ ಎಂಜಿನಿಯರುಗಳು ಮಾಡುವ ಉತ್ತಮವಾದ ಕೆಲಸವೆಂದರೆ, ಉದ್ಘಾಟನೆಯ ನಂತರವಲ್ಲದೆ, ಅದಕ್ಕೆ ಮುನ್ನವೇ ಕುಸಿಯುವ ಸೇತುವೆಗಳನ್ನು ನಿರ್ಮಿಸುವುದು. ಹೀಗೆ ಹಿಂದಿನ ಐದು ವರ್ಷಗಳಿಂದ ಎಷ್ಟೊಂದು ಜೀವಗಳನ್ನು ಅವರು ಉಳಿಸಿರಬಹುದು ಯೋಚಿಸಿ ನೋಡಿ. #RealHeroes

ವೈಭವ್ ಸಿಂಗ್, ಪತ್ರಕರ್ತ

## ಕಿಡಿನುಡಿ

ರಾಕ್ಷಸನೊಬ್ಬ ರೆಂಚ್‌ನಿಂದ 20 ವರ್ಷದ ಹುಡುಗಿಯ ತಲೆಗೆ ಹೊಡೆದು ಬರ್ಬರವಾಗಿ ಕೊಂದ. ಅವನೊಬ್ಬ ಭಗ್ನಪ್ರೇಮಿ ಎಂದಿದ್ದಾರೆ ಪೊಲೀಸರು. ಮುಂಬೈನ ವಸೈ ರಸ್ತೆಯಲ್ಲಿ ಡಜನ್‌ಗಟ್ಟಲೆ ಜನರಿದ್ದರೂ ಅದು ಚಲನಚಿತ್ರದ ಚಿತ್ರೀಕರಣ ಎಂಬಂತೆ ನೋಡುತ್ತಿದ್ದರೇ ವಿನಾ ತಡೆಯಲು ಪ್ರಯತ್ನಿಸಲಿಲ್ಲ. ಅವನ ಬಳಿ ಬಂದೂಕಾಗಲೀ ಚಾಕುವಾಗಲೀ ಇರಲಿಲ್ಲ. ಇದ್ದದ್ದು ದೊಡ್ಡ ಸ್ಪ್ಯಾನರ್ ಮಾತ್ರ. ಕನಿಷ್ಠಪಕ್ಷ ಇಬ್ಬರು ತಡೆದಿದ್ದರೂ ಹುಡುಗಿ ಬದುಕಿರುತ್ತಿದ್ದಳು. ನಮ್ಮ ಸಮಾಜಕ್ಕೆ ಏನಾಗಿದೆ?

ಸ್ವಾತಿ ಬೆಲ್ಲಂ

## 25 ವರ್ಷಗಳ ಹಿಂದೆ

ಶನಿವಾರ, 19-6-1999

**• ಬಟಾಲಿಕ್: ಅತಿಕ್ರಮಣಕಾರರ ನೆಲೆ ಮೇಲೆ ಯಶಸ್ವಿ ವಾಯುದಾಳಿ**

**ಶ್ರೀನಗರ, ಜೂನ್ 18 (ಯುಎನ್‌ಐ, ಪಿಟಿಐ)**– ಬಟಾಲಿಕ್ ಉಪಪ್ರಾಂತ್ಯದಲ್ಲಿ ಪಾಕಿಸ್ತಾನ ಬೆಂಬಲಿತ ಅತಿಕ್ರಮಣಕಾರರ ಪ್ರಮುಖ ಶಿಬಿರದ ಮೇಲೆ ಭಾರತೀಯ ವಾಯುಪಡೆಯು ಇಂದು ಯಶಸ್ವಿಯಾಗಿ ದಾಳಿ ನಡೆಸಿತು. ಟೈಗರ್ ಹಿಲ್ ಪ್ರದೇಶದಲ್ಲಿ ಭಾರತೀಯ ಸೇನಾಪಡೆ ಮತ್ತು ಅತಿಕ್ರಮಣಕಾರರ ನಡುವೆ ಮುಖಾಮುಖಿ ಹೋರಾಟ ಮುಂದುವರಿದಿದೆ.

ಪಾಕಿಸ್ತಾನ ಅತಿಕ್ರಮಿಸಿಕೊಂಡಿರುವ ಕಾಶ್ಮೀರದ ಸ್ಕರ್ದು ಪ್ರಾಂತ್ಯದಲ್ಲಿ ಇರುವ ಶಿಬಿರದಿಂದ ಕಾರ್ಗಿಲ್–ಡ್ರಾಸ್ ಮತ್ತು ಬಟಾಲಿಕ್ ವಲಯಗಳಲ್ಲಿ ಅತಿಕ್ರಮಣಕಾರರಿಗೆ ನೆರವು ನೀಡುತ್ತಿದ್ದ ಪಾಕಿಸ್ತಾನದ ಶಿಬಿರದ ಮೇಲೆ ಭಾರತದ ಸೇನಾಪಡೆ ನಡೆಸಿದ ದಾಳಿಯಲ್ಲಿ ಮೇಜರ್ ಒಬ್ಬರು ಸೇರಿದಂತೆ ಐವರು ಯೋಧರು ಹತರಾಗಿದ್ದಾರೆ.

**• ‘ಕಾಂಗ್ರೆಸ್ ಅಧಿಕಾರಕ್ಕೆ ತರಲು ರಾಜ್ಯದಲ್ಲಿ ತವಕ’**

**ಬೆಂಗಳೂರು, ಜೂನ್ 18** – ಕೇಂದ್ರದ ಬಿಜೆಪಿ ಹಾಗೂ ರಾಜ್ಯದ ಜನತಾದಳದ ಸರ್ಕಾರಗಳ ಆಡಳಿತ ವೈಖರಿಗಳಿಂದ ಬೇಸತ್ತಿರುವ ರಾಜ್ಯದ ಜನತೆ, ಮುಂದಿನ ಚುನಾವಣೆಗಳಲ್ಲಿ ಅವುಗಳನ್ನು ಕಿತ್ತೊಗೆದು ನಮ್ಮ ಪಕ್ಷಕ್ಕೆ ಅಧಿಕಾರ ಕೊಡಲು ತೀರ್ಮಾನಿಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಗುಲಾಂ ನಬಿ ಆಜಾದ್ ಹೇಳಿದರು.

ನಮ್ಮ ಪಕ್ಷದ ಎಲ್ಲ ಮುಖಂಡರು ರಾಜ್ಯದ 17 ಜಿಲ್ಲೆಗಳಲ್ಲಿ ನಡೆಸಿದ ‘ಪಾಂಚಜನ್ಯ’ ಪ್ರವಾಸಕ್ಕೆ, ನಾನು ಕಂಡರಿಯದ ಅಭೂತಪೂರ್ವ ಸ್ವಾಗತವನ್ನು ಜನತೆ ನೀಡಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮಿತಿ ಯಲಹಂಕದಲ್ಲಿ ಏರ್ಪಡಿಸಿದ್ದ ಪಕ್ಷದ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಅವರು ಹೇಳಿದರು.

## 50 ವರ್ಷಗಳ ಹಿಂದೆ

ಬುಧವಾರ, 19-6-1974

**• ವಿದೇಶಿ ಒತ್ತಡದ ವಿರುದ್ಧ ಅಲಿಪ್ತ ರಾಷ್ಟ್ರಗಳ ಮಧ್ಯೆ ಸಹಕಾರ ಅಗತ್ಯ**

**ಢಾಕಾ, ಜೂನ್ 18**– ಅಲಿಪ್ತ ರಾಷ್ಟ್ರಗಳ ಪರಸ್ಪರ ನಿಕಟ ಸಹಕಾರವು ವಿದೇಶಿ ಒತ್ತಡಗಳನ್ನು ಮೆಟ್ಟಿ ನಿಲ್ಲುವುದಕ್ಕೆ ಸಹಾಯವಾಗುವುದಲ್ಲದೆ ತಮ್ಮ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಸಂಪೂರ್ಣ ಹತೋಟಿ ಇರಿಸಿಕೊಳ್ಳುವುದಕ್ಕೂ ನೆರವಾಗುವುದೆಂದು ಭಾರತದ ರಾಷ್ಟ್ರಪತಿ ವಿ.ವಿ. ಗಿರಿ ಘೋಷಿಸಿದರು.

ಬಾಂಗ್ಲಾದೇಶದ ವಿಶೇಷ ಪಾರ್ಲಿಮೆಂಟ್ ಅಧಿವೇಶನವನ್ನು ಉದ್ದೇಶಿಸಿ, ಆಲ್ಜೀರಿಯರ್ಸ್ ಮತ್ತು ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿ ವಿಶೇಷ ಅಧಿವೇಶನ ನೀಡಿದ ಮಾರ್ಗದರ್ಶನದ ಅನುಸಾರ ಅಲಿಪ್ತ ರಾಷ್ಟ್ರಗಳಲ್ಲಿ ಪ್ರಗತಿ ಸಾಧನೆಯ ಔಚಿತ್ಯವನ್ನು ಎತ್ತಿ ಹೇಳಿದರು.

**• ಭಾವೀ ಗುರುಗಳ ‘ದಿವ್ಯ’ ಜ್ಞಾನ**

**ಶಿವಮೊಗ್ಗ, ಜೂನ್ 18**– ಉಪಾಧ್ಯಾಯರ ಸ್ಥಾನಕ್ಕೆ ನೇಮಿಸಲು ಎಸ್.ಎಸ್.ಎಲ್.ಸಿ. ಪಾಸಾದ ಅಭ್ಯರ್ಥಿಗಳನ್ನು ಇತ್ತೀಚೆಗೆ ಇಲ್ಲಿ ಸಂದರ್ಶನಕ್ಕೆ ಕರೆಯಲಾಗಿತ್ತು.

ಸಂದರ್ಶನದ ಸಮಯದಲ್ಲಿ ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಹಾಕಲಾದ ಪ್ರಶ್ನೆಗಳಿಗೆ ಕೆಲವು ಮಂದಿ ಅಭ್ಯರ್ಥಿಗಳು ನೀಡಿದ ಉತ್ತರ ದಿಗ್ಭ್ರಮೆಯುಂಟುಮಾಡಿತು.

ಡಾ. ಎಸ್. ರಾಧಾಕೃಷ್ಣನ್ ಅವರು ಮೈಸೂರಿನ ದಿವಾನರಾಗಿದ್ದರು ಎಂದು ಒಬ್ಬರು ಹೇಳಿದರೆ, ಇನ್ನೊಬ್ಬರು ‘ಡಾ. ರಾಧಾಕೃಷ್ಣನ್ ಅವರು ರಾಜ್ಯದ ಆಹಾರ ಮಂತ್ರಿಗಳು ಸಹ ಆಗಿದ್ದರು’ ಎಂದು ಹೇಳಿದರು.

ತಿದ್ದುಪಡಿಯಲ್ಲಿನ ಲೋಪಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ

# ಅರಣ್ಯ ಸಂರಕ್ಷಣೆಗೆ ತಿದ್ದುಪಡಿ ಕಂಟಕ



ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ಕೃಷಿ ವಿಸ್ತರಣೆ, ನೀರಾವರಿ, ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆ, ನಗರೀಕರಣ, ರೈಲು-ರಸ್ತೆಯಂತಹ ಮೂಲ ಸೌಕರ್ಯದ ಯೋಜನೆಯಂತಹವುಗಳಿಗಾಗಿ ಅರಣ್ಯಗಳು ನಾಶವಾಗುತ್ತಿರುವುದು ಹೊಸ ವಿಷಯವೇನಲ್ಲ. ಇದೀಗ ಈ ಪಟ್ಟಿಗೆ ವಾಯುಗುಣ ಬದಲಾವಣೆಯೂ ಸೇರಿದೆ.

ಅಭಿವೃದ್ಧಿ ಯೋಜನೆಗಳ ಸಲುವಾಗಿ ಸ್ವಲ್ಪಮಟ್ಟಿಗಿನ ಅರಣ್ಯ ನಾಶ ಅನಿವಾರ್ಯ. ಆದರೆ ದೂರದೃಷ್ಟಿ ರಹಿತವಾದ, ಅವೈಜ್ಞಾನಿಕವಾದ, ಪರಿಸರವನ್ನು ಹಾಳುಗೆಡವಿ, ಸಂಕಷ್ಟಗಳ ಸರಮಾಲೆಯನ್ನೇ ತರುವ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಲು ಪ್ರಯತ್ನಿಸಿದಾಗ ಪ್ರಜ್ಞಾವಂತ ನಾಗರಿಕರು, ಪರಿಸರ ರಕ್ಷಣೆಯ ಬಗ್ಗೆ ಕಾಳಜಿ ಹೊಂದಿರುವ ಸಂಘಟನೆಗಳಿಂದ ವಿರೋಧ ವ್ಯಕ್ತವಾಗುತ್ತಲೇ ಬಂದಿದೆ. 2023ರ ಅಕ್ಟೋಬರ್‌ನಲ್ಲಿ ದೇಶದ ನಾಗರಿಕಸೇವೆಯನಿವೃತ್ತಅಧಿಕಾರಿಗಳು,ಅರಣ್ಯಸಂರಕ್ಷಣಾ ಸಕ್ತರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿ, 1980ರ ಅರಣ್ಯ ಸಂರಕ್ಷಣಾ ಕಾಯ್ದೆಗೆ ಕೇಂದ್ರ ಸರ್ಕಾರ ತರಾತುರಿಯಲ್ಲಿ ತಂದಿರುವ ತಿದ್ದುಪಡಿಗಳನ್ನು ಪ್ರಶ್ನಿಸಿದ್ದಾರೆ.


1980ರ ಅಕ್ಟೋಬರ್‌ನಲ್ಲಿ ಜಾರಿಗೆ ಬಂದ ಅರಣ್ಯ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶ ದೇಶದ ಅರಣ್ಯಗಳು ಮತ್ತು ಅವುಗಳಲ್ಲಿನ ಜೀವಿವೈವಿಧ್ಯವನ್ನು ಸಂರಕ್ಷಿಸಿ, ಅರಣ್ಯ ಭೂಮಿಯನ್ನು ಅರಣ್ಯೇತರ ವಾಣಿಜ್ಯೋದ್ದೇಶಗಳಿಗೆ ನೀಡುವುದನ್ನು ಅತ್ಯಂತ ಕಟ್ಟುನಿಟ್ಟಾಗಿ ನಿಯಂತ್ರಿಸುವುದು, ನಿಷೇಧಿಸುವುದು. 2021ರ ಮಾರ್ಚ್‌ನಲ್ಲಿ ಈ ಕಾಯ್ದೆಗೆ ಹಲವಾರು ತಿದ್ದುಪಡಿಗಳನ್ನು ತಂದು, ಅರಣ್ಯ ಪ್ರದೇಶದಲ್ಲಿ ತೈಲ ಮತ್ತು ಅನಿಲ ನಿಕ್ಷೇಪಗಳ ಸರ್ವೇಕ್ಷಣೆ, ರೈಲ್ವೆ ಯೋಜನೆಗಳಿಗೆ ಅರಣ್ಯ ಪ್ರದೇಶದ ಬಳಕೆ, ಪರಿಸರ ಪ್ರವಾಸೋದ್ಯಮ, ನಷ್ಟಭರ್ತಿ ಅರಣ್ಯೀಕರಣದಂತಹವುಗಳಿಗೆ ಅವಕಾಶ ಕಲ್ಪಿಸಲಾಯಿತು.

2023ರ ಮಾರ್ಚ್ 29ರಂದು ಕೇಂದ್ರ ಸರ್ಕಾರವು ಅರಣ್ಯ (ಸಂರಕ್ಷಣಾ) ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿತು. ಅರಣ್ಯ ಪ್ರದೇಶದಲ್ಲಿ ನಡೆಸಬಹುದಾದ ಕೆಲಸ, ಕಾಮಗಾರಿಗಳ ಪಟ್ಟಿಯನ್ನು ವಿಸ್ತರಿಸುವುದರೊಡನೆ ಕೆಲವು ನಿರ್ದಿಷ್ಟ ಅರಣ್ಯ ಪ್ರದೇಶಗಳನ್ನು 1980ರ ಅರಣ್ಯ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡುವುದಕ್ಕೆ ಅವಕಾಶ ಕಲ್ಪಿಸುವ ಅಂಶಗಳು ಈ ತಿದ್ದುಪಡಿ ಮಸೂದೆಯಲ್ಲಿದ್ದವು. ಯಾವುದೇ ರೀತಿಯ ಗಂಭೀರ ಚರ್ಚೆಗಳಿಲ್ಲದೆ ಲೋಕಸಭೆ ಮತ್ತು ರಾಜ್ಯಸಭೆ ಈ ಮಸೂದೆಗೆ ಒಪ್ಪಿಗೆ ನೀಡಿದವು. ರಾಷ್ಟ್ರಪತಿಯವರ ಅನುಮೋದನೆಯ ನಂತರ 2023ರ ಡಿಸೆಂಬರ್ 1ರಿಂದ ಈ ತಿದ್ದುಪಡಿಯು ಕಾಯ್ದೆಯಾಗಿ ಜಾರಿಯಾಗಬೇಕಿತ್ತು. ಆದರೆ ಅದಕ್ಕೆ ಮುನ್ನವೇ, ನಾಗರಿಕ ಸೇವೆಯ ನಿವೃತ್ತ ಅಧಿಕಾರಿಗಳು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದರು.

ಈ ತಿದ್ದುಪಡಿಗೆ ಸಂಬಂಧಿಸಿದ ಅತಿಮುಖ್ಯ ಆಕ್ಷೇಪವೆಂದರೆ, ಅದು ‘ಅರಣ್ಯ’ದ ಅರ್ಥ ವಿವರಣೆಯನ್ನೇ ಬದಲಿಸಿ, 1980ರ ಅರಣ್ಯ ಸಂರಕ್ಷಣಾ ಕಾಯ್ದೆಯ ಅನ್ವಯದ ವ್ಯಾಪ್ತಿಯನ್ನು ಮಿತಿಗೊಳಿಸುತ್ತದೆ ಮತ್ತು ಬಹಳಷ್ಟು ಅರಣ್ಯ ಪ್ರದೇಶವನ್ನು ಅರಣ್ಯೇತರ ವಾಣಿಜ್ಯೋದ್ದೇಶ ಯೋಜನೆಗಳಿಗೆ ಬಳಸಲು ಅವಕಾಶ ಕಲ್ಪಿಸಿ, ದೊಡ್ಡ ಪ್ರಮಾಣದಲ್ಲಿ ಅರಣ್ಯ ನಾಶಕ್ಕೆ ಕಾರಣವಾಗುತ್ತದೆ ಎಂಬ ಅಂಶಗಳು. ಈ ತಿದ್ದುಪಡಿ ಅನ್ವಯ 1927ರ ‘ಇಂಡಿಯನ್ ಫಾರೆಸ್ಟ್ ಆ್ಯಕ್ಟ್’ ಅಡಿ ಅಧಿಸೂಚಿಸಲಾಗಿರುವ ಅಥವಾ ಸರ್ಕಾರಿ, ರೆವಿನ್ಯೂ ದಾಖಲೆಗಳಲ್ಲಿ ನಮೂದಿಸಲಾಗಿರುವ ಅರಣ್ಯ ಪ್ರದೇಶಗಳಿಗೆ ಮಾತ್ರ ಕಾನೂನಾತ್ಮಕ ರಕ್ಷಣೆ ದೊರೆಯುತ್ತದೆ. ಆದರೆ ಅರಣ್ಯವೊಂದರ ಎಲ್ಲ ಗುಣ ಲಕ್ಷಣಗಳಿದ್ದರೂ ಯಾವುದೇ ಸರ್ಕಾರಿ, ರೆವಿನ್ಯೂ ದಸ್ತಾವೇಜಿನಲ್ಲಿ ದಾಖಲಾಗಿರದಿದ್ದರೆ ಅಂತಹ ‘ಡೀಮ್ಡ್ ಫಾರೆಸ್ಟ್’ ಅಥವಾ ವರ್ಗೀಕರಿಸದ (ಅನ್‌ಕ್ಲಾಸ್ಡ್) ಅರಣ್ಯಗಳಿಗೆ ಕಾನೂನಾತ್ಮಕ ರಕ್ಷಣೆ ದೊರೆಯುವುದಿಲ್ಲ. ಇಂತಹ ಅರಣ್ಯ ಭೂಮಿಯ ಒಡೆತನ ಸರ್ಕಾರದಲ್ಲಿ, ಸಮುದಾಯ, ಬುಡಕಟ್ಟು ಪಂಗಡ ಅಥವಾ ವ್ಯಕ್ತಿಗಳಲ್ಲಿ ಇರಬಹುದು. ‘ಫಾರೆಸ್ಟ್ ಸರ್ವೆ ಆಫ್ ಇಂಡಿಯಾ’ದ (ಎಫ್‌ಎಸ್‌ಐ) 2021ರ ವರದಿಯಂತೆ, ದೇಶದ ಶೇ 28 ಭಾಗ ಈ ‘ಡೀಮ್ಡ್ ಫಾರೆಸ್ಟ್’ ಗುಂಪಿಗೆ ಸೇರಿದೆ.

ಅಂತರರಾಷ್ಟ್ರೀಯ ಗಡಿಯಿಂದ 100 ಕಿ.ಮೀ. ಒಳಗಿನ ಅರಣ್ಯ ಪ್ರದೇಶವನ್ನು ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣೆಯ ದೃಷ್ಟಿಯಿಂದ ಅಗತ್ಯವೆನಿಸುವ ಯೋಜನೆಗಳಿಗೆ ‘ಫಾರೆಸ್ಟ್ ಅಡ್ವೈಸರಿ ಕಮಿಟಿ’ಯ ಒಪ್ಪಿಗೆ ಇಲ್ಲದೆಯೇ ನೀಡಬಹುದು. ಅರಣ್ಯ ಪ್ರದೇಶದಲ್ಲಿ ಪ್ರಾಣಿ ಸಂಗ್ರಹಾಲಯ, ಸಫಾರಿ, ಪರಿಸರ ಪ್ರವಾಸೋದ್ಯಮಕ್ಕೆ ಅವಕಾಶ ನೀಡಬಹುದು ಎಂಬಂತಹ ಅಂಶಗಳಿವೆ.

ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರ ವಾದವನ್ನು ಆಲಿಸಿದ ಸುಪ್ರೀಂ ಕೋರ್ಟ್, ಈ ವರ್ಷದ ಫೆಬ್ರುವರಿಯಲ್ಲಿ ಮಧ್ಯಂತರ ಆದೇಶವೊಂದನ್ನು ನೀಡಿತು. ಸರ್ಕಾರಿ ಮತ್ತು ರೆವಿನ್ಯೂ ದಸ್ತಾವೇಜುಗಳಲ್ಲಿ ದಾಖಲಾಗಿರುವ ಅರಣ್ಯಗಳು ಮಾತ್ರ ನಿಜವಾದ ಅರಣ್ಯಗಳು ಎಂಬ ಹೊಸ ವ್ಯಾಖ್ಯಾನವನ್ನು ತಿರಸ್ಕರಿಸಿದ ನ್ಯಾಯಾಲಯವು ಅಂತಿಮ ಆದೇಶ ಬರುವವರೆಗೂ, 1996ರಲ್ಲಿ ಗೋದಾವರ್ಮನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ‘ಅರಣ್ಯ’ದ ಅರ್ಥ ವಿವರಣೆಯನ್ನೇ ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಪಾಲಿಸಬೇಕೆಂದು ಸೂಚಿಸಿತು. ಆ ಅರ್ಥ ವಿವರಣೆಯಲ್ಲಿ, ಅರಣ್ಯವೆಂದರೆ ನಿಘಂಟು ನೀಡುವ ಅರ್ಥ. ಅದರಂತೆ, ‘ವಿಶಾಲ ಪ್ರದೇಶದಲ್ಲಿ, ಸಾಕಷ್ಟು ದಟ್ಟವಾಗಿ ಬೆಳೆದುನಿಂತಿರುವ ಮರಗಿಡಗಳು ಮತ್ತು ಕುರುಚಲು, ಪೊದೆ, ಸಣ್ಣ ಗಿಡಗಂಟಿಗಳ ಸಮೂಹವೇ ಅರಣ್ಯ’.



ಅಲ್ಲಿ ಒಡೆತನದ ಪ್ರಶ್ನೆ ಬರುವುದಿಲ್ಲ. ಸರ್ಕಾರಿ ದಾಖಲೆಗಳಲ್ಲಿ ಅಧಿಕೃತವಾಗಿ ವರ್ಗೀಕರಿಸಿರಲಿ ಅಥವಾ ಇಲ್ಲದಿರಲಿ, ಅವುಗಳಿಗೆ ಕಾನೂನಾತ್ಮಕ ರಕ್ಷಣೆ ಒದಗಿಸಬೇಕೆಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು. ಅದರೊಂದಿಗೆ ಪ್ರತಿ ರಾಜ್ಯವೂ ಪರಿಣತರ ಸಮಿತಿಯೊಂದನ್ನು ರಚಿಸಿ, ಅದರ ಮಾರ್ಗದರ್ಶನದಲ್ಲಿ ವ್ಯಾಪಕವಾದ ಸಮೀಕ್ಷೆಯನ್ನು ನಡೆಸಿ, ವರ್ಗೀಕರಿಸದ ಅರಣ್ಯಗಳ ಬಗ್ಗೆ ಸಮಸ್ತ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೆಂಬ ಸೂಚನೆಯನ್ನೂ ನೀಡಿತ್ತು. ಆದರೆ 28 ವರ್ಷಗಳ ನಂತರವೂ ಈ ಕೆಲಸ ಮುಗಿದಿರದ ಕಾರಣ, ಈ ವರ್ಷದ ಏಪ್ರಿಲ್ 15ರ ಒಳಗೆ ಎಲ್ಲ ರಾಜ್ಯಗಳೂ ಈ ಮಾಹಿತಿಯನ್ನು ಕೇಂದ್ರ ಪರಿಸರ ಸಚಿವಾಲಯದ ಜಾಲತಾಣದಲ್ಲಿ ಪ್ರಕಟಣೆಗೆ ಒದಗಿಸಬೇಕೆಂಬ ಅಂತಿಮ ಎಚ್ಚರಿಕೆ ನೀಡಿತು. ಈ ಜಾಲತಾಣದಲ್ಲಿ ಲಭ್ಯವಿರುವ ಡೀಮ್ಡ್ ಅರಣ್ಯಗಳಿಗೆ ಸಂಬಂಧಿಸಿದ ಮಾಹಿತಿಯಲ್ಲಿ ಅನೇಕ ಗೊಂದಲಗಳಿವೆ. ಏಳು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಪರಿಣತರ ಸಮಿತಿಯನ್ನೇ ರಚಿಸಿಲ್ಲ. ಬಹುತೇಕ ರಾಜ್ಯಗಳು ವರ್ಗೀಕರಿಸದ ಅರಣ್ಯಗಳಿರುವ ಭೌಗೋಳಿಕ ಪ್ರದೇಶವನ್ನು ಸ್ಪಷ್ಟವಾಗಿ ಸೂಚಿಸಿಲ್ಲ. ಕೆಲವು ರಾಜ್ಯಗಳು ಎಫ್‌ಎಸ್‌ಐ ಅಂಕಿಅಂಶಗಳನ್ನೇ ತಮ್ಮವೆಂಬಂತೆ ನೀಡಿವೆ.

ಗುಜರಾತ್ ನೀಡಿರುವ ಮಾಹಿತಿಯಂತೆ, ಅಲ್ಲಿನ ವರ್ಗೀಕರಿಸದ ಅರಣ್ಯಗಳ ವಿಸ್ತೀರ್ಣ 192.24 ಚದರ ಕಿ.ಮೀ.ಗಳು. ಆದರೆ ಎಫ್‌ಎಸ್‌ಐ ಮೂಲದಂತೆ, ಅದು 4,577 ಚದರ ಕಿ.ಮೀ.ಗಳು. ಕರ್ನಾಟಕದಲ್ಲಿ ಇಂತಹ ಅರಣ್ಯದ ವಿಸ್ತೀರ್ಣ 6.64 ಲಕ್ಷ ಹೆಕ್ಟೇರ್. ರಾಜ್ಯಗಳು ಸಲ್ಲಿಸಿರುವ ವಿಶೇಷ ಪರಿಣತರ ವರದಿ ನಿಖರವಾಗಿರಬೇಕು ಮತ್ತು ತಾಳೆಹಾಕಿ ನೋಡಿದಾಗ ಆ ಮಾಹಿತಿ ವಾಸ್ತವ ಪರಿಸ್ಥಿತಿಯೊಡನೆ ಹೊಂದಿಕೊಳ್ಳಬೇಕು. ಹಾಗಾಗದ ಹೊರತು ಅವು ವಿಶ್ವಾಸಾರ್ಹವಲ್ಲ ಎಂಬುದು ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರ ಅಭಿಪ್ರಾಯ. ವಿಶ್ವಾಸಾರ್ಹವಲ್ಲದ ಮಾಹಿತಿಯ ಆಧಾರದ ಮೇಲೆ ತಿದ್ದುಪಡಿ ಮಸೂದೆಯನ್ನು ಜಾರಿಗೆ ತಂದರೆ ಅರಣ್ಯನಾಶ ಮತ್ತಷ್ಟು ವ್ಯಾಪಕವಾಗಲಿದೆ ಎಂಬುದು ಅರ್ಜಿದಾರರ ಖಚಿತ ನಿಲುವು.

ಅರಣ್ಯ ಸಂರಕ್ಷಣಾ ತಿದ್ದುಪಡಿ ಮಸೂದೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ರಚಿಸಿದ ಜಂಟಿ ಸಂಸದೀಯ ಸಮಿತಿಗೆ ಸುಮಾರು 1,200 ಆಕ್ಷೇಪಗಳು, ತಕರಾರುಗಳು, ಜ್ಞಾಪನಾಪತ್ರಗಳು, ಸಲಹೆಗಳು ಬಂದಿದ್ದವೆಂಬ ಮಾಹಿತಿ ಇದೆ. ವಿಜ್ಞಾನಿಗಳು, ಪರಿಸರ ಕಾನೂನು ತಜ್ಞರು, ನಾಗರಿಕ ಸೇವೆಯ ನಿವೃತ್ತ ಅಧಿಕಾರಿಗಳು, ಪರಿಸರ ಪರ ಸಂಘಟನೆಗಳು ಈ ತಿದ್ದುಪಡಿಯಲ್ಲಿನ ಕುಂದುಕೊರತೆಗಳನ್ನು ಎತ್ತಿ ತೋರಿದರೂ ಅವುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ತಜ್ಞರು, ಸಂಘಟನೆಗಳ ವಾದವನ್ನು ಒಪ್ಪದ ಸರ್ಕಾರ, 1996ರಲ್ಲಿ ಗೋದಾವರ್ಮನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ವಿವಿಧ ಅಂಶಗಳನ್ನು ಕ್ರೋಡೀಕರಿಸಿ ಮುಂದುವರಿಯುವ ಉದ್ದೇಶದಿಂದಲೇ ಈ ತಿದ್ದುಪಡಿಗಳನ್ನು ತರಲಾಗಿದೆ ಎಂದಿದೆ. ಈ ವಾದ-ವಿವಾದಗಳ ನಡುವೆಯೇ ಸುಪ್ರೀಂ ಕೋರ್ಟ್ ಈ ಪ್ರಕರಣದ ತೀರ್ಪನ್ನು ಮುಂದಿನ ತಿಂಗಳು ಪ್ರಕಟಿಸುವ ನಿರೀಕ್ಷೆಯಿದೆ.

## ಚುರುಮುರಿ



### ಕ್ರೈಂ ಕಾಯಿಲೆ

• ಮಣ್ಣೆ ರಾಜು

ಶಂಕ್ರಿ ಮನೆಯ ಟಿ.ವಿ. ಕೆಟ್ಟಿತ್ತು. ಮಳೆ, ಚಳಿಗೆ ಥಂಡಿಯಾಗಿ ನೆಗಡಿ, ಜ್ವರ ಬಂದಿರಬಹುದು ಎಂದು ಸುಮಿ ಟಿ.ವಿಗೆ ಬೆಚ್ಚಗೆ ಬಟ್ಟೆ ಹೊದಿಸಿ ಮನೆಮದ್ದು ಮಾಡಿದ್ದಳು. ಆದರೂ ಟಿ.ವಿ. ಕಾಯಿಲೆ ಗುಣವಾಗಲಿಲ್ಲ.

ಚಿಕಿತ್ಸೆಗೆಂದು ಡಾಕ್ಟರ್ ಬಳಿ ಟಿ.ವಿ. ತಂದರು. ಟಿ.ವಿ. ವಯಸ್ಸು ತಿಳಿದ ಡಾಕ್ಟರ್ ಅದರ ಆಯುಷ್ಯ ಅಂದಾಜು ಮಾಡಿದರು. ಟಿ.ವಿ. ಆನ್ ಮಾಡಿದರೆ ಕಾಮನಬಿಲ್ಲಿನಂತೆ ಬಣ್ಣಗಳ ಪಟ್ಟಿ ಪ್ರದರ್ಶಿಸಿತು.

ಟಿ.ವಿಯನ್ನು ಬಿಚ್ಚಿದಾಗ ಒಳಗಿನಿಂದ ಜಿರಳೆ, ಜೇಡ, ಹುಳುಹುಪ್ಪಟೆ ಹರಿದುಬಂದವು. ‘ಟೀವಿಯಲ್ಲಿ ಕ್ರಿಮಿಕೀಟಗಳು ಮನೆ ಮಾಡಿಕೊಂಡಿವೆ’ ಅಂದ್ರು.

‘ಟೀವಿಗೆ ಕ್ರಿಮಿನಾಶಕ ಸಿಂಪಡಿಸಬೇಕಾಗಿತ್ತಾ ಡಾಕ್ಟ್ರೇ?’ ಎಂದು ಶಂಕ್ರಿ ಕೇಳಿದಾಗ ಡಾಕ್ಟರ್ ಗುರಾಯಿಸಿ ನೋಡಿದರು. ತಪ್ಪಾಗದ.

‘ನೀವು ಯಾವ ಚಾನೆಲ್ ನೋಡ್ತೀರಿ?’ ಡಾಕ್ಟರ್ ಕೇಳಿದರು.

‘ನಾನು ಧಾರಾವಾಹಿಗಳನ್ನು ನೋಡ್ತೀನಿ ಡಾಕ್ಟ್ರೇ. ಅತ್ತೆ-ಸೊಸೆ ಜಗಳ, ಅತ್ತಿಗೆ-ನಾದಿನಿ ರಗಳೆ, ಅವಳಿಗೆ ಇವಳು ವಿಷ ಹಾಕೋದು, ಅವಳು ಮನೆ ಬಿಟ್ಟು ಓಡಿ ಹೋಗೋದು, ಇವಳು ಒಡವೆ ಕದ್ದು ಅವಳ ಮೇಲೆ ಆರೋಪ ಹೊರಿಸೋದು ಇಂತಹ ರಸವತ್ತಾದ ಪ್ರಸಂಗಗಳು ಧಾರಾವಾಹಿಯಲ್ಲಿ ನಿತ್ಯ ಮೂಡಿಬರುತ್ತವೆ!’ ಆನಂದವಾಗಿ ಹೇಳಿದಳು ಸುಮಿ.

‘ಸಾರ್, ನಾನು ದೈನಂದಿನ ಕರಾಳ ಕ್ರೈಂ ಸುದ್ದಿಗಳ ನ್ಯೂಸ್ ಚಾನೆಲ್ ನೋಡ್ತೀನಿ. ಜನಾನುರಾಗಿಗಳ ಭ್ರಷ್ಟಾಚಾರ, ಜನಾನುರೋಗಿಗಳ ದುಷ್ಟಾಚಾರ, ಸಿನಿಮೀಯ ರೀತಿಯ ಕಿಡ್ನ್ಯಾಪ್, ಕೊಲೆ, ದರೋಡೆಯಂತಹ ರಣರೋಚಕ ನ್ಯೂಸ್ ನೋಡಿ ಖುಷಿಪಡ್ತೀನಿ’ ಎಂದ ಶಂಕ್ರಿ.

‘ನಿಮ್ಮ ಟೀವಿ ಕೆಟ್ಟಿಲ್ಲ... ಸಿಟ್ಟಾಗಿದೆ’ ಅಂದ್ರು ಡಾಕ್ಟರ್.

‘ಯಾಕಂತೆ ಸಾರ್?’

‘ಕ್ರೈಂ ಕಾರ್ಯಕ್ರಮ ಚಟದಿಂದ ನೀವು ನಿಮ್ಮ ಸಂಸಾರದ ನೆಮ್ಮದಿಯನ್ನೂ ಕೆಡಿಸಿಕೊಂಡು ಸಮಾಜದ ನೆಮ್ಮದಿಯನ್ನೂ ಕೆಡಿಸ್ತೀರಿ ಅಂತ ಟೀವಿಗೆ ಆತಂಕವಾಗಿ ನಿಮ್ಮ ಮೇಲೆ ಸಿಟ್ಟು ಬಂದಿದೆ...’ ಎಂದು ಡಾಕ್ಟರೂ ಸಿಟ್ಟಾದರು.

## ಸಂಗತ

# ಮುಕ್ತವಾಗದ ಮನ: ಹಿಂಗ್ಯಾಕೆ ಜನ?

### ಮನರಂಜನೆಗೆ ನೀಡುವ ಮಹತ್ವವನ್ನು ಜ್ಞಾನ ವೃದ್ಧಿಗೆ ನೀಡುತ್ತಿಲ್ಲ

• ಸ್ವರೂಪ್ ಕೊಟ್ಟೂರು

ಪರಿಚಯಸ್ಥ ನಿವೃತ್ತ ಶಿಕ್ಷಕರೊಬ್ಬರು ತಮ್ಮೂರಿನ ಮಕ್ಕಳು, ಕೃಷಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕಾರ್ಯಕ್ರಮದ ಆರಂಭಕ್ಕೂ ಮುನ್ನ ಗ್ರಾಮದಲ್ಲಿ ವಾದ್ಯವೃಂದ, ಶಾಲಾ ಮಕ್ಕಳೊಂದಿಗೆ ಪ್ರಭಾತ್ ಫೇರಿ ಹೊರಟಿತು. ಈ ವೇಳೆ ಜನರಿಂದ ನೀರಸ ಪ್ರತಿಕ್ರಿಯೆ ಕಂಡುಬಂತು. ಕಾರ್ಯಕ್ರಮದ ಉದ್ದೇಶದ ಬಗ್ಗೆ ಊರಿಗೆಲ್ಲ ಕೇಳುವಂತೆ ಧ್ವನಿವರ್ಧಕದಲ್ಲಿ ಪದೇ ಪದೇ ಘೋಷಣೆ ಮಾಡಲಾಯಿತಾದರೂ ಜನ ಕಿವಿಗೆ ಹಾಕಿಕೊಳ್ಳಲೇ ಇಲ್ಲ!

ಶಾಲಾ ಮಕ್ಕಳು, ಆತ್ಮೀಯರು, ಸನ್ಮಾನಕ್ಕೆ ಬಂದವರು... ಹೀಗೆ ಅಲ್ಲಿ ಇರಲೇಬೇಕಾದ ಅನಿವಾರ್ಯ ಇದ್ದವರಷ್ಟೇ ಇದ್ದರು. ಜನ ಸೇರಬಹುದು ಎಂದು ನಿರೀಕ್ಷಿಸುತ್ತಾ ನಿಗದಿತ ವೇಳೆಗಿಂತ ಗಂಟೆ ತಡವಾಗಿ ಕಾರ್ಯಕ್ರಮ ಆರಂಭವಾಯಿತು. ‘ಈಗಷ್ಟೇ ಮಳೆ ಬಿಡುವು ಕೊಟ್ಟಿದೆ. ರೈತರೆಲ್ಲ ಹೊಲದಲ್ಲಿದ್ದಾರೆ. ಅದಕ್ಕಾಗಿ ಜನ ಇಲ್ಲ...’ ಹೀಗೆ ಆಯೋಜಕರು ಜಾಣ ಸ್ಪಷ್ಟೀಕರಣ ನೀಡಿದರು! ರಾಸಾಯನಿಕ, ಕ್ರಿಮಿನಾಶಕ ಮುಕ್ತ ಕೃಷಿ ಮತ್ತು ಒತ್ತಡಮುಕ್ತ ಕಲಿಕೆ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳು ಮನಮುಟ್ಟುವಂತೆ ವಿಷಯ ಮಂಡಿಸಿದರು. ಆದರೆ ಇದು ಮುಟ್ಟಬೇಕಾದವರಿಗೆ ಮುಟ್ಟಲೇ ಇಲ್ಲ. ಮಕ್ಕಳು, ಇದ್ದ ಅಲ್ಪಸ್ವಲ್ಪ ಸಭಾಸದರ ಗೌಜುಗದ್ದಲದ ಮಧ್ಯೆಯೇ ಅತಿಥಿಗಳ ಮಾತೂ ಮುಗಿದುಹೋಯಿತು.

ನಂತರ ಹಾಸ್ಯ ಕಲಾವಿದರೊಬ್ಬರ ಕಾರ್ಯಕ್ರಮ. ಅವರು ನಗೆ ಚಟಾಕಿಗಳನ್ನು ಹಾರಿಸುತ್ತಿದ್ದಂತೆಯೇ ಅದೆಲ್ಲಿದ್ದರೋ ಜನ, ಕಾರ್ಯಕ್ರಮದ ಸ್ಥಳಕ್ಕೆ ಪ್ರವಾಹದ ರೀತಿ ಹರಿದುಬರಬೇಕೇ?! ಶಾಲೆಯ ಆವರಣ ಕಿಕ್ಕಿರಿದು ಕಾಂಪೌಂಡ್, ಮನೆಯ ಮಾಳಿಗೆಗಳೆಲ್ಲ ಸಾಲದೇ ಬಂದವು. ಆ ಕಲಾವಿದ ‘ಹಿತ್ತಲಕ್ಕೆ ಕರಿಬೇಡ ಮಾವ’, ‘ಪ್ರೀತ್ಸೇ ಪ್ರೀತ್ಸೇ’, ‘ನಾ ಡ್ರೈವರಾ’ ಎಂಬೆಲ್ಲ ‘ಹಾಟ್’ ಚಿತ್ರಗೀತೆಗಳ ಪ್ರಾರಂಭದ ಸಾಲುಗಳನ್ನು ಹೇಳುತ್ತಿದ್ದಂತೆಯೇ ಶಾಲಾ ಮಕ್ಕಳು ನಂತರದ ಸಾಲುಗಳನ್ನು ಒಕ್ಕೊರಲಿನಿಂದ ಹಾಡಿದವು. ಬಿಟ್ಟಿದ್ದರೆ ಇಡೀ ಹಾಡನ್ನೇ ರಾಗಬದ್ಧವಾಗಿ ಹಾಡುವ ಜೋಷ್‌ನಲ್ಲಿ ಇದ್ದವು. ಅದೇ ವೇಳೆ ಅದೇ ಹಾಸ್ಯ ಕಲಾವಿದ 15 × 7 ಎಷ್ಟು ಎಂದು ಮಕ್ಕಳಿಗೆ ಕೇಳಿ, ಸ್ವಲ್ಪ ಸಮಯವನ್ನೂ ಕೊಟ್ಟರು. ಆದರೆ ಒಂದೇ ಒಂದು ಮಗುವಿನಿಂದ ಕೊನೆಗೂ ಉತ್ತರ ಬರಲೇ ಇಲ್ಲ! ಜನ ಗಂಟೆಗಟ್ಟಲೆ ನಿಂತೇ ಹಾಸ್ಯ ಕಾರ್ಯಕ್ರಮವನ್ನು ಸವಿದರು. ಮುಗಿಯುತ್ತಿದ್ದಂತೆಯೇ ಬಂದ ವೇಗದಲ್ಲೇ ಕರಗಿದರು.

ಇಂದು ಎಲ್ಲೆಡೆ ಇದೇ ಸಮಸ್ಯೆ. ಸಮಾಜಕ್ಕೆ ಅತ್ಯಂತ ಉಪಯುಕ್ತವಾದ ಕಾರ್ಯಕ್ರಮಗಳನ್ನು ಆಯೋಜಿಸಿ, ಬಹಳಷ್ಟು ಪ್ರಚಾರ ಕೊಟ್ಟರೂ ಜನ ಸೇರುವುದೇ ಇಲ್ಲ. ಖಾಲಿ ಕುರ್ಚಿಗಳನ್ನು ಕಂಡು ಮುಜುಗರ, ಕಸಿವಿಸಿ ಅನುಭವಿಸುವ ಸರದಿ ಸಂಘಟಕರದ್ದು. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಭ್ರಮನಿರಸನಗೊಂಡವರು ‘ಸ್ವಂತ ದುಡ್ಡು ಹಾಕಿ ಬೇಕಾದರೆ ಕಾರ್ಯಕ್ರಮ ಮಾಡಬಹುದು. ಆದರೆ ಈ ಜನರನ್ನು ಕೂಡಿಸೋ ಫಜೀತಿ ಇದೆಯಲ್ಲ, ಅದು ಯಾವ ಶತ್ರುವಿಗೂ ಬೇಡ. ಅದಕ್ಕೆ ಎಲ್ಲಾ ಕೈ ಬಿಟ್ಟು ತಣ್ಣಗೆ ಇದೀವೀಗ...’ ಎಂದು ಹೇಳುವುದನ್ನು ಕೇಳುತ್ತಲೇ ಇರುತ್ತೇವೆ.

ಕಾರ್ಯಕ್ರಮಗಳಿಗೆ ಆಗಮಿಸಿದ ಸಂಪನ್ಮೂಲ ವ್ಯಕ್ತಿಗಳು, ಅತಿಥಿಗಳು ಭಣ ಭಣ ಎನ್ನುವ ವಾತಾವರಣ ಕಂಡು ಬೇಸರದಿಂದಲೇ ನಾಲ್ಕು ಮಾತುಗಳನ್ನಾಡಿ ತಮ್ಮ ಮಾತಿಗೆ ವಿರಾಮ ಹೇಳಿದ ಉದಾಹರಣೆಗಳಿಗೆ ಲೆಕ್ಕವಿಲ್ಲ. ಇನ್ನು ಚುನಾವಣೆ ಸಂದರ್ಭದಲ್ಲಿ ಮತದಾನ ಜಾಗೃತಿ ಜಾಥಾ ಮಾಡುವಾಗ, ಆರೋಗ್ಯ ಇಲಾಖೆಯು ಡೆಂಗಿ, ಮಲೇರಿಯಾದಂತಹ ಕಾಯಿಲೆಗಳ ಕುರಿತು ಅರಿವು ಮೂಡಿಸುವಾಗ, ಪೊಲೀಸ್ ಇಲಾಖೆಯ ಅಪರಾಧ ತಡೆ ಮಾಸಾಚರಣೆ ಸೇರಿದಂತೆ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳಂತಹ ಮಹತ್ವದ ಕಾರ್ಯಕ್ರಮಗಳಿಗೆ ಜನರನ್ನು ಸೇರಿಸುವುದೇ ದೊಡ್ಡ ಸವಾಲು. ಹಾಗೋ ಹೀಗೋ ಕಷ್ಟಪಟ್ಟು ಒಂದಷ್ಟು ಜನರನ್ನು ಸೇರಿಸಿದರೂ ಅವರನ್ನು ಸ್ವಲ್ಪ ಹೊತ್ತು ಒಂದೆಡೆ ಹಿಡಿದಿಡಲು ಹರಸಾಹಸ ಮಾಡಬೇಕು.

ಇಂತಹವೆಲ್ಲ ಕೊನೆಗೆ ಫೋಟೊಗೆ ಪೋಸ್, ಪ್ರಚಾರ, ಲೆಕ್ಕಕ್ಕಷ್ಟೇ ಸೀಮಿತವಾಗುತ್ತವೆ. ಅದೇ ಹಾಸ್ಯ ಕಾರ್ಯಕ್ರಮ, ಆರ್ಕೆಸ್ಟ್ರಾ, ಡಾನ್ಸ್ ಸೇರಿದಂತೆ ಪಾಶ್ಚಿಮಾತ್ಯ ಸಂಸ್ಕೃತಿ ಪ್ರಭಾವದ ಸಾಂಸ್ಕೃತಿಕ



ಕಾರ್ಯಕ್ರಮಗಳಿಗೆ ಪ್ರಚಾರದ ಕೊರತೆಯ ಮಧ್ಯೆಯೂ ಬಹಳಷ್ಟು ಸಂಖ್ಯೆಯಲ್ಲಿ ಜನ ಜಮಾಯಿಸುತ್ತಾರೆ! ತಡರಾತ್ರಿವರೆಗೂ ಇಂತಹ ಕಾರ್ಯಕ್ರಮಗಳು ನಡೆದರೂ ಒಂಟಿಗಾಲಲ್ಲಿ ನಿಂತಾದರೂ ನೋಡುವ ಜನರಿಗೆ ನಮ್ಮಲ್ಲಿ ಬರವಿಲ್ಲ.

ಹೀಗೆ ಮನರಂಜನೆಗೆ ಜನ ನೀಡುವಷ್ಟು ಮಹತ್ವವನ್ನು ಜ್ಞಾನ ವೃದ್ಧಿಗೆ, ತಮ್ಮ ಬದುಕಿನ ಅಭ್ಯುದಯಕ್ಕೆ ಪೂರಕವಾದ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಆಸಕ್ತಿ ತೋರುತ್ತಿಲ್ಲ. ಇಂದಿನ ತಲೆಮಾರು ಇಂತಹ ಹಾದಿಯಲ್ಲಿರುವಾಗ ಯುವಪೀಳಿಗೆ ಸರಿಪಥದಲ್ಲಿ ಹೇಗೆ ಸಾಗಲು ಸಾಧ್ಯ? ಮನೆ, ಅಷ್ಟೇಕೆ ಇಡೀ ಊರು ಮನರಂಜನೆಗಷ್ಟೇ ಜೋತು ಬಿದ್ದಿರುವಾಗ ಮಕ್ಕಳಿಗೂ ಅದೇ ಬಗೆಯ ಅಮಲು ಏರುತ್ತದೆ. ಪರಿಣಾಮವಾಗಿ ಮಕ್ಕಳಲ್ಲಿ ಓದು-ಬರಹ, ಭವಿಷ್ಯದ ಬಗ್ಗೆ ಗಂಭೀರ ನಿಲುವು ಇಲ್ಲವಾಗುತ್ತಿದೆ. ಮನುಷ್ಯನಿಗೆ ಊಟ, ನಿದ್ರೆ, ವಿಶ್ರಾಂತಿಯಷ್ಟೇ ಮನರಂಜನೆಯೂ ಅತ್ಯವಶ್ಯ. ಆದರೆ ಇಡೀ ಬದುಕನ್ನು ಮನರಂಜನೆಯೊಂದೇ ಆವರಿಸಿಕೊಳ್ಳಬಾರದಲ್ಲವೆ?

ಜನರ ಇಂತಹ ಸ್ವಭಾವ, ಮನಃಸ್ಥಿತಿ ಬದಲಾಗಬೇಕು. ಮನರಂಜನೆಯಷ್ಟೇ ಮನೋ, ಬೌದ್ಧಿಕ ವಿಕಾಸ ಸೇರಿದಂತೆ ಸರ್ವತೋಮುಖ ಅಭ್ಯುದಯಕ್ಕೂ ಪ್ರಾಶಸ್ತ್ಯ ನೀಡಬೇಕಾದುದು ಇಂದಿನ ತುರ್ತುಗಳಲ್ಲೊಂದು.

## ವಾಚಕರ ವಾಣಿ

### ಮುಖಂಡರ ಪಾತ್ರ ಸೀಮಿತವಾಗಿರಲಿ

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರು ಭಾಗಿಯಾಗಿದ್ದರ ಬಗ್ಗೆ ಶಶಿಧರ ಭಾರಿಘಾಟ್ ಅವರ ಪತ್ರ ಪ್ರಕಟವಾದ ದಿನವೇ (ಪ್ರ.ವಾ., ಜೂನ್ 17) ‘ಕಾಂಗ್ರೆಸ್ ಪಕ್ಷವನ್ನು ಸರಿದಾರಿಗೆ ತರುವ ಜವಾಬ್ದಾರಿ ನಮ್ಮಂತಹವರ ಮೇಲೆ ಇದೆ’ ಎಂಬ ಎಲ್.ಎನ್.ಮುಕುಂದರಾಜ್ ಅವರ ಹೇಳಿಕೆಯನ್ನು ಓದಿ ಬೇಸರವಾಯಿತು. ಹಿಂದೆ ರಂಗಾಯಣ, ನಾಟಕ ಅಕಾಡೆಮಿ ಅಧ್ಯಕ್ಷರ ವಿಷಯದಲ್ಲಿ ಬಂದ ಟೀಕೆಗಳು ನೆನಪಾದವು. ಚಲನಚಿತ್ರ ಸೇರಿದಂತೆ ವಿವಿಧ ಅಕಾಡೆಮಿಗಳಿಗೆ ನೇಮಕ ಆದಾಗಲೇ ವ್ಯಕ್ತಿಗಳ ರಾಜಕೀಯ ಸಂಬಂಧ, ಒಲವುಗಳ ಬಗ್ಗೆ ಚರ್ಚೆ ಆಗುತ್ತಾ ಬಂದಿದೆ.

ವೈಯಕ್ತಿಕ ಮಟ್ಟದಲ್ಲಿ ಏನು ಮಾಡಬೇಕು ಎಂಬುದು ಅವರವರ ವಿವೇಚನೆಗೆ ಬಿಟ್ಟಿದ್ದು. ಆದರೆ ಅಕಾಡೆಮಿ ಸದಸ್ಯ ಅಥವಾ ಅಧ್ಯಕ್ಷರಾಗಿ ಪಕ್ಷಗಳಿಂದ ಅಂತರ ಕಾಯ್ದುಕೊಳ್ಳಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ. ನನಗೆ ‘ಆ್ಯನ್ ಹೂಸ್ ಸೈಡ್ ಆರ್ ಯೂ, ಮಾಸ್ಟರ್ಸ್ ಆಫ್ ಕಲ್ಚರ್?’ ಪುಸ್ತಕದ ನೆನಪಾಗುತ್ತಿದೆ. ಕಮ್ಯುನಿಸ್ಟ್, ಸಂಘ ಪರಿವಾರ ಅಲ್ಲದೆ ಬೇರೆಲ್ಲ ಸಂಘಟನೆಗಳ ನಂಟು ಇರುವವರಿಗೂ ಇದು ಅನ್ವಯಿಸುತ್ತದೆ. ಆರ್ಥಿಕ ವಿಷಯದಲ್ಲಿ ಸರ್ಕಾರಿ ಅಧಿಕಾರಿಗಳ ‘ನಿಯಂತ್ರಣ’ ಇರಬೇಕಾಗುತ್ತದೆ. ಸರ್ಕಾರ ನಡೆಸುವ ಮುಖಂಡರ ಪಾತ್ರ ಒಟ್ಟಾರೆ ಪ್ರಾಶಸ್ತ್ಯಗಳನ್ನು ಸೂಚಿಸುವ ಮಟ್ಟಿಗೆ ಸೀಮಿತವಾಗಿರಬೇಕು. ಉಳಿದಂತೆ ನಡೆ, ನುಡಿಗಳಲ್ಲಿ ಶಿಸ್ತು (ಅನುಶಾಸನ) ಪಾಲಿಸುವುದು ಸೂಕ್ತ, ಅಗತ್ಯ.

**ಎಚ್.ಎಸ್.ಮಂಜುನಾಥ,** ಗೌರಿಬಿದನೂರು

### ಗ್ಯಾರಂಟಿಗಳ ಬಗ್ಗೆ ತಾತ್ಸಾರವೇಕೆ?

‘ಯಾವುದೇ ವಿವೇಚನೆ, ಲೆಕ್ಕಾಚಾರ ಇಲ್ಲದೇ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ ನಂತರ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಅನುದಾನ ಸಿಗದ ಹಿನ್ನೆಲೆಯಲ್ಲಿ ಬೇಸತ್ತಿರುವ ಕಾಂಗ್ರೆಸ್ಸಿನ 40 ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ’ ಎಂದು ಸಂಸದ ಗೋವಿಂದ ಕಾರಜೋಳ ಅವರು ಹೇಳಿರುವುದು (ಪ್ರ.ವಾ., ಜೂನ್ 18) ವರದಿಯಾಗಿದೆ. ಕಾಂಗ್ರೆಸ್ಸಿನ ಪಂಚ ಗ್ಯಾರಂಟಿಗಳಲ್ಲಿ ಒಂದಿಲ್ಲೊಂದು ಗ್ಯಾರಂಟಿ ಮುಟ್ಟದ ಮನೆ ಬಹುಶಃ ಕರ್ನಾಟಕದಲ್ಲಿ ಇರಲಿಕ್ಕಿಲ್ಲ. ಎಲ್ಲರೂ ಲಾಭಾರ್ಥಿಗಳೇ. ಈ ಆರ್ಥಿಕ ವಿಕೇಂದ್ರೀಕರಣದಿಂದ ಬಹುಜನರ ಸಾಮಾಜಿಕ ಸಮಾನತೆ ಹಾಗೂ ಬೆಳವಣಿಗೆಗೊಂದು ಚಾಲನೆ ಸಿಕ್ಕಂತಾಗಿದೆ. ಬಹುಜನರ ಕೈಯಲ್ಲಿ ಎರಡು ಕಾಸು ಆಡುವಂತಾಗಿದೆ. ಅನೇಕ ಆರ್ಥಿಕ ತಜ್ಞರ ಮತವೂ ಇಂತಹುದೇ ಆಶಯದ್ದಾಗಿರುವುದನ್ನು ಮರೆಯಬಾರದು.

ಇಷ್ಟೊಂದು ಗಾಢವಾಗಿ ಪ್ರತಿಯೊಬ್ಬರ ಜೀವನವನ್ನೂ ಪ್ರಭಾವಿಸಿರುವ ಈ ಗ್ಯಾರಂಟಿಗಳ ಬಗ್ಗೆ ಆಡಳಿತ ಪಕ್ಷದ ಶಾಸಕರಾಗಲೀ ಮಂತ್ರಿಗಳಾಗಲೀ ಆತ್ಮವಿಶ್ವಾಸದಿಂದ ಗಟ್ಟಿಯಾಗಿ ಸಮರ್ಥಿಸಿಕೊಂಡಿದ್ದೇ ಕಾಣಲಿಲ್ಲ. ಈ ಗ್ಯಾರಂಟಿಗಳ ಭರವಸೆಯ ಮೇಲೇ ಗೆದ್ದು ಬಂದವರು ಇವರು. ಅದರ ಬಗ್ಗೆ ಇಷ್ಟೊಂದು ತಾತ್ಸಾರವೇ?

**ಶ್ರೀಧರ ಗಾರೆಮನೆ,** ಬೆಂಗಳೂರು

#### ನ(ಫ)ಟನೆ...!

ವ್ಯಕ್ತಿ, ವ್ಯಕ್ತಿಯನ್ನು
ಮುಗಿಸಿದಂತೆ
ನಟಿಸಿದರೆ
ಅದು ಕಲೆ,
ನೈಜವಾಗಿ
‘ಘಟಿಸಿದರೆ’
ಅದು ಕೊಲೆ!

**ಮ.ಗು.ಬಸವಣ್ಣ**
ಮೈಸೂರು

### ಕಂದಾಯ: ಬೇಕು ಬದಲಾವಣೆ

ರೈತರು ತಮ್ಮ ಜಮೀನುಗಳ ಪೋಡಿ ಮತ್ತು ಖಾತೆ ಮಾಡಿಸಿಕೊಳ್ಳಲು ಕಂದಾಯ ಇಲಾಖೆಗೆ ವರ್ಷಗಟ್ಟಲೆ ಅಲೆಯುವುದನ್ನು ತಪ್ಪಿಸಲು ಹೊಸ ರೂಪುರೇಷೆಗಳನ್ನು ಜಾರಿಗೆ ತರಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿರುವುದು ವರದಿಯಾಗಿದೆ. ಇದು ಸ್ವಾಗತಾರ್ಹ. ರೈತರ ಅಲೆದಾಟದ ಕುರಿತಾಗಿ ‘ತಬರನ ಕಥೆ’ಯಂತೆ ಇರುವ ಸ್ವಂತ ಅನುಭವವೊಂದನ್ನು ಹೇಳುತ್ತೇನೆ.

ನಮ್ಮ ತಂದೆ 1974ರಲ್ಲಿ 15 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿದ್ದು, ಕೆ.ಆರ್.ಪೇಟೆ ತಾಲ್ಲೂಕಿನ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಆಗಿದೆ. ಅವರ ನಿಧನಾನಂತರ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು 12 ವರ್ಷಗಳ ಹಿಂದೆ ಕಂದಾಯ ಇಲಾಖೆಗೆ ಹೋದಾಗ, ‘ನೀವು ಪಾಂಡವಪುರ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿ, ಅವರಿಂದ ಆದೇಶ ತರಬೇಕು’ ಎಂದರು. ಎ.ಸಿ. ನ್ಯಾಯಾಲಯ ಕೂಲಂಕಷವಾಗಿ ಪರಿಶೀಲಿಸಿ, ಕ್ರಯಪತ್ರದಂತೆ ಖಾತೆ ಮಾಡಲು ಕೆ.ಆರ್.ಪೇಟೆ ತಾಲ್ಲೂಕು ಕಚೇರಿಗೆ ಆದೇಶ ನೀಡಿತು. ಈ ಆದೇಶ ತಿಳಿಯುತ್ತಿದ್ದಂತೆ, ನಮಗೆ ಕ್ರಯಕ್ಕೆ ಕೊಟ್ಟಿದ್ದವರೇ ಅವರ ಮೊಮ್ಮಕ್ಕಳ ಹೆಸರಿಗೆ ಕಾನೂನಿಗೆ ವಿರುದ್ಧವಾಗಿ ದಾನಪತ್ರ ಬರೆದಿದ್ದಾರೆ.

ಈ ದಾನಪತ್ರವನ್ನು ರದ್ದು ಮಾಡಲು ಮತ್ತೆ ಪಾಂಡವಪುರ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿ, ದಾನಪತ್ರ ಬರೆದವರು, ಅವರ ಮೊಮ್ಮಕ್ಕಳು ಮತ್ತು ಇದಕ್ಕೆ ಸಹಕರಿಸಿದವರ ಮೇಲೆ ಕೆ.ಆರ್.ಪೇಟೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೇವೆ. ಸುಮಾರು 12 ವರ್ಷಗಳಿಂದ ಇದೊಂದು ಕೆಲಸಕ್ಕಾಗಿ ಅಲೆದಿದ್ದೇನೆ. ಇದರಿಂದ ಒಂದು ರೀತಿಯಲ್ಲಿ ಹಿಮಾಲಯ ಪರ್ವತವನ್ನೇ ಹತ್ತಿದ ಅನುಭವವಾಗಿದೆ. ಕಂದಾಯ ಸಚಿವರು ತಮ್ಮ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ತರುವ ಮೂಲಕ ಹೊಸ ಚರಿತ್ರೆಯನ್ನು ಬರೆಯುವಂತಾಗಲಿ.

**ಬೂಕನಕೆರೆ ವಿಜೇಂದ್ರ,** ಮೈಸೂರು

### ಅಂಧಾಭಿಮಾನದಿಂದ ಕೆಟ್ಟ ನಾಯಕರ ಸೃಷ್ಟಿ

ವಿಶಿಷ್ಟ ಪ್ರತಿಭೆಯಿಂದ ಪ್ರಸಿದ್ಧಿಗೆ ಬರುವವರಲ್ಲಿ ಕೆಲವರು ಜೀವನಶೈಲಿಯನ್ನು ರೂಪಿಸಿಕೊಳ್ಳುವಲ್ಲಿ ಎಡವುತ್ತಾರೆ. ಒಳ್ಳೆಯ ವ್ಯಕ್ತಿತ್ವ ರೂಪಿಸಿಕೊಂಡು ಅಭಿಮಾನಿಗಳಿಗೆ ಆದರ್ಶವಾಗುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಸಿನಿಮಾಗಳಲ್ಲಿ ಸಮಾಜ ಬದಲಾವಣೆಗೆ ಮುಂದಾಗುವ ನಾಯಕರಾಗಿ ಕಾಣಿಸಿಕೊಳ್ಳುವ ವ್ಯಕ್ತಿಗಳು ನಿಜ ಜೀವನದಲ್ಲಿ ಖಳನಾಯಕರಾಗುತ್ತಿದ್ದಾರೆ. ಅವರಿಗೆ ದೊರಕಿದ ಶಿಕ್ಷಣ ಅವರನ್ನು ಪ್ರಬುದ್ಧರನ್ನಾಗಿ, ಒಳ್ಳೆಯ ವ್ಯಕ್ತಿಗಳನ್ನಾಗಿ ರೂಪಿಸುವಲ್ಲಿ ವಿಫಲವಾಗಿದೆ ಎನ್ನಬಹುದು. ಅವರ ಪಾಲಕರು, ಸ್ನೇಹಿತರು, ಬೆಂಬಲಿಗರು ಸಹ ಅವರನ್ನು ತಿದ್ದುವಲ್ಲಿ ವಿಫಲರಾದರೇ? ಹಾಗಾದರೆ ಅವರನ್ನು ತಿದ್ದುವವರಾರು? ಸೆಲೆಬ್ರಿಟಿಗಳೆಂಬ ಬೆಕ್ಕಿಗೆ ಗಂಟೆ ಕಟ್ಟುವವರಾರು? ಅವರನ್ನು ಬೆಂಬಲಿಸಿ ಬೆಳೆಸಿದ ಅಭಿಮಾನಿಗಳೇ ಆ ಕೆಲಸವನ್ನು ಮಾಡಬೇಕು. ನಾವು ಅಂಧಾಭಿಮಾನಿಗಳಾಗಿ ಕೆಟ್ಟ ನಾಯಕರನ್ನು ಸೃಷ್ಟಿಸಬಾರದು.

**ಭೀಮರಾಯ ಮ. ಉಪ್ಪಾರ,** ಕೊಂಡಗೂಳಿ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

## ವಾಜಪೇಯಿಯಂತೆ ಮೋದಿಗೆ ಹಿನ್ನಡೆ

# ಹೋಲಿಕೆ ಮತ್ತು ಅಂತರಗಳು

• ಯೋಗೇಂದ್ರ ಯಾದವ್, ರಾಹುಲ್ ಶಾಸ್ತ್ರಿ, ಶ್ರೇಯಸ್ ಸರ್ದೇಸಾಯಿ

**ನರೇಂದ್ರ ಮೋದಿ ಅವರು ಯಾಕಾಗಿ ಮತ್ತೊಮ್ಮೆ ಪ್ರಧಾನಿಯಾದರು? ಎನ್‌ಡಿಎ ಮೈತ್ರಿಕೂಟವು ಬಹುಮತವನ್ನು ಉಳಿಸಿಕೊಂಡಿದ್ದು ಹೇಗೆ? ತೀವ್ರತರವಾಗಿ ಸೋಲುಣ್ಣುವ ಸ್ಥಿತಿಯು ಬಿಜೆಪಿಗೆ ಯಾಕಾಗಿ ಒದಗಿ ಬರಲಿಲ್ಲ?**

ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ರೂಪುಗೊಂಡ ಹುಸಿ ಸಂಕಥನಗಳ ಕಾರಣದಿಂದಾಗಿಯೇ ಇಂಥ ಪ್ರಶ್ನೆಗಳನ್ನು ಚರ್ಚಿಸುವ ಪ್ರಮೇಯಕ್ಕೇ ನಾವು ಹೋಗಲಿಲ್ಲ. ಮಾಧ್ಯಮಗಳು ತಾವು ನಡೆಸುತ್ತಿರುವ ಚುನಾವಣೋತ್ತರ ವಿಶ್ಲೇಷಣೆಗಳ ಮೂಲಕ, ಕೆಲವು ತಪ್ಪು ತಿಳಿವಳಿಕೆಗಳನ್ನು ಸಮರ್ಥಿಸುವ ಹಾಗೂ ತಮಗೆ ಅನುಕೂಲಕರವಾದ ಕಾರಣಗಳನ್ನು ತಮಗೆ ತಾವೇ ನೀಡಿಕೊಳ್ಳುವ ವರ್ತುಲದಲ್ಲಿ ಸಿಕ್ಕಿ ಹಾಕಿಕೊಂಡಿವೆ. 'ಬಿಜೆಪಿಯ ಈ ಅನಿರೀಕ್ಷಿತ ಹಿನ್ನಡೆ ಏನನ್ನು ಹೇಳುತ್ತಿವೆ' ಎಂಬ ಪ್ರಶ್ನೆಯ ವಿಶ್ಲೇಷಣೆಯನ್ನಷ್ಟೇ ಮಾಧ್ಯಮ ನಡೆಸುತ್ತಿದೆ.


ಬಿಜೆಪಿಯದ್ದು ಅನಿರೀಕ್ಷಿತ ಹಿನ್ನಡೆ ಎಂಬುದೇ ಹುಸಿ ವಿಚಾರ. ಈ ಹುಸಿ ಸಂಕಥನದ ಆಧಾರದಲ್ಲಿ ಎಲ್ಲರೂ ಅವರವರ ಭಾವಕ್ಕೆ ತಕ್ಕಂತೆ ವಿಶ್ಲೇಷಣೆಗಳನ್ನು ನಡೆಸುತ್ತಿದ್ದಾರೆ. ಆದರೆ ಈ ಫಲಿತಾಂಶ ಅಥವಾ ಬಿಜೆಪಿಗೆ ಆದ ಹಿನ್ನಡೆ ಅನಿರೀಕ್ಷಿತವಾದುದೇನೂ ಆಗಿರಲಿಲ್ಲ. ಹೀಗಿದ್ದೂ ಕೆಟ್ಟ, ಉತ್ತರದಾಯಿತ್ವ ಇಲ್ಲದ, ಅಹಂಕಾರಿ ಸರ್ಕಾರವೊಂದು ಚುನಾವಣೆಯಲ್ಲಿ ಸೋಲುವುದರಲ್ಲಿ ಯಾವುದೇ ಅಚ್ಚರಿ ಇಲ್ಲ ಎನ್ನುವ ವಿಶ್ಲೇಷಣೆಯನ್ನು ಯಾವುದೇ ಮಾಧ್ಯಮವಾಗಲಿ ಅಥವಾ ವಿಶ್ಲೇಷಕರಾಗಲಿ ನೀಡುತ್ತಿಲ್ಲ. ಚುನಾವಣೆಯಲ್ಲಿನ ಹಿನ್ನಡೆಯು ಅಚ್ಚರಿಯಾದುದು ಎಂಬ ತರ್ಕವೆಲ್ಲಾ ಮಾಧ್ಯಮಗಳ ಸೃಷ್ಟಿಯಷ್ಟೆ.

ಚರ್ಚಿಸಲೇಬೇಕಾದ ವಿಚಾರಗಳಿಂದ ಗಮನವನ್ನು ಬೇರೆಡೆ ಸೆಳೆಯಲು, ಒಬ್ಬರ ಮೇಲೊಬ್ಬರು ಆರೋಪಗಳನ್ನು ಹೊರಿಸಿಕೊಳ್ಳುವುದಕ್ಕೆ ಸೀಮಿತವಾದ ಚರ್ಚೆಗಳನ್ನು ಮಾಧ್ಯಮಗಳು ನಡೆಸುತ್ತಿವೆ. ಈ ಚರ್ಚೆಗಳೆಲ್ಲಾ ಮುಗಿದ ಮೇಲೆ ನಿಜವಾದ ಪ್ರಶ್ನೆಗಳನ್ನು ಅಥವಾ ಈಗ ನಡೆಯುತ್ತಿರುವ ಚರ್ಚೆಗಳಿಗೆ ತದ್ವಿರುದ್ಧವಾದ ಹೊಳಹುಗಳಿರುವ ಪ್ರಶ್ನೆಗಳ ಕುರಿತು ಜನರು ಹೆಚ್ಚು ಗಮನ ಹರಿಸುತ್ತಾರೆ ಎಂಬ ಬಗ್ಗೆ ನಿರೀಕ್ಷೆ ಇದೆ. ಹಾಗಾದರೆ, ಆ ನಿಜವಾದ ಪ್ರಶ್ನೆ ಯಾವುದೆಂದರೆ: 'ಚುನಾವಣೆಯಲ್ಲಿ ಹೀನಾಯವಾಗಿ ಸೋಲು ಕಾಣುವ ಕಷ್ಟಕರ ಸ್ಥಿತಿಯಲ್ಲಿದ್ದ ಬಿಜೆಪಿಯು ಹೇಗೆ ಗೆದ್ದಿತು?'




**ಮೊದಲ ಲೇಖಕ:** ಭಾರತ ಜೋಡೊ ಯಾತ್ರೆಯ ರಾಷ್ಟ್ರೀಯ ಸಂಚಾಲಕ, **ಎರಡನೇ ಲೇಖಕ:** ಸಂಶೋಧಕ, **ಮೂರನೇ ಲೇಖಕ:** ಸಮೀಕ್ಷಾ ಸಂಶೋಧನೆ ಸಂಶೋಧಕ


### 2004, 2024ರ ಚುನಾವಣಾ ಸಮೀಕ್ಷಾ ಹೋಲಿಕೆ





## ಮರುಕಳಿಸಿದ ಇತಿಹಾಸ

**2024ರ ಬಿಜೆಪಿಯ** ಹಿನ್ನಡೆಯನ್ನು 2004ರಲ್ಲಿನ ಬಿಜೆಪಿಯ ಸೋಲಿನೊಂದಿಗೆ ಹೋಲಿಸಿ ನೋಡುವ ಕ್ರಮವು ಹಲವು ವಿಚಾರಗಳನ್ನು ನಮ್ಮ ಮುಂದಿಡುತ್ತದೆ. ನೆನಪಿಸಿಕೊಳ್ಳಿ, ಆಗ ಎನ್‌ಡಿಎ ಸರ್ಕಾರವು ತನ್ನ 'ಯಶಸ್ವಿ'ಯಾದ ಐದು ವರ್ಷಗಳನ್ನು ಪೂರೈಸಿತ್ತು. ಈ ಸರ್ಕಾರದ ನೇತೃತ್ವವನ್ನು ವರ್ಚಸ್ವಿ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ ಅವರು ವಹಿಸಿಕೊಂಡಿದ್ದರು. 'ಭಾರತವು ಪ್ರಕಾಶಿಸುತ್ತಿದೆ' ಎನ್ನುವ ಘೋಷವಾಕ್ಯದೊಂದಿಗೆ ಬಿಜೆಪಿಯು ಚುನಾವಣೆ ಎದುರಿಸಿತ್ತು ಮತ್ತು ವಾಜಪೇಯಿ ಅವರೇ ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ ಎಂದು 'ಎಲ್ಲರೂ ನಿರೀಕ್ಷಿಸಿದ್ದರು'. ಚುನಾವಣಾ ಪೂರ್ವ ಸಮೀಕ್ಷೆಗಳೂ ಚುನಾವಣೋತ್ತರ ಸಮೀಕ್ಷೆಗಳೂ ಇದನ್ನೇ ಹೇಳಿದ್ದವು. ಈ ಎಲ್ಲ ನಿರೀಕ್ಷೆಗಳನ್ನು ಹುಸಿಗೊಳಿಸಿ ಫಲಿತಾಂಶವು ಬಂದಿತ್ತು. ಫಲಿತಾಂಶವು ಎಲ್ಲರನ್ನೂ ಚಕಿತಗೊಳಿಸಿತ್ತು. 2024ರ ಫಲಿತಾಂಶವು ಇಂಥದ್ದೇ ಪರಿಣಾಮವನ್ನು ಉಂಟುಮಾಡಿದೆ.

### ಸಮೀಕ್ಷೆಗಳು ಎನ್‌ಡಿಎಗೆ ನೀಡಿದ ಸ್ಥಾನಗಳು




2004ರಲ್ಲಿಯೂ ಲೋಕನೀತಿ–ಸಿಎಸ್‌ಡಿಎಸ್ ಸಂಸ್ಥೆಗಳು ಚುನಾವಣೋತ್ತರ ಸಮೀಕ್ಷೆಯನ್ನು ನಡೆಸಿದ್ದವು. ಈ ಬಾರಿಯೂ ಸಮೀಕ್ಷೆ ನಡೆಸಿವೆ. 2004ರಲ್ಲಿ ಕೇಳಿದ ಪ್ರಶ್ನೆಗಳನ್ನೇ 2024ರಲ್ಲಿಯೂ ಕೇಳಲಾಗಿದೆ. 2004ರಲ್ಲಿ ವಾಜಪೇಯಿ ಅವರಿಗಿದ್ದ ಜನಪ್ರಿಯತೆಗೂ 2024ರಲ್ಲಿ ಮೋದಿ ಅವರಿಗೆ ಇರುವ ಜನಪ್ರಿಯತೆಗೂ ಹೆಚ್ಚೇನು ಅಂತರವಿಲ್ಲ. 'ನಿಮ್ಮ ಪ್ರಧಾನಿ ಯಾರಾಗಬೇಕು ಎಂದು ಬಯಸುತ್ತೀರಿ?' ಎಂದು ಜನರಿಗೆ ಕೇಳಿದ ಪ್ರಶ್ನೆಗೆ ಆಗ ಶೇ 38ರಷ್ಟು ಜನರು ವಾಜಪೇಯಿ ಅವರ ಹೆಸರು ಹೇಳಿದ್ದರು. ಈಗ ಮೋದಿ ಅವರ ಹೆಸರನ್ನು ಶೇ 41ರಷ್ಟು ಜನರು ಹೇಳಿದ್ದಾರೆ. ವಾಜಪೇಯಿ ಅವರಿಗೆ ಹತ್ತಿರದ ಪ್ರತಿಸ್ಪರ್ಧಿಯಾಗಿದ್ದವರು ಸೋನಿಯಾ ಗಾಂಧಿ. ಇವರ ಹೆಸರನ್ನು ಶೇ 26ರಷ್ಟು ಜನರು ಹೇಳಿದ್ದರು. ಈಗ ಮೋದಿ ಅವರ ಹತ್ತಿರದ ಪ್ರತಿಸ್ಪರ್ಧಿಯಾಗಿರುವ ರಾಹುಲ್ ಗಾಂಧಿ ಅವರ ಹೆಸರನ್ನು ಶೇ 27ರಷ್ಟು ಜನರು ಹೇಳಿದ್ದಾರೆ. ಆಗ, ವಾಜಪೇಯಿ ಅವರ ಸರ್ಕಾರಕ್ಕೆ ಮತ್ತೊಂದು ಅವಕಾಶ ನೀಡಬೇಕು ಎಂದು ಶೇ 48ರಷ್ಟು ಜನರು





ಒಲವು ತೋರಿದ್ದರೆ, ಈಗ ಮೋದಿ ಸರ್ಕಾರಕ್ಕೆ ಮತ್ತೊಂದು ಅವಕಾಶ ನೀಡಬೇಕು ಎಂದು ಶೇ 46ರಷ್ಟು ಜನರು ಒಲವು ತೋರಿಸಿದ್ದಾರೆ.

ಈ ಎಲ್ಲದರ ಮಧ್ಯೆಯೂ ವಾಜಪೇಯಿ ಅವರು ಹೀನಾಯವಾಗಿ ಸೋತರು. ಚುನಾವಣೋತ್ತರ ಸಮೀಕ್ಷೆಗಳು ಎನ್‌ಡಿಎಗೆ 230ರಿಂದ 275 ಸ್ಥಾನಗಳು ದೊರೆಯಬಹುದು ಎಂದು ಹೇಳಿದ್ದವು. ಆದರೆ, ಎನ್‌ಡಿಎಗೆ ಬಂದಿದ್ದು 181 ಸ್ಥಾನಗಳು ಮಾತ್ರ. ಬಿಜೆಪಿಯು ಅಧಿಕಾರದಿಂದ ಕೆಳಗಿಳಿಯಿತು ಮತ್ತು ಯುಪಿಎ ಮೈತ್ರಿಕೂಟವು ಸರ್ಕಾರ ರಚಿಸಿತು.

2024ರಲ್ಲಿ ಇದೇ ಫಲಿತಾಂಶ ಯಾಕೆ ಮರುಕಳಿಸಲಿಲ್ಲ? ಇದಕ್ಕೆ ಸೂಕ್ತ ಉತ್ತರವೊಂದನ್ನು ನೀಡಬಹುದು. ಅದೇನೆಂದರೆ, 2024ರಲ್ಲಿ ಚುನಾವಣಾ ಪ್ರಕ್ರಿಯೆಗಳ ಆರಂಭಿಕ ಹಂತದಲ್ಲಿಯೇ ಎನ್‌ಡಿಎ ಸ್ಥಿತಿ ಉತ್ತಮವಾಗಿತ್ತು. 2004ರಲ್ಲಿ ಈ ರೀತಿ ಆಗಿರಲಿಲ್ಲ. 1999ರಲ್ಲಿ 182 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿಯ ಜತೆಗೆ 23 ಪಕ್ಷಗಳನ್ನು ಎನ್‌ಡಿಎ ಅಡಿ ಒಗ್ಗೂಡಿಸಿ, ವಾಜಪೇಯಿ 2004ರಲ್ಲಿ ಚುನಾವಣೆಗೆ ಇಳಿದಿದ್ದರು. ಆದರೆ ಬಿಜೆಪಿಗೆ 44 ಸ್ಥಾನಗಳಷ್ಟು ನಷ್ಟವಾಯಿತು. 2019ರಲ್ಲಿ ಬಿಜೆಪಿ 303 ಸ್ಥಾನ ಗೆದ್ದಿತ್ತು, 2024ರಲ್ಲಿ ಸುಮಾರು 63 ಸ್ಥಾನಗಳನ್ನು ಕಳೆದುಕೊಂಡಿದೆ. ವಾಜಪೇಯಿ ಅವರಿದ್ದ ಬಿಜೆಪಿ ಮತ್ತು ಮೋದಿ ಅವರ ಈಗಿನ ಬಿಜೆಪಿಗೆ ಆದ ಹಿನ್ನಡೆ ಒಂದೇ ರೀತಿಯದ್ದು ಎಂಬುದನ್ನು ಇದು ಹೇಳುತ್ತದೆ.

## ವ್ಯತಿರಿಕ್ತ ಸತ್ಯಗಳು

**ಇದೇ ವೇಳೆಯಲ್ಲಿ** ಕೆಲವು ಪ್ರಶ್ನೆಗಳು ಹಾಗೆಯೇ ಉಳಿದುಬಿಡುತ್ತವೆ: ಹಾಗಾದರೆ, ಈಗ ಬಂದಿರುವ ಫಲಿತಾಂಶಕ್ಕಿಂತ ಭಿನ್ನವಾದ ಫಲಿತಾಂಶ ಬರುವ ಸಾಧ್ಯತೆ ಇತ್ತೇ? ಹಾಗಾದರೆ ಬಿಜೆಪಿಯನ್ನು ಅಧಿಕಾರದಿಂದ ಇಳಿಸಬಹುದಿತ್ತೇ? ಅರ್ಥವಿಲ್ಲದ ಪ್ರಶ್ನೆಗಳ ಕುರಿತು ಗಮನ ಕೇಂದ್ರೀಕರಿಸದೆ, ಫಲಿತಾಂಶವನ್ನು ತುಸು ಬೇರೆ ದೃಷ್ಟಿಕೋನದಿಂದ ನೋಡಲು ಮುಂದಾದರೆ, ಮೋದಿ ಅವರು ಸ್ವಲ್ಪದರಲ್ಲಿಯೇ ತಮ್ಮ ಸರ್ಕಾರವನ್ನು ಉಳಿಸಿಕೊಂಡರು ಎನ್ನುವ ವಾಸ್ತವಾಂಶ ತಿಳಿಯುತ್ತದೆ.

ಮೋದಿ ಅವರು ತಮ್ಮ ಸರ್ಕಾರವನ್ನು ಹೇಗೆ ಉಳಿಸಿಕೊಂಡರು ಎನ್ನುವ ಚರ್ಚೆಯನ್ನು ಚುನಾವಣಾ ಫಲಿತಾಂಶದಿಂದಲೇ ಆರಂಭಿಸೋಣ. 1 ಶೇಕಡಾವಾರು ಅಂಶಗಳಷ್ಟು ಮತಗಳೇನಾದರು ಎನ್‌ಡಿಎಗೆ ವಿರುದ್ಧವಾಗಿ ಬಿದ್ದಿದ್ದರೆ, ಮೈತ್ರಿಕೂಟವು (ಎನ್‌ಡಿಎ ವಿರುದ್ಧ ಬಿದ್ದ ಮತಗಳು ಅದರ ಮಿತ್ರಪಕ್ಷಗಳಿಗೆ ಅನುಕೂಲ ಮಾಡಿಕೊಟ್ಟಿವೆ) ಇನ್ನೂ 18 ಕ್ಷೇತ್ರಗಳನ್ನು ಕಳೆದುಕೊಳ್ಳುತ್ತಿತ್ತು. ಒಂದು ವೇಳೆ 1.5 ಶೇಕಡಾವಾರು ಅಂಶಗಳಷ್ಟು ಮತಗಳು ಎನ್‌ಡಿಎಗೆ ವಿರುದ್ಧವಾಗಿ ಬಿದ್ದಿದ್ದರೆ, ಅದು 261 ಕ್ಷೇತ್ರಗಳಲ್ಲಷ್ಟೇ ಗೆಲ್ಲಲು ಸಾಧ್ಯವಾಗುತ್ತಿತ್ತು ಮತ್ತು 'ಇಂಡಿಯಾ' ಮೈತ್ರಿಕೂಟಕ್ಕೆ 263 ಸ್ಥಾನಗಳು ದೊರಕುತ್ತಿದ್ದವು. ಒಂದು ವೇಳೆ, 2 ಶೇಕಡಾವಾರು ಅಂಶದಷ್ಟು ಹೆಚ್ಚು ಮತಗಳು ಎನ್‌ಡಿಎ ವಿರುದ್ಧವಾಗಿ ಚಲಾವಣೆಯಾಗಿದ್ದರೆ, ಎನ್‌ಡಿಎಗೆ 246 ಸ್ಥಾನಗಳಷ್ಟೇ ದೊರಕುತ್ತಿತ್ತು; ಇನ್ನಷ್ಟು ನಷ್ಟವನ್ನು ಬಿಜೆಪಿ ಎದುರಿಸಬೇಕಾಗುತ್ತಿತ್ತು. ಇದೇ ವೇಳೆ 'ಇಂಡಿಯಾ' ಮೈತ್ರಿಕೂಟಕ್ಕೆ 275ಕ್ಕಿಂತ ಹೆಚ್ಚಿನ ಸ್ಥಾನಗಳು ದೊರೆತು ಬಹುಮತ ಪಡೆದುಕೊಳ್ಳುತ್ತಿತ್ತು.

ಉತ್ತರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಬಿಹಾರ, ರಾಜಸ್ಥಾನ ಹಾಗೂ ಹರಿಯಾಣ ರಾಜ್ಯಗಳಲ್ಲಿ ಒಂದು ವೇಳೆ 2 ಶೇಕಡಾವಾರು ಅಂಶಗಳಷ್ಟು ಮತಗಳು ಎನ್‌ಡಿಎ ವಿರುದ್ಧ ಬಿದ್ದಿದ್ದರೆ, ಮೈತ್ರಿಕೂಟಕ್ಕೆ 260 ಸ್ಥಾನಗಳನ್ನಷ್ಟೇ ಪಡೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಇದಂತೂ ಬಹುಮತಕ್ಕಿಂತ ತೀರ ದೂರದ ಸಂಖ್ಯೆಯಾಗಿತ್ತು. ಆಗ ಬಿಜೆಪಿಯು 214 ಸ್ಥಾನಗಳನ್ನು ಪಡೆದುಕೊಳ್ಳುತ್ತಿತ್ತು ಮತ್ತು ಸರ್ಕಾರ ರಚಿಸಲು ಅದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ಬಿಜೆಪಿಯ ವಿರುದ್ಧ 1 ಶೇಕಡಾವಾರು ಅಂಶಗಳಷ್ಟು ಮತಪಲ್ಲಟ ನಡೆದಿದ್ದರೆ, ಇವೆಲ್ಲವೂ ಸಾಧ್ಯವಾಗುತ್ತಿತ್ತು.

**ಒಂದನ್ನಂತೂ ನೆನಪಿಟ್ಟುಕೊಳ್ಳಿ:** ಕೇವಲ 1 ಶೇಕಡಾವಾರು ಅಂಶಗಳಷ್ಟು ಮತಗಳ ಅಂತರದಲ್ಲಿ ಮೋದಿ ಅವರ ಬಿಜೆಪಿಯು ಹೀನಾಯವಾಗಿ ಸೋಲುವುದರಿಂದ ಪಾರಾಯಿತು. ಇಲ್ಲವಾಗಿದ್ದಲ್ಲಿ, ಬಿಜೆಪಿಯು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಬೇಕಾಗಿತ್ತು.

**ಇತಿಹಾಸಕಾರರು ಚರ್ಚಿಸಬೇಕಾದ ಮತ್ತು ನಮ್ಮೆಲ್ಲರ ಮುಂದಿರುವ ಪ್ರಶ್ನೆಗಳು:** ಶೇ 1ರಷ್ಟು ಮತಗಳು ಯಾವೆಲ್ಲಾ ಬದಲಾವಣೆಗಳನ್ನು ಮಾಡುತ್ತಿತ್ತು? ಮತಪಲ್ಲಟ ನಡೆಯಲಿದೆ ಎಂಬ ಸೂಚನೆ ಒದಗಿದ್ದು ಹೇಗೆ ಮತ್ತು ಇದನ್ನು ಬಿಜೆಪಿ ತಡೆದಿದ್ದು ಹೇಗೆ? ನಮಗೆ ಯಾರಿಗೂ ತಿಳಿಯದಿದ್ದದ್ದು (ನಾವು ಆ ಕುರಿತು ಯೋಜನೆ ಮಾಡದಂತೆ ಮಾಡಿದ್ದೂ ಇರಬಹುದು) ಬಿಜೆಪಿ ನಾಯಕರಿಗೆ ತಿಳಿದದ್ದು ಹೇಗೆ?

ಇದಕ್ಕೆ ನೀಡಬಹುದಾದ ಒಂದು ಉತ್ತರವೆಂದರೆ ಮೈತ್ರಿಕೂಟ ರಚನೆ. ನಿತೀಶ್ ಕುಮಾರ್ ಹಾಗೂ ಜಯಂತ್ ಚೌಧರಿ ಅವರಂಥವರೊಂದಿಗೆ ಬಿಜೆಪಿಯು ವಿಚಿತ್ರ ಮೈತ್ರಿ ಮಾಡಿಕೊಂಡದ್ದು, ಆಂಧ್ರದಲ್ಲಿ ಚಂದ್ರಬಾಬು ನಾಯ್ಡು ಅವರೊಂದಿಗೆ ಮೈತ್ರಿ ಮಾಡಿಕೊಂಡಿದ್ದು ಯಾಕೆ ಎಂಬುದು ಈಗ ಸಾಬೀತಾಗಿದೆ. ಜೊತೆಗೆ ಬಿಹಾರ ಹಾಗೂ ಮಹಾರಾಷ್ಟ್ರದಲ್ಲಿ ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಿಜೆಪಿ ಯಾಕಾಗಿ ಹಾತೊರೆಯಿತು ಎಂಬುದೂ ಈಗ ಗುಟ್ಟಲ್ಲ. ಈ ಮೈತ್ರಿಗಳು ಎನ್‌ಡಿಎಗೆ ಹೆಚ್ಚಿನ ಸ್ಥಾನಗಳನ್ನು ಮಾತ್ರ ತಂದುಕೊಡಲಿಲ್ಲ, ಬದಲಿಗೆ ಆಂಧ್ರ ಪ್ರದೇಶ, ಬಿಹಾರ, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶ ರಾಜ್ಯಗಳಲ್ಲಿ ಹೆಚ್ಚುವರಿ 10 ಕ್ಷೇತ್ರಗಳನ್ನು ಗೆಲ್ಲುವಲ್ಲಿಯೂ ಸಹಕಾರ ನೀಡಿತು. ಮತ್ತೊಂದೆಡೆ, ಟಿಎಂಸಿ ಹಾಗೂ ಕಾಂಗ್ರೆಸ್‌ನ ಜಗಳದ ಕಾರಣಕ್ಕಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಮೂರು ಸ್ಥಾನಗಳು ದೊರೆತವು. ಪ್ರಕಾಶ್ ಅಂಬೇಡ್ಕರ್ ಅವರ ವಿಬಿಎ ಕಾರಣದಿಂದ 4 ಹಾಗೂ ಅಸಾದುದ್ದೀನ್ ಓವೈಸಿ ಅವರ ಕಾರಣಕ್ಕಾಗಿ ಒಂದು ಸ್ಥಾನಗಳನ್ನು ಬಿಜೆಪಿ ಗೆಲ್ಲುವಂತಾಯಿತು.


### ಮಾಧ್ಯಮ ಮತ್ತು ಪಕ್ಷಪಾತ

ಶೇ 1ರಷ್ಟು ಮತಪಲ್ಲಟವನ್ನು ಬಿಜೆಪಿ ಹೇಗೆ ತಡೆಯಿತು ಎನ್ನುವ ಪ್ರಶ್ನೆಗೆ ಇನ್ನೊಂದು ಉತ್ತರವೂ ಇದೆ. ಈ ಬಾರಿಯ ಚುನಾವಣಾ ವರದಿಗಾರಿಕೆಯನ್ನು ಮಾಧ್ಯಮಗಳು ಪಕ್ಷಪಾತದಿಂದಲೇ ಮಾಡಿವೆ. ಊಹಿಸಿಕೊಳ್ಳಿ, ಒಂದು ವೇಳೆ ಮಾಧ್ಯಮಗಳು ತನ್ನ ವರದಿಗಾರಿಕೆಯನ್ನು ತುಸು ಕಡಿಮೆ ಪಕ್ಷಪಾತ ಧೋರಣೆಯಿಂದ ಮಾಡಿದ್ದಿದ್ದರೆ?

ಲೋಕನೀತಿ–ಸಿಎಸ್‌ಡಿಎಸ್ ಸಂಸ್ಥೆಗಳು ನಡೆಸಿದ ಚುನಾವಣೋತ್ತರ ಸಮೀಕ್ಷೆಯಂತೆ ದೇಶದಲ್ಲಿ ಶೇ 83ರಷ್ಟು ಮತದಾರರ ಮನೆಗಳಲ್ಲಿ ಟಿ.ವಿ ಇದೆ. ಶೇ 66ರಷ್ಟು ಮತದಾರರು ಪ್ರತಿನಿತ್ಯವೂ ಅಥವಾ ಕೆಲವೊಮ್ಮೆ ಸುದ್ದಿ ವಾಹಿನಿಗಳನ್ನು ವೀಕ್ಷಿಸುತ್ತಾರೆ. ಶೇ 47ರಷ್ಟು ಜನರು ಮಾಹಿತಿಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಪಡೆಯುತ್ತಾರೆ. ಆದರೆ, 'ಒಂದು ಅಥವಾ ಮತ್ತೊಂದು ಗೋದಿ ಮೀಡಿಯಾದಿಂದ ನಾವು ಚುನಾವಣೆಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯುತ್ತೇವೆ' ಎಂದು ಶೇ 66 ಜನರಲ್ಲಿ ಬಹುತೇಕರು ಅಭಿಪ್ರಾಯಪಟ್ಟಿದ್ದಾರೆ.

ಮೋದಿ ಸರ್ಕಾರದ ಕುರಿತು ಈ ಮಾಧ್ಯಮಗಳು ನಿಷ್ಪಕ್ಷಪಾತವಾಗಿ ವರದಿ ಮಾಡಿದ್ದರೆ ಏನಾಗುತ್ತಿತ್ತು ಎಂದು ಊಹಿಸಿಕೊಳ್ಳಿ. ಪ್ರಭುತ್ವದ ಕುರಿತು ಸತ್ಯ ಹೇಳುವುದು ಬಿಡಿ, ಕೊನೆಯ ಪಕ್ಷ ಆಡಳಿತ ಪಕ್ಷದ ಪರವಾಗಿ ಪ್ರಚಾರ ಮಾಡದೆ ಇದ್ದಿದ್ದರೆ, ಮಹಾಪ್ರಭುವಿನ ಸಂದರ್ಶನವನ್ನಾದರೂ ಸರಿಯಾಗಿ ಮಾಡಿದ್ದರೆ? ಅಥವಾ ಈ ಬಾರಿಯ ಚುನಾವಣೆಯು ಏಕಪಕ್ಷೀಯವಾಗಿ ಇರಲಿಲ್ಲ, ಬದಲಿಗೆ ತೀವ್ರ ಸ್ಪರ್ಧೆಯಿಂದ ಕೂಡಿದೆ ಎನ್ನುವ ಸತ್ಯವನ್ನಾದರೂ ವರದಿ ಮಾಡಿದ್ದರೆ?

ಸರ್ಕಾರದ ಪರ ಪ್ರಚಾರ ನಡೆಸುವ ಸುದ್ದಿ ವಾಹಿನಿಗಳನ್ನು ನೋಡುವ 66 ಜನರಲ್ಲಿ ಒಬ್ಬರಾದರೂ ತಮ್ಮ ಮನಸ್ಸನ್ನು ಬದಲಿಸಿಕೊಂಡಿದ್ದರೆ, ಮಹಾಪ್ರಭು ಇವತ್ತು ವಿರೋಧ ಪಕ್ಷದ ನಾಯಕನಾಗಿ ಇರುತ್ತಿದ್ದರು.



## ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿ ಸಮಾರಂಭ ಜೂನ್ 28ಕ್ಕೆ ನಡೆಯಲಿದೆ. ಇದೀಗ 'ಜನಮೆಚ್ಚಿದ ನಟಿ' ವಿಭಾಗದಲ್ಲಿರುವ ನಟಿಯರನ್ನು ಪರಿಚಯಿಸುವ ಸಮಯ. ನಿಮ್ಮ ನೆಚ್ಚಿನ ನಟಿಯರಿಗೆ ವೋಟ್ ಮಾಡಲು ಈ ಲಿಂಕ್‌ಗೆ ಲಾಗ್‌ಇನ್ ಆಗಿ: bit.ly/prajavanicinesammanS2





'ಕೌಸಲ್ಯಾ ಸುಪ್ರಜಾ ರಾಮ' ಚಿತ್ರದಲ್ಲಿನ ನಟನೆಗಾಗಿ **ಮಿಲನ ನಾಗರಾಜ್** ನಾಮನಿರ್ದೇಶನಗೊಂಡಿದ್ದಾರೆ. 'ನಮ್ ದುನಿಯಾ ನಮ್ ಸ್ಟೈಲ್' ಚಿತ್ರದ ಮುಖಾಂತರ ನಾಯಕಿಯಾಗಿ ತಮ್ಮ ಸಿನಿಪಯಣ ಆರಂಭಿಸಿದ ಮಿಲನ, 'ಲವ್ ಮಾಕ್ಟೇಲ್' ಚಿತ್ರದ 'ನಿಧಿಮಾ'ಳಾಗಿ ಜನಪ್ರಿಯರಾದರು. ಇದು ಅವರ ಸಿನಿಪಯಣಕ್ಕೆ ತಿರುವು ನೀಡಿದ ಚಿತ್ರ. 'ಲವ್ ಮಾಕ್ಟೇಲ್–2', 'ಕೌಸಲ್ಯಾ ಸುಪ್ರಜಾ ರಾಮ', 'ಲವ್ ಬರ್ಡ್ಸ್', 'ಫಾರ್ ರಿಜಿಸ್ಟ್ರೇಷನ್' ಸಿನಿಮಾಗಳಲ್ಲಿ ತಮ್ಮ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಿರುವ ಅವರು ಸದ್ಯ, 'ಆರಾಮ್ ಅರವಿಂದ ಸ್ವಾಮಿ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.



'ಸಪ್ತ ಸಾಗರದಾಚೆ ಎಲ್ಲೋ–Side A' ಚಿತ್ರದಲ್ಲಿನ ನಟನೆಗಾಗಿ **ರುಕ್ಮಿಣಿ ವಸಂತ್** ನಾಮನಿರ್ದೇಶನಗೊಂಡಿದ್ದಾರೆ. ಲಂಡನ್‌ನ 'ರಾಯಲ್ ಅಕಾಡೆಮಿ ಆಫ್ ಡ್ರಾಮಾಟಿಕ್ ಆರ್ಟ್ಸ್'ನಲ್ಲಿ ತರಬೇತಿ ಪಡೆದು ಸಿನಿಮಾ ಕ್ಷೇತ್ರಕ್ಕೆ ಧುಮುಕಿದ್ದ ರುಕ್ಮಿಣಿ 'ಬೀರ್‌ಬಲ್' ಬೆಡಗಿಯಾಗಿ ಚಂದನವನ ಪ್ರವೇಶಿಸಿದರು. ರುಕ್ಮಿಣಿ ವಸಂತ್‌ಗೆ ಚಿತ್ರರಂಗದಲ್ಲಿ ಬ್ರೇಕ್ ನೀಡಿದ್ದು 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರ. ತಮ್ಮ ಸಹಜ ನಟನೆಯಿಂದ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದಲ್ಲಿ 'ಪ್ರಿಯಾ' ಎಂಬ ಪಾತ್ರಕ್ಕೆ ರುಕ್ಮಿಣಿ ಜೀವತುಂಬಿದ್ದರು. ಇದೀಗ ಶ್ರೀಮುರಳಿಯ 'ಬಘೀರ', ಶಿವರಾಜ್‌ಕುಮಾರ್ ಅವರ 'ಭೈರತಿ ರಣಗಲ್' ಸಿನಿಮಾದಲ್ಲಿ ನಟಿಸಿದ್ದಾರೆ. ಇದಲ್ಲದೆ ಬಹುಭಾಷಾ ನಟ ವಿಜಯ್ ಸೇತುಪತಿ ಅವರೊಂದಿಗೆ ತೆರೆಹಂಚಿಕೊಳ್ಳಲು ಸಜ್ಜಾಗಿದ್ದಾರೆ.



'ಪಿಂಕಿ ಎಲ್ಲಿ?' ಚಿತ್ರದ ನಟನೆಗಾಗಿ **ಅಕ್ಷತಾ ಪಾಂಡವಪುರ** ನಾಮನಿರ್ದೇಶನಗೊಂಡಿದ್ದಾರೆ. ಕಾಲೇಜು ವಿದ್ಯಾಭ್ಯಾಸದ ನಂತರ ನೀನಾಸಂನಲ್ಲಿ ರಂಗ ತರಬೇತಿ ಪಡೆದು, ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್‌ಎಸ್‌ಡಿ)ಯಲ್ಲಿ ಮೂರು ವರ್ಷ ರಂಗಭೂಮಿಯಲ್ಲಿ ಹೆಚ್ಚುವರಿ ತರಬೇತಿ ಪಡೆದರು. 'ಪಲ್ಲಟ' ಚಿತ್ರದಲ್ಲಿನ ನಟನೆಗೆ 'ರಾಜ್ಯ ಪ್ರಶಸ್ತಿ' ಲಭಿಸಿದೆ. 'ಆ ಒಂದು ನೋಟು', 'ಪಿಂಕಿ ಎಲ್ಲಿ?', 'ಕೋಳಿ ಎಸ್ರು' ಸೇರಿದಂತೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದು, ನಟನೆಗಾಗಿ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ವೋಟ್ ಮಾಡಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದಲ್ಲಿನ ನಟನೆಗಾಗಿ **ಸಿರಿ ರವಿಕುಮಾರ್** ನಾಮನಿರ್ದೇಶನಗೊಂಡಿದ್ದಾರೆ. 'ಸಕುಟುಂಬ ಸಮೇತ' ಚಿತ್ರದ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡ ಸಿರಿ, ಆರ್‌ಜೆ, ರೂಪದರ್ಶಿ, ನಿರೂಪಕಿಯಾಗಿ ಕೆಲಸ ಮಾಡಿದ್ದಾರೆ. ರಂಗಭೂಮಿಯಲ್ಲೂ ಸಕ್ರಿಯವಾಗಿರುವ ಸಿರಿ, ರಾಜ್ ಬಿ.ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದಲ್ಲಿ 'ಪ್ರೇರಣಾ' ಎಂಬ ಪಾತ್ರ ನಿರ್ವಹಿಸಿದ್ದರು. 'ಬ್ಯಾಚುಲರ್ ಪಾರ್ಟಿ', 'O2' ಸಿನಿಮಾಗಳ ಬಳಿಕ, 'ಆಬ್ರಕಡಾಬ್ರ', 'ಬಿಸಿಬಿಸಿ Ice-Cream' ಚಿತ್ರಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.



'ಟೋಬಿ' ಸಿನಿಮಾದಲ್ಲಿನ ನಟನೆಗಾಗಿ **ಚೈತ್ರಾ ಜೆ.ಆಚಾರ್** ನಾಮನಿರ್ದೇಶನಗೊಂಡಿದ್ದಾರೆ. 'ಬೆಂಗಳೂರು ಕ್ವೀನ್ಸ್' ಎಂಬ ವೆಬ್‌ಸರಣಿಯಲ್ಲಿ 'ಸೈಲೆಂಟ್ ಸ್ವಾತಿ'ಯಾಗಿ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟ ಇವರು, 'ಮಹಿರ' ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. ಬಳಿಕ 'ತಲೆದಂಡ', 'ಆದೃಶ್ಯ', 'ಗಿಲ್ಕಿ' ಹೀಗೆ ಸಾಲು ಸಾಲು ಸಿನಿಮಾಗಳು ಚೈತ್ರಾ ಕೈಹಿಡಿದವು. 2023ರಲ್ಲಿ ಅವರ ನಟನೆಯ 'ಟೋಬಿ', 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾಗಳು ಬಿಡುಗಡೆಗೊಂಡವು. 'ಬ್ಲಿಂಕ್' ಚಿತ್ರದ ಬಳಿಕ ಸದ್ಯ ಧನಂಜಯ ನಟನೆಯ 'ಉತ್ತರಕಾಂಡ' ಸಿನಿಮಾದಲ್ಲಿ ನಟಿಸುತ್ತಿದ್ದಾರೆ.



ನಟಿ, ನಿರ್ದೇಶಕಿ **ಸಿಂಧು ಶ್ರೀನಿವಾಸಮೂರ್ತಿ** 'ಆಚಾರ್ ಆ್ಯಂಡ್ ಕೋ.' ಚಿತ್ರದಲ್ಲಿನ ನಟನೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ತಮ್ಮ 16ನೇ ವಯಸ್ಸಿನಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಇವರು, 'ಫ್ರೆಂಚ್ ಬಿರಿಯಾನಿ', ತೆಲುಗಿನ 'ಸಿನಿಮಾ ಬಂಡಿ' ಮೊದಲಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ವೆಬ್‌ಸೀರೀಸ್, ಜಾಹೀರಾತುಗಳಲ್ಲಿ ನಟಿಸಿದ್ದಾರೆ. ಸದ್ಯ ಆಕರ್ಷ್ ಎಚ್.ಪಿ. ನಿರ್ದೇಶನದ 'ಫ್ಯಾಮಿಲಿ ಡ್ರಾಮಾ' ಚಿತ್ರದಲ್ಲಿ ಸಿಂಧು ನಟಿಸುತ್ತಿದ್ದಾರೆ.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 19 2024

**ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ದ್ವಾದಶಿ ಗಂ. 7-29 ನಕ್ಷತ್ರ: ವಿಶಾಖಾ ಗಂ. 17-23 ಯೋಗ: ಸಿದ್ಧ ಗಂ. 21-12 ಕರಣ: ಬಾಲವ ಗಂ. 07-29, ಮಿಥುನ ಮಾಸದ ನೇ 05 ದಿನ, ಮಳೆನಕ್ಷತ್ರ: ಮೃಗಶಿರ 4.

ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-08 ಸೂರ್ಯಾಸ್ತ : 06-56

ಮುಸ್ಲಿಂ ದಿನಾಂಕ : 12 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 3, 4

**ಮೇಷ:** ಸಂಪೂರ್ಣ ಜ್ಞಾನವನ್ನು ಹೊಂದದೆ ವಾದಿಸಿದ ವಿಷಯದಲ್ಲಿ ಹಾಸ್ಯಾಸ್ಪದರಾಗಬಹುದು. ವಸ್ತ್ರ ವಿನ್ಯಾಸ, ಚಿತ್ರಕಲೆ, ಕಥೆ-ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ.

**ವೃಷಭ:** ಸಂದರ್ಭವನ್ನು ನೋಡಿಕೊಂಡು ಮನೋಭಿಲಾಷೆಯ ಬೇಡಿಕೆಯನ್ನು ಅಧಿಕಾರಿಗಳ ಮುಂದಿಡುವುದರಿಂದ ಈಡೇರುತ್ತದೆ. ಮುಗ್ಧ ವರ್ತನೆಯಿಂದಾಗಿ ಹಲವರಿಗೆ ಸಹಾಯವಾಗುವುದು.

**ಮಿಥುನ:** ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಅಥವಾ ವ್ಯವಹಾರದಲ್ಲಿನ ಪಾಲುದಾರಿಕೆಯ ಸಲುವಾಗಿ ಚರ್ಚಿಸಬಹುದು. ಸಹವರ್ತಿಗಳ ಜತೆಯಲ್ಲಿ ಉತ್ತಮ ಸಂಪರ್ಕ ಬೆಳೆಸಿಕೊಳ್ಳುವುದು ಸಾಧ್ಯವಾಗುವುದು.

**ಕರ್ಕಾಟಕ:** ಕೆಲವು ವಿಷಯಗಳು ಬೇಸರ ಹುಟ್ಟಿಸಿದರೂ ಪ್ರೀತಿ ಪಾತ್ರರೊಂದಿಗೆ ಕಳೆಯುವ ಸಮಯ ಲವಲವಿಕೆ ಮೂಡಿಸುತ್ತದೆ. ರುದ್ರಾರಾಧನೆಯಿಂದಾಗಿ ಬಯಸಿದ ದ್ರವ್ಯವು ಶೀಘ್ರ ಪ್ರಾಪ್ತಿಯಾಗುತ್ತದೆ.

**ಸಿಂಹ:** ಪ್ರಮುಖ ಗುರಿ ಸಾಧನೆಗಳಿಗೆ ಕುಟುಂಬ ವರ್ಗದವರಿಂದ ಒಳ್ಳೆಯ ಬೆಂಬಲ ಸಿಗುವುದು. ಮಲ್ಲಿಕಾರ್ಜುನನ ಅನುಗ್ರಹ ಸಂಪಾದಿಸಿದಲ್ಲಿ ಮತ್ತಷ್ಟು ಉತ್ತಮ ಫಲಗಳನ್ನು ಅನುಭವಿಸುವ ಯೋಗವಿದೆ.

**ಕನ್ಯಾ:** ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವ ಪ್ರಯತ್ನದಿಂದಾಗಿ ಹಾಗೂ ಸರಳ ಜೀವನವನ್ನು ನಡೆಸುವುದರಿಂದಾಗಿ ಶ್ರೀಮಂತಿಕೆ ಗಳಿಸಬಹುದು. ರುಚಿಸದ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಹೋಗದಿರಿ.

**ತುಲಾ:** ಹುಡುಕಾಟದಲ್ಲಿ ಸತತ ಪ್ರಯತ್ನದಿಂದ ಕಳೆದು ಹೋಗಿದ್ದ ವಸ್ತುಗಳು ಸಿಕ್ಕಿ ಮನಸ್ಸಿಗೆ ಸಮಾಧಾನವಾಗುವುದು. ಸಾಂಸಾರಿಕವಾಗಿ ಅಭಿವೃದ್ಧಿಯ ವಿಷಯದಲ್ಲಿ ಶುಭ ವಾರ್ತೆ ಕೇಳುವಿರಿ.

**ವೃಶ್ಚಿಕ:** ಕೃಷಿಕರು ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸುವ ಅವಕಾಶ ಬರಲಿದೆ. ಪೂರಕವಾದ ವಾತಾವರಣ ನಿರ್ಮಾಣವಾಗುವುದು. ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು.

**ಧನು:** ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಂತೋಷ ಇಮ್ಮಡಿಗೊಳ್ಳಲಿದೆ. ನಿಷ್ಠೆ ಹಾಗೂ ಬುದ್ಧಿವಂತಿಕೆಗೆ ಒಳ್ಳೆಯ ಪ್ರತಿಫಲ ಸಿಗಲಿದೆ. ಮಾಡಿದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯಾಗುವ ಯೋಗವಿದೆ.

**ಮಕರ:** ವೃತ್ತಿ ಜೀವನದಲ್ಲಿ ಧೈರ್ಯದಿಂದ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ನ್ಯಾಯಾಲಯದ ಮೊರೆ ಹೋಗುವಂಥ ಕೃತ್ಯಗಳು ನಡೆಯಲಿದೆ.

**ಕುಂಭ:** ಸಣ್ಣ ಸಣ್ಣ ವಿಚಾರಗಳನ್ನು ದೊಡ್ಡದು ಮಾಡುವ ಮನಸ್ಥಿತಿಯನ್ನು ತಕ್ಷಣದಲ್ಲಿಯೇ ಬದಲಾಯಿಸಿಕೊಳ್ಳುವುದು ಉತ್ತಮ. ವಿದ್ಯಾಭ್ಯಾಸದಲ್ಲಿ ನಿರೀಕ್ಷೆಗೂ ಮೀರಿದ ಫಲಿತಾಂಶವನ್ನು ಹೊಂದುತ್ತೀರಿ.

**ಮೀನ:** ಮುಂದಾಲೋಚನೆ ಇಲ್ಲದೆ ಶುರುಮಾಡಿದ ಕಾರ್ಯವು ಅನಿರೀಕ್ಷಿತ ಫಲವನ್ನು ಕೊಡುವುದರಿಂದ ಸಂತೋಷ ಹೊಂದುವಿರಿ. ಕೆಲಸಗಳು ಮಂದಗತಿಯಲ್ಲಿ ಸಾಗಲಿವೆ.

## ಪದಬಂಧ 5716


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಇತರರನ್ನು ಅವಲಂಬಿಸದೇ ಇರುವುದು (5)
3.ಬಣವೆ ಒಡ್ಡುವಾಗ ಪಟ್ಟಿರುವ ತೊಂದರೆ (3)
5.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವಿಕೆ (5)
7.ಒರೆಗಲ್ಲು ಇಲ್ಲಿದೆ (3)
9.ಕಬ್ಬಿಣದ ಭಾರೀ ಪೆಟ್ಟಿಗೆ (3)
11.ದೇವರನ್ನಿಡುವ ವಿಶೇಷ ಗೂಡಿನ ರಚನೆ (3)
13.ಬಿಳಿಯ ಕೂದಲುಳ್ಳವನು (5)
15.ಕೆಚ್ಚು ಇಲ್ಲಿ ಕಾಣುತ್ತಿದೆ (3)
16.ಒಂದು ಸ್ಥಳಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಕಥೆ (5)

**ಮೇಲಿಂದ ಕೆಳಕ್ಕೆ**

1.ಆತ್ಮಾಭಿಮಾನವುಳ್ಳವನೀತ (4)
2.ಸ್ಲೇಟಿನ ಮೇಲೆ ಬರೆಯುವ ಸಾಧನ (3)
4.ವನದಲ್ಲಿರುವ ಬಟ್ಟೆ (3)
6.ನೋಡುಗ ಇಲ್ಲಿದ್ದಾನೆ (3)
8.ಕಮರಿಯೊಳಗಿರುವ ಅನೆ (2)
9.ತರ್ಕದಲ್ಲಿ ಕೊನೆಗೊಂಡಿರುವ ಮಾತುಕತೆ (3)
10.ಪಿತೂರಿಗೊಂದು ಪರ್ಯಾಯ ಪದ (2)
12.ಇದು ಪಶ್ಚಿಮ ದಿಕ್ಕು (4)
13.ಪಾಸು ಇದ್ದರೂ ತೇರ್ಗಡೆಯಾಗದಿರುವಿಕೆ! (3)
14.ಸಾಗರದ ಹತ್ತಿರವಿರುವ ನಂಜು (3)




### 5715ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಚದುರಂಗ 3.ಮಮಕಾರ
5.ಯಾಚಕ 6.ಸದಾಚಾರ
8.ರಸಪೂರ್ಣ 10.ನವರಂಗ
12.ಮರಕತ 13.ಜಾತಕ
16.ಷಡಾನನ 17.ದಸಕತ್ತು

**ಮೇಲಿಂದ ಕೆಳಕ್ಕೆ**
1.ಚಟ್ಟ 2.ಗಡಿಯಾರ
3.ಮಧುಕರ 4.ರಫ್ತು
7.ದಾನವ 9.ಪೂರ್ವಿಕ
11.ಗಜಾನನ 12.ಮಕರಂದ
14.ವಿಷ 15.ತುತ್ತು

## ಸುಡೊಕು 6101

| | | | | | | | | |
|---|---|---|---|---|---|---|---|---|
| 6 | | 4 | | 9 | | 1 | | 8 |
| 9 | 1 | | | 3 | | | 6 | |
| | | 7 | 4 | | 1 | 3 | | 9 |
| 2 | 9 | | | | 4 | 6 | | |
| 1 | 4 | | | | | | 3 | |
| | | | | | | | 9 | 4 |
| 3 | | 9 | | | 5 | | 7 | |
| | 8 | | | 1 | | 9 | | 3 |
| 4 | | 1 | 3 | | 9 | | 8 | |


### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6100 ಸುಡೊಕು

| | | | | | | | | |
|---|---|---|---|---|---|---|---|---|
| 3 | 4 | 8 | 2 | 7 | 9 | 6 | 5 | 1 |
| 9 | 6 | 1 | 5 | 8 | 3 | 2 | 7 | 4 |
| 5 | 7 | 2 | 1 | 6 | 4 | 3 | 9 | 8 |
| 6 | 9 | 4 | 7 | 3 | 5 | 1 | 8 | 2 |
| 2 | 8 | 5 | 6 | 9 | 1 | 7 | 4 | 3 |
| 1 | 3 | 7 | 4 | 2 | 8 | 9 | 6 | 5 |
| 8 | 5 | 9 | 3 | 1 | 6 | 4 | 2 | 7 |
| 7 | 1 | 6 | 8 | 4 | 2 | 5 | 3 | 9 |
| 4 | 2 | 3 | 9 | 5 | 7 | 8 | 1 | 6 |

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 23,465 |
| ಇಂದಿನ ಅಂತ್ಯ | 23,557 |
| ▲ | 92 |
| ದಿನದ ಗರಿಷ್ಠ | 23,579 |

## ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹307-476

ದ್ವಿತಳಿ (ಬಿ.ವಿ) ₹333-696

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

| | |
|---|---|
| 100ಕ್ಕೆ | ₹555 |
| 12 ಕ್ಕೆ | ₹75 |

ಮೈಸೂರು

| | |
|---|---|
| 100ಕ್ಕೆ | ₹557 |

## ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹200

ಆರ್‌ಎಸ್‌ಎಸ್-5 ₹192

ಗುಡ್ ಲಾಟ್ ₹180

(ಪ್ರತಿ ಕೆ.ಜಿಗೆ)

# ಹೊಸ ಎತ್ತರಕ್ಕೆ ಜಿಗಿದ ಷೇರುಪೇಟೆ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಇನ್ಫೊಸಿಸ್ ಷೇರುಗಳ ಖರೀದಿಯಿಂದಾಗಿ ಮಂಗಳವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಹೊಸ ಎತ್ತರಕ್ಕೆ ಜಿಗಿದಿವೆ.

ವಿದೇಶಿ ಬಂಡವಾಳ ಒಳಹರಿವು ಹೆಚ್ಚಳ ಕೂಡ ಹೂಡಿಕೆದಾರರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಿಯಾಲ್ಟಿ, ಗ್ರಾಹಕರ ಬಳಕೆಯ ವಸ್ತುಗಳು ಮತ್ತು ಯುಟಿಲಿಟಿ ಷೇರುಗಳ ಖರೀದಿಯು ಷೇರುಪೇಟೆಗಳ ಏರಿಕೆಗೆ ವರದಾನವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 308 ಅಂಶ ಏರಿಕೆ ಕಂಡು, 77,301 ಅಂಶಗಳಿಗೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 92 ಅಂಶ ಏರಿಕೆ ಕಂಡು, 23,557 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಪವರ್‌ಗ್ರಿಡ್, ವಿಪ್ರೊ, ಐಸಿಐಸಿಐ ಬ್ಯಾಂಕ್, ಟೈಟನ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ಎಸ್‌ಬಿಐ ಗಳಿಕೆ ಕಂಡಿವೆ.

## ಮಹಾಪತನ: ತನಿಖೆಗೆ ಒತ್ತಾಯ

ಮುಂಬೈ (ಪಿಟಿಐ): ಲೋಕಸಭಾ ಚುನಾವಣೆಯ ಫಲಿತಾಂಶದ ದಿನದಂದು ಷೇರು ಸೂಚ್ಯಂಕಗಳು ಮಹಾಪತನ ಕಂಡಿದ್ದು, ಈ ಕುರಿತು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನಿಖೆ ನಡೆಸಬೇಕು ಎಂದು ತೃಣಮೂಲ ಕಾಂಗ್ರೆಸ್‌ನ ಸಂಸದರ ನಿಯೋಗ ಒತ್ತಾಯಿಸಿದೆ.

ಈ ಕುರಿತು ಸೆಬಿಯ ಅಧಿಕಾರಿಗಳಿಗೆ ನಿಯೋಗವು ಮನವಿ ಸಲ್ಲಿಸಿದೆ.

ಫಲಿತಾಂಶದ ಹಿಂದಿನ ದಿನದಂದು ಏರಿಕೆಯಾಗಿದ್ದ ಸೂಚ್ಯಂಕಗಳು, ಮರುದಿನ ಕುಸಿತ ಕಂಡಿವೆ. ಇದರಿಂದ ಸಣ್ಣ ಹೂಡಿಕೆದಾರರು ₹30 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ರಾಜಕೀಯ ನಾಯಕರು ಇದರಿಂದ ಕೋಟ್ಯಂತರ ಹಣ ಸಂಪಾದಿಸಿದ್ದಾರೆ ಎಂದು ಸಂಸದ ಕಲ್ಯಾಣ್ ಬ್ಯಾನರ್ಜಿ ದೂರಿದ್ದಾರೆ.

ನಿಯೋಗದಲ್ಲಿ ಟಿಎಂಸಿ ಸಂಸದರಾದ ಕಲ್ಯಾಣ್ ಬ್ಯಾನರ್ಜಿ, ಸಾಗರಿಕಾ ಘೋಷ್, ಸಾಕೇತ್ ಗೋಖಲೆ, ಶಿವಸೇನಾ (ಯುಬಿಟಿ) ಸಂಸದ ಅರವಿಂದ್ ಸಾವಂತ್ ಇದ್ದರು.

### ರಣವೀರ್ ಸಿಂಗ್ ದ್ವಿತೀಯ; ಶಾರುಕ್‌ಗೆ ತೃತೀಯ ಸ್ಥಾನ

# ಕೊಹ್ಲಿ ಜನಪ್ರಿಯ ಸೆಲೆಬ್ರಿಟಿ

ಮುಂಬೈ (ಪಿಟಿಐ): ಕ್ರೋಲ್ಸ್ ಕನ್ಸಲ್ಟೆನ್ಸಿ ಸಂಸ್ಥೆಯು ಪ್ರಕಟಿಸಿರುವ 2023ನೇ ಸಾಲಿನ ಬ್ರ್ಯಾಂಡ್ ಮೌಲ್ಯ ಆಧರಿಸಿದ ವರದಿ ಪ್ರಕಾರ, ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರು ಜನಪ್ರಿಯತೆಯಲ್ಲಿ ದೇಶದ ಅತಿದೊಡ್ಡ ಸೆಲೆಬ್ರಿಟಿ ಆಗಿ ಹೊರಹೊಮ್ಮಿದ್ದಾರೆ.

ಬಾಲಿವುಡ್ ನಟ ರಣವೀರ್ ಸಿಂಗ್ ಅವರನ್ನು ಹಿಂದಿಕ್ಕಿರುವ ಅವರು, ಮರಳಿ ಅಗ್ರಸ್ಥಾನ ಪಡೆದಿದ್ದಾರೆ. ಈ ಪಟ್ಟಿಯಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಮೂರನೇ ಸ್ಥಾನದಲ್ಲಿದ್ದಾರೆ.

2020ನೇ ಸಾಲಿನಲ್ಲಿ ಕೊಹ್ಲಿ ಅವರ ಬ್ರ್ಯಾಂಡ್ ಮೌಲ್ಯ ₹2,000 ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಬ್ರ್ಯಾಂಡ್ ಮೌಲ್ಯದಲ್ಲಿ ಕೊಂಚ ಇಳಿಕೆಯಾಗಿದ್ದು, ₹1,900 ಕೋಟಿ ಆಗಿದೆ.

2022ರಲ್ಲಿ ಕೊಹ್ಲಿ ₹1,474 ಕೋಟಿ ಬ್ರ್ಯಾಂಡ್ ಮೌಲ್ಯ ಹೊಂದಿದ್ದರು. ಒಂದೇ ವರ್ಷದಲ್ಲಿ ಮೌಲ್ಯದಲ್ಲಿ ಶೇ 29ರಷ್ಟು ಜಿಗಿತ ಕಂಡಿದ್ದು, ದುಬಾರಿ ತಾರೆ ಎನಿಸಿಕೊಂಡಿದ್ದಾರೆ. ಎರಡನೇ ಸ್ಥಾನದಲ್ಲಿರುವ ರಣವೀರ್ ಸಿಂಗ್ ಅವರ ಬ್ರ್ಯಾಂಡ್ ಮೌಲ್ಯ ₹1,692 ಕೋಟಿ ಆಗಿದೆ.


ವಿರಾಟ್ ಕೊಹ್ಲಿ


ರಣವೀರ್ ಸಿಂಗ್


ಶಾರುಕ್ ಖಾನ್

ನಟ ಶಾರುಕ್ ಖಾನ್ ₹1,000 ಕೋಟಿ ಬ್ರ್ಯಾಂಡ್ ಮೌಲ್ಯ ಹೊಂದಿದ್ದಾರೆ. 2022ರಲ್ಲಿ ₹464 ಕೋಟಿ ಬ್ರ್ಯಾಂಡ್ ಮೌಲ್ಯ ಹೊಂದಿದ್ದ ಅವರು, 10ನೇ ಸ್ಥಾನದಲ್ಲಿದ್ದರು.

ನಟ ಅಕ್ಷಯ್ ಕುಮಾರ್ ₹930 ಕೋಟಿ ಮೌಲ್ಯದೊಂದಿಗೆ ನಾಲ್ಕನೇ ಸ್ಥಾನ ಹಾಗೂ ₹842 ಕೋಟಿ ಮೌಲ್ಯದೊಂದಿಗೆ ನಟಿ ಆಲಿಯಾ ಭಟ್ ಐದನೇ ಸ್ಥಾನ ಪಡೆದಿದ್ದಾರೆ.

ನಟಿ ದೀಪಿಕಾ ಪಡುಕೋಣೆ ₹800 ಕೋಟಿ ಮೌಲ್ಯ ಹೊಂದಿದ್ದು, ಆರನೇ ಸ್ಥಾನ ಪಡೆದಿದ್ದಾರೆ. ಈ ಮೂವರು 2022ಕ್ಕೆ ಹೋಲಿಸಿದರೆ ತಲಾ ಒಂದೊಂದು ಸ್ಥಾನ ಇಳಿಕೆ ಕಂಡಿದ್ದಾರೆ.

ನಿವೃತ್ತ ಕ್ರಿಕೆಟಿಗ ಎಂ.ಎಸ್. ದೋನಿ ₹798 ಕೋಟಿ (7ನೇ ಸ್ಥಾನ) ಹಾಗೂ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ₹760 ಕೋಟಿ ಬ್ರ್ಯಾಂಡ್ ಮೌಲ್ಯ ಹೊಂದಿದ್ದಾರೆ (8ನೇ ಸ್ಥಾನ).

ನಟ ಸಲ್ಮಾನ್ ಖಾನ್ ₹680 ಕೋಟಿ ಬ್ರ್ಯಾಂಡ್ ಮೌಲ್ಯದೊಂದಿಗೆ 10ನೇ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. 25 ಸೆಲೆಬ್ರಿಟಿಗಳ ಪೈಕಿ ನಟಿಯರಾದ ಕಿಯಾರ ಅಡ್ವಾಣಿ 12ನೇ ಸ್ಥಾನ ಹಾಗೂ ಕತ್ರಿನಾ ಕೈಫ್ 25ನೇ ಸ್ಥಾನದಲ್ಲಿದ್ದಾರೆ.

ದೇಶದ ಪ್ರಮುಖ 25 ಸೆಲೆಬ್ರಿಟಿಗಳ ಮೌಲ್ಯ ₹15,832 ಕೋಟಿ ಆಗಿದೆ. ಇದರ ಹಿಂದಿನ ವರ್ಷಕ್ಕಿಂತ ಶೇ 15.5ರಷ್ಟು ಏರಿಕೆಯಾಗಿದೆ.

# ನೇರ ತೆರಿಗೆ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ 2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜೂನ್ 17ರ ವರೆಗೆ ₹4.62 ಲಕ್ಷ ಕೋಟಿ ನೇರ ತೆರಿಗೆ ನಿವ್ವಳ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸಂಗ್ರಹದಲ್ಲಿ ಶೇ 21ರಷ್ಟು ಹೆಚ್ಚಳವಾಗಿದೆ ಎಂದು ಆದಾಯ ತೆರಿಗೆ ಇಲಾಖೆಯು ಮಂಗಳವಾರ ತಿಳಿಸಿದೆ.




ಜೂನ್ 15ರ ವರೆಗಿನ ಮುಂಗಡ ತೆರಿಗೆ ಪಾವತಿಯಲ್ಲಿ ₹1.48 ಲಕ್ಷ ಕೋಟಿ (ಶೇ 27ರಷ್ಟು ಏರಿಕೆ) ಸಂಗ್ರಹವಾಗಿದೆ. ಇದರಲ್ಲಿ ಕಂಪನಿಗಳ ವರಮಾನ ತೆರಿಗೆ (ಸಿಐಟಿ) ₹1.14 ಲಕ್ಷ ಕೋಟಿ ಮತ್ತು ವೈಯಕ್ತಿಕ ಆದಾಯ ತೆರಿಗೆ (ಪಿಐಟಿ) ₹34,470 ಕೋಟಿ ಆಗಿದೆ.

ಜೂನ್ 17ರ ವರೆಗೆ ನಿವ್ವಳ ನೇರ ತೆರಿಗೆ ಸಂಗ್ರಹ ಮೊತ್ತ ₹4.62 ಲಕ್ಷ ಕೋಟಿ ಆಗಿದೆ. ಇದರಲ್ಲಿ ಕಂಪನಿಗಳ ವರಮಾನ ತೆರಿಗೆ ₹1.80 ಲಕ್ಷ ಕೋಟಿ ಮತ್ತು ವೈಯಕ್ತಿಕ ಆದಾಯ ತೆರಿಗೆ ₹2.81 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ತಿಳಿಸಿದೆ.

₹53,322 ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 34ರಷ್ಟು ಹೆಚ್ಚಳವಾಗಿದೆ.

## ಜಿಡಿಪಿ ಶೇ 7.2ರಷ್ಟು ಪ್ರಗತಿ: ಫಿಚ್

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷಕ್ಕೆ ಭಾರತದ ಜಿಡಿಪಿ ಬೆಳವಣಿಗೆಯನ್ನು ಫಿಚ್ ರೇಟಿಂಗ್ಸ್ ಸಂಸ್ಥೆ ಪರಿಷ್ಕರಿಸಿದ್ದು, ಶೇ 7.2ರಷ್ಟು ಪ್ರಗತಿ ದಾಖಲಿಸಲಿದೆ ಎಂದು ಅಂದಾಜಿಸಿದೆ.

ಮಾರ್ಚ್‌ನಲ್ಲಿ ಪ್ರಕಟಿಸಿದ್ದ ವರದಿಯಲ್ಲಿ ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿತ್ತು. ಸರಕು ಮತ್ತು ಸೇವೆಗೆ ಸಂಬಂಧಿಸಿದಂತೆ ಗ್ರಾಹಕರ ಬಳಕೆ ವೆಚ್ಚದಲ್ಲಿ ಚೇತರಿಕೆ ಹಾಗೂ ಹೂಡಿಕೆ ಪ್ರಮಾಣದಲ್ಲಿನ ಏರಿಕೆಯಿಂದಾಗಿ ಈ ಪ್ರಗತಿ ಸಾಧ್ಯವಾಗಲಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ಜಾಗತಿಕ ಆರ್ಥಿಕ ಮುನ್ನೋಟದ ವರದಿ ತಿಳಿಸಿದೆ.

2025–26ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.5ರಷ್ಟು ಹಾಗೂ 2026–27ನೇ ಆರ್ಥಿಕ ವರ್ಷದಲ್ಲಿ ಶೇ 6.2ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ.

## ಜೆಮಿನಿ ಆ್ಯಪ್ ಕನ್ನಡದಲ್ಲೂ ಲಭ್ಯ

ನವದೆಹಲಿ (ಪಿಟಿಐ): ಗೂಗಲ್‌ನ ಕೃತಕ ಬುದ್ಧಿಮತ್ತೆ ಸಹಾಯಕ 'ಜೆಮಿನಿ'ಯು ಆ್ಯಪ್ ರೂಪದಲ್ಲಿ ಭಾರತದ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಲಭ್ಯವಿದೆ ಎಂದು ಕಂಪನಿಯು ಮಂಗಳವಾರ ತಿಳಿಸಿದೆ.

ಕನ್ನಡ, ಇಂಗ್ಲಿಷ್ ಸೇರಿ ದೇಶದ 8 ಭಾಷೆಯಲ್ಲಿ ಈ ಅಪ್ಲಿಕೇಷನ್ ಲಭ್ಯವಿದೆ. ಮುಂದಿನ ಕೆಲವು ವಾರಗಳಲ್ಲಿ ಈ ಸವಲತ್ತು ಐ ಫೋನ್ ಬಳಕೆದಾರರಿಗೂ ದೊರೆಯಲಿದೆ ಎಂದು ಜೆಮಿನಿ ಎಕ್ಸ್‌ಪೀರಿಯನ್ಸ್ ಎಂಜಿನಿಯರಿಂಗ್ ವಿಭಾಗದ ಉಪಾಧ್ಯಕ್ಷ ಅಮರ್ ಸುಬ್ರಮಣ್ಯ ತಿಳಿಸಿದ್ದಾರೆ.

ವಿದ್ಯಾರ್ಥಿಗಳು, ಕೋಡ್ ಅಭಿವೃದ್ಧಿಪಡಿಸುವವರು ಮತ್ತು ಹಲವು ಜನರು ದೈನಂದಿನ ಜೀವನದಲ್ಲಿ ಕಲಿಕೆ ಮತ್ತು ಸೃಜನಶೀಲತೆ ಹೆಚ್ಚಿಸಿಕೊಳ್ಳಲು 'ಜೆಮಿನಿ'ಯನ್ನು ಬಳಸುತ್ತಿದ್ದಾರೆ. ಬಳಕೆದಾರರ ಖಾಸಗಿತನದ ರಕ್ಷಣೆಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಭಾರತದಲ್ಲಿ ಜೆಮಿನಿ 1.5 ಪ್ರೊ ಆವೃತ್ತಿ ದೊರೆಯಲಿದೆ.

ಕಳೆದ ಫೆಬ್ರುವರಿಯಲ್ಲಿ ಪ್ರಧಾನಿ ಮೋದಿ ಕುರಿತು ಜೆಮಿನಿ ತಪ್ಪು ಮಾಹಿತಿ ನೀಡಿದ್ದು, ಚರ್ಚೆಗೆ ಗ್ರಾಸವಾಗಿತ್ತು.



# ಟೊಮೆಟೊ ಧಾರಣೆ ಏರುಮುಖ

ಪ್ರಜಾವಾಣಿ ವಾರ್ತೆ

ಕೋಲಾರ: ಈ ಬಾರಿ ಜಿಲ್ಲೆಯಲ್ಲಿ ಫಸಲು ಕಡಿಮೆಯಾದ ಕಾರಣ ದಿನದಿಂದ ದಿನಕ್ಕೆ ನಿಧಾನವಾಗಿ ಟೊಮೆಟೊಗೆ ಬೇಡಿಕೆ ಹೆಚ್ಚುತ್ತಿದ್ದು, ಧಾರಣೆ ಏರುಮುಖವಾಗಿದೆ.

ಸ್ಥಳೀಯ ಚಿಲ್ಲರೆ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಟೊಮೆಟೊ ಕೆ.ಜಿಗೆ ₹60ರಿಂದ ₹80 ದರದಲ್ಲಿ ಮಾರಾಟವಾಗುತ್ತಿದೆ.

ಕೋಲಾರ ಎಪಿಎಂಸಿ ಮಾರುಕಟ್ಟೆ ಹರಾಜಿನಲ್ಲಿ ಉತ್ತಮ ಗುಣಮಟ್ಟದ 15 ಕೆ.ಜಿ. ತೂಕದ ಟೊಮೆಟೊ ಬಾಕ್ಸ್ ₹1,100ಕ್ಕೆ ಮಾರಾಟವಾಗಿದೆ. ಎಪಿಎಂಸಿ ಮಾರುಕಟ್ಟೆಯಲ್ಲಿ ಮಂಗಳವಾರ ಟೊಮೆಟೊ ಆವಕ ಪ್ರಮಾಣ 9,129 ಕ್ವಿಂಟಲ್ (71 ಸಾವಿರ ಬಾಕ್ಸ್) ಇತ್ತು.

## ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ನಾಗೇಶ್ ಕೆ.ಆರ್.,** ಮಲ್ಲೇಶ್ವರಂ, ಬೆಂಗಳೂರು.

- **ಪ್ರಶ್ನೆ: ನನ್ನ ಮಗ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದಾನೆ. ಪ್ರತಿ ತಿಂಗಳು ₹2 ಲಕ್ಷ ಸಂಪಾದನೆ ಇದೆ. ಪ್ರಸ್ತುತ ನಾವು ಬೆಂಗಳೂರಿನಲ್ಲಿ 25 ವರ್ಷ ಹಳೆಯದಾದ ಸ್ವಂತ ಮನೆಯಲ್ಲಿ ವಾಸವಿದ್ದೇವೆ. ಕಳೆದ ಕೆಲವು ವರ್ಷಗಳಿಂದ ಸ್ವಂತ ಮನೆ ಕಟ್ಟಬೇಕೆಂದು ಅಂದಾಜಿಸಿದ್ದೇವೆ.**
  **ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ನಿವೇಶನ ಖರೀದಿಸಿ ಮನೆ ಕಟ್ಟುವುದು ಪ್ರಸ್ತುತ ತೀರಾ ದುಸ್ತರದ ಕೆಲಸ. ಹೀಗಾಗಿ, ನಿವೇಶನ ಖರೀದಿಸಿ ಮನೆ ಕಟ್ಟುವ ಬದಲು ಗುಣಮಟ್ಟದ ಮನೆ ಕಟ್ಟುವ ಬಿಲ್ಡರ್ ಕಂಪನಿಗಳ ಜೊತೆ ಸಂಪರ್ಕಿಸಿದೆವು. ಕೆಲವು ಸುತ್ತಿನ ಮಾತುಕತೆ ನಡೆಸಿದ ನಂತರವೂ 2-3 ಕೊಠಡಿಯ ಯಾವುದೇ ಮನೆ ಖರೀದಿಸುವುದಿದ್ದರೂ ಸುಮಾರು ₹1 ಕೋಟಿಗೂ ಮೀರಿದ ಬಜೆಟ್ ನಮ್ಮಲ್ಲಿ ಇರಬೇಕು. ಇದು ಸಾಲದ ಮೂಲವಾದರೂ ಆಗಬಹುದು ಅಥವಾ ನಮ್ಮ ಉಳಿತಾಯದ ಮೊತ್ತವೇ ಆಗಿರಬಹುದು. ಈ ಮೊತ್ತಕ್ಕೆ ಸಾಲ ಪಡೆದರೂ ಶೇ 75ರಷ್ಟು ಮೊತ್ತ ಸಾಲದ ರೂಪದಲ್ಲಿ ಸಿಗುತ್ತದೆ. ಇದರ ಇಎಂಐ ಸುಮಾರು ₹65 ಸಾವಿರ ಬರುತ್ತದೆ.**
  **ನನ್ನ ಪ್ರಶ್ನೆ ಏನೆಂದರೆ, ಇಷ್ಟೊಂದು ದೊಡ್ಡ ಮೊತ್ತ 20 ವರ್ಷದ ಕೊನೆಗೆ ಅಸಲು, ಬಡ್ಡಿ ಎಲ್ಲ ಸೇರಿ ಪ್ರಸ್ತುತ ಬೆಲೆಯಲ್ಲಿ ₹1.80 ಕೋಟಿಯಿಂದ ₹2 ಕೋಟಿ ಮೌಲ್ಯವುಳ್ಳದ್ದಾಗಿರುತ್ತದೆ ಎಂಬುದು ಇಎಂಐ ಲೆಕ್ಕಾಚಾರದಿಂದ ಕಂಡು ಬರುವ ಮಾಹಿತಿ. ಆದರೆ, ಆಸ್ತಿಗಳ ಮೌಲ್ಯವು ವೃದ್ಧಿಯಾಗುವ ಕಾರಣ ಈಗಲೇ ನಿರ್ಧರಿಸಿ ಮನೆ ಖರೀದಿಸುವುದು ಸೂಕ್ತವೇ ಅಥವಾ ನಮ್ಮ ನಿರ್ಧಾರ ಬದಲಿಸಿ ಇತರೆ ಹೂಡಿಕೆ ಮಾಡಿ ಮುಂದೆ ಮತ್ತಷ್ಟು ಹಣ ಸಂಗ್ರಹವಾದಾಗ ನಗದು ಪಾವತಿಸಿ ಮನೆ ಖರೀದಿಸುವುದು ಸೂಕ್ತವೇ? ಮುಂದಿನ ಅವಧಿ ದೀರ್ಘವಾಗಿರುವುದರಿಂದ ಇದೇ ಮೊತ್ತ ಬಳಸಿ ಹೆಚ್ಚಿನ ಆದಾಯ ಪಡೆಯಬಹುದೇ. ಈ ಗೊಂದಲಕ್ಕೆ ಸಲಹೆ ನೀಡಿ.**

**ಉತ್ತರ:** ನಿಮ್ಮ ಪ್ರಶ್ನೆ ಸಹಜವಾದುದು ಮತ್ತು ಆರ್ಥಿಕ ದೃಷ್ಟಿಯಿಂದ ತುಲನೆ ಮಾಡಿದಾಗ ನಮಗೆ ಯಾವುದು ಹೆಚ್ಚು ಪ್ರಶಸ್ತವೋ ಅದನ್ನು ಯೋಜಿಸಿ ಮಾಡುವುದು ಹೆಚ್ಚು ಸಮಂಜಸ. ಈ ಕಾರಣದಿಂದ ನೀವು ನಿಮ್ಮ ನಿರ್ಧಾರವನ್ನು ತುಸು ಬದಲಾಯಿಸಬೇಕಾಗುತ್ತದೆ. ಎಲ್ಲರಂತೆ ತಮಗೂ ಸ್ವಂತ ಮನೆ ಹೊಂದುವುದು ಹೆಚ್ಚು ಅಗತ್ಯ ಎನ್ನುವುದು ಸಹಜವಾಗಿ ಅನಿಸುತ್ತದೆ. ನೀವು ನೀಡಿರುವ ಮಾಹಿತಿಯಂತೆ, ಈಗಾಗಲೇ ನೀವು ಒಂದು ಮನೆ ಹೊಂದಿದ್ದೀರಿ ಹಾಗೂ ನಿಮ್ಮ ಅಗತ್ಯದ ಅನುಕೂಲಕ್ಕೆ ಅದು ಸಾಕೆಂದಾದರೆ ನಿಮ್ಮ ಮಗನ ಆದಾಯದ ಹೂಡಿಕೆ ವಿಚಾರದಲ್ಲಿ ಇನ್ನೂ ಉತ್ತಮ ಅವಕಾಶಗಳನ್ನು ಹುಡುಕುವ ಬಗ್ಗೆ ಯೋಜಿಸಬಹುದು.

ನೀವು ಮೇಲೆ ಹೇಳಿರುವ ಸಾಲದ ಮೇಲೆ (ಅಂದಾಜು ₹75 ಲಕ್ಷ) ಬರಬಹುದಾದ ಇಎಂಐ ಮೊತ್ತವನ್ನೇ ಒಂದು ಹೂಡಿಕೆಯ ತಂತ್ರವಾಗಿ ಬಳಸಿ ಶೇ 12ರಷ್ಟು ವಾರ್ಷಿಕ ಪ್ರಗತಿಯ ನಿರೀಕ್ಷಿಸುವ ಮ್ಯೂಚುವಲ್ ಫಂಡ್ ಅಥವಾ ಉತ್ತಮ ಗುಣಮಟ್ಟದ ಷೇರುಗಳಲ್ಲಿ ಮುಂದಿನ 20 ವರ್ಷ ಹೂಡಿಕೆ ಮಾಡಿದರೆ, ನಿಮ್ಮ ಅದೇ ಮೊತ್ತ ಸುಮಾರು ₹6.5 ಕೋಟಿ ಮೀರಿ ಸಂಗ್ರಹವಾಗುತ್ತದೆ. ಅದೇ ಶೇ 15ರ ವಾರ್ಷಿಕ ಪ್ರಗತಿ ದರದಲ್ಲಿ ವೃದ್ಧಿಯಾದರೆ, ₹10 ಕೋಟಿ ತನಕ ನಿಮ್ಮ ಅದೇ ಮೊತ್ತ ವರ್ಧಿಸುತ್ತದೆ. ಬಹುಶಃ ಈ 20 ವರ್ಷದ ಸಮೀಪದ ಅವಧಿಯಲ್ಲಿ ಹೊಸ ಮನೆಯ ನಿರ್ಧಾರ ನೀವು ಕೈಗೊಂಡರೂ ನಿಮ್ಮ ನಿರೀಕ್ಷೆ ಮೀರಿದ ಹೊಚ್ಚ ಹೊಸ ಅತ್ಯುನ್ನತ ದರ್ಜೆಯ ಮನೆ ಖರೀದಿ ಮುಂದೆಯೂ ಸಾಧ್ಯ. ಈ ಬಗೆಗಿನ ವಿಚಾರವನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಮರು ಯೋಜಿಸಿ ನಿರ್ಧಾರ ಕೈಗೊಳ್ಳಿ.

**ಈಶ್ವರ್,** ದಾವಣಗೆರೆ.

- **ಪ್ರಶ್ನೆ: ನಾನು ರಾಷ್ಟ್ರೀಕೃತ ಬ್ಯಾಂಕ್ ಒಂದರಲ್ಲಿ ಇತ್ತೀಚೆಗೆ ₹34 ಲಕ್ಷ ಗೃಹ ಸಾಲ ಪಡೆದಿರುತ್ತೇನೆ. ಈ ಸಾಲದ ಅವಧಿಯು 30 ವರ್ಷ. ನಾನು ಸರ್ಕಾರಿ ಸೇವೆಯಲ್ಲಿದ್ದು, ಉಳಿದ ಸೇವಾ ಅವಧಿಯು 15 ವರ್ಷ ಆಗಿರುವುದರಿಂದ ಈ ಸಾಲವನ್ನು 15 ವರ್ಷದ ಅವಧಿಗೆ ತೀರುವಂತೆ ಇಎಂಐ ನಿಗದಿಪಡಿಸಲು ಬ್ಯಾಂಕ್‌ನವರನ್ನು ಕೋರಿದಾಗ ಈಗ ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಬೇಕಾದರೆ ಮುಂಗಡವಾಗಿ ಅಸಲನ್ನು ಕಟ್ಟುತ್ತಾ 15 ವರ್ಷಗಳಿಗೆ ಸಾಲ ತೀರಿಸಬಹುದು ಎಂದು ತಿಳಿಸಿರುತ್ತಾರೆ.**
  **ನನ್ನ ಪ್ರಶ್ನೆ ಏನೆಂದರೆ, ಈ ರೀತಿ ಮುಂಗಡವಾಗಿ ತೀರಿಸುವುದು ಮತ್ತು 15 ವರ್ಷಗಳ ಇಎಂಐ ಮೂಲಕ ತೀರಿಸುವುದಕ್ಕೆ ಒಟ್ಟಾರೆ ಪಾವತಿ ಒಂದೇ ಆಗುತ್ತದೆಯೆ? ಯಾವುದು ಸೂಕ್ತವಾದುದು? ಈ ಸಮಸ್ಯೆಗೆ ಪರಿಹಾರ ತಿಳಿಸಿ.**

**ಉತ್ತರ:** ನೀವು ನೀಡಿರುವ ಮಾಹಿತಿಯಂತೆ, ನೀವು ಪಡೆದಿರುವ ಸಾಲ ಸುದೀರ್ಘ ಅವಧಿಯ ಸಾಲವಾಗಿರುತ್ತದೆ. ಉದಾಹರಣೆಗೆ ಶೇ 8.5ರ ಬಡ್ಡಿದರದಂತೆ 30 ವರ್ಷಗಳ ಅವಧಿಯಲ್ಲಿ ನಿಮ್ಮ ಒಟ್ಟಾರೆ ಪಾವತಿ ಸುಮಾರು ₹94.11 ಲಕ್ಷವಾಗಿರುತ್ತದೆ. ಇದರಲ್ಲಿ ಬಡ್ಡಿ ಮೊತ್ತವೇ ಸುಮಾರು ₹60.11 ಲಕ್ಷ. ಅಂದರೆ ಮೂವತ್ತು ವರ್ಷದ ಅವಧಿಯಲ್ಲಿ ನೀವು ಕಟ್ಟುವ ಬಡ್ಡಿ ಮೊತ್ತವೇ ಅಸಲಿನ ಎರಡು ಪಟ್ಟು. ನಿಮ್ಮ ಉದ್ದೇಶಿತ ಸಾಲದ ಪೂರ್ವ ಪಾವತಿಯ ವಿಚಾರವಾಗಿ ವಿಮರ್ಶಿಸುವುದಾದರೆ, ಬ್ಯಾಂಕ್‌ಗಳು ಸಾಮಾನ್ಯವಾಗಿ ಸಾಲಗಾರನ ಸೇವಾವಧಿಯಲ್ಲೇ ಸಂಪೂರ್ಣ ಸಾಲ ಮರುಪಾವತಿಯಾಗುವಂತೆ ಇಎಂಐ ಕಂತುಗಳನ್ನು ನಿರ್ಧರಿಸುತ್ತವೆ. ಆದರೆ, ನಿಮ್ಮ ವಿಚಾರದಲ್ಲಿ ಇದು ಸೇವಾ ಅವಧಿಗಿಂತಲೂ ವಿಸ್ತರಿಸಿದಂತಿದೆ. ನಿಮ್ಮ ಪೂರ್ವ ಪಾವತಿಯ ನಿರ್ಧಾರ ಸಮಂಜಸವಾಗಿದೆ. ಬಡ್ಡಿ ಉಳಿತಾಯದ ದೃಷ್ಟಿಯಲ್ಲಿ ಈ ನಿರ್ಧಾರ ಬಹಳಷ್ಟು ಸಹಕಾರಿಯಾಗಲಿದೆ.

ನೀವು ಮುಂದಿನ 15 ವರ್ಷಗಳ ಅವಧಿಯಲ್ಲಿ ಒಂದು ತಿಂಗಳಿಗೆ ₹10 ಸಾವಿರದಂತೆ ವರ್ಷಕ್ಕೆ ₹1.20 ಲಕ್ಷದಂತೆ ಹೆಚ್ಚುವರಿ ಪಾವತಿಸುತ್ತಾ ಬನ್ನಿ. ಇದರ ಪರಿಣಾಮ ನಿಮ್ಮ ಸಾಲದ ಅವಧಿ ಕನಿಷ್ಠ ಐದರಿಂದ ಆರು ವರ್ಷ ಮೊದಲೇ ಸಂಪೂರ್ಣ ಪಾವತಿಯಾಗುತ್ತದೆ. ನೀವು ಹೆಚ್ಚುವರಿಯಾಗಿ ಕಟ್ಟುವ ಹಣ ನೇರವಾಗಿ ಸಾಲದ ಅಸಲು ಮೊತ್ತಕ್ಕೆ ವಜಾ ಆಗುತ್ತದೆ ಮತ್ತು ಪ್ರತಿ ತಿಂಗಳ ಇಎಂಐ ಬದಲಾಗದಿದ್ದರೂ ಅದರಲ್ಲಿರುವ ಅಸಲು ಮೊತ್ತದ ಪ್ರಮಾಣ ಪ್ರತಿ ತಿಂಗಳು ಹೆಚ್ಚುತ್ತಾ ಸಾಲದ ಬಾಕಿ ಬೇಗನೆ ಪಾವತಿಯಾಗುವಲ್ಲಿ ನೆರವಾಗುತ್ತದೆ.

### ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001

ಇ–ಮೇಲ್: businessdesk@prajavani.co.in

### ಮೂರನೇ ಬಾರಿ ಪ್ರಧಾನಿಯಾದ ಬಳಿಕ ವಾರಾಣಸಿಗೆ ಮೊದಲ ಭೇಟಿ ನೀಡಿದ ಮೋದಿ

# ‘ನಾನು ಗಂಗಾ ಮಾತೆಯ ದತ್ತು ಪುತ್ರ’

ಪ್ರಜಾವಾಣಿ ವಾರ್ತೆ

**ಲಖನೌ:** ‘ಗಂಗಾ ಮಾತೆಯು ನನ್ನನ್ನು ದತ್ತು ತೆಗೆದುಕೊಂಡಂತೆ ಭಾಸವಾಗುತ್ತಿದೆ. ಕಾಶಿಯ ಜನರು ಅವರ ಸಂಸದನನ್ನು ಮಾತ್ರ ಆಯ್ಕೆ ಮಾಡಿಲ್ಲ, ದೇಶದ ಪ್ರಧಾನಿಯನ್ನೂ ಮೂರನೇ ಬಾರಿಗೆ ಆಯ್ಕೆ ಮಾಡಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದರು.

ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಸಲ ತಮ್ಮ ಸ್ವಕ್ಷೇತ್ರ ವಾರಾಣಸಿಗೆ ಭೇಟಿ ನೀಡಿದ ಅವರು, ಪಿ.ಎಂ. ಕಿಸಾನ್ ಸಮ್ಮಾನ್ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

‘ಬಾಬಾ ವಿಶ್ವನಾಥ, ಗಂಗಾ ಮಾತೆಯರ ಆಶೀರ್ವಾದ ಮತ್ತು ಕಾಶಿ ಜನರ ಅಪರಿಮಿತ ಪ್ರೀತಿಯಿಂದಾಗಿ ಮೂರನೇ ಅವಧಿಗೆ ದೇಶದ ‘ಪ್ರಧಾನ ಸೇವಕ’ನಾಗುವ ಅವಕಾಶ ನನಗೆ ಸಿಕ್ಕಿದೆ’ ಎಂದು ಅವರು ಹೇಳಿದರು.

‘ಗಂಗಾ ಮಾತೆಯು ನನ್ನನ್ನು ಆಕೆಯ ಮಡಿಲಿನಲ್ಲಿ ಇರಿಸಿಕೊಂಡಿದ್ದಾಳೆ. ನಾನು ವಾರಾಣಸಿಯ ಭಾಗವೇ ಆಗಿದ್ದೇನೆ’ ಎಂದು ಮೋದಿ ಪ್ರತಿಪಾದಿಸಿದರು.

**ಐತಿಹಾಸಿಕ ತೀರ್ಪು:** ‘ಲೋಕಸಭಾ ಚುನಾವಣೆಯಲ್ಲಿ ದೇಶದ ಜನರು ನಮಗೆ ನೀಡಿರುವ ತೀರ್ಪು ಐತಿಹಾಸಿಕವಾದುದು. 60 ವರ್ಷದ ಬಳಿಕ ಇದೇ ಮೊದಲ ಬಾರಿ ದೇಶದಲ್ಲಿ ಸರ್ಕಾರವೊಂದು (ಬಿಜೆಪಿ) ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದು ಹ್ಯಾಟ್ರಿಕ್ ಸಾಧಿಸಿದೆ. ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸರ್ಕಾರವೊಂದು ಸತತವಾಗಿ ಮೂರನೇ ಬಾರಿಗೆ ಅಧಿಕಾರಕ್ಕೆ ಬರುವುದು ಬಹಳ ಅಪರೂಪ’ ಎಂದು ಅವರು ಬಣ್ಣಿಸಿದರು.

‘ದೇಶದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಎಷ್ಟು ಆಳವಾಗಿ ಹರಡಿವೆ ಎಂಬುದನ್ನು 18ನೇ ಲೋಕಸಭಾ ಚುನಾವಣೆಯು ಜಗತ್ತಿಗೆ ತೋರಿಸಿದೆ. ಈ ಚುನಾವಣೆಯಲ್ಲಿ ಸುಮಾರು 64 ಕೋಟಿ ಜನರು ಮತದಾನ ಮಾಡಿದ್ದಾರೆ. ಜಗತ್ತಿನಲ್ಲಿ ಇದಕ್ಕಿಂತ ದೊಡ್ಡ ಚುನಾವಣೆ ಬೇರೆ ಇಲ್ಲ’ ಎಂದು ಹೇಳಿದರು.

‘ದೇಶದಲ್ಲಿರುವ ಮತದಾರರ ಸಂಖ್ಯೆಯು ಎಲ್ಲ ಜಿ–7 ರಾಷ್ಟ್ರಗಳ ಒಟ್ಟು ಮತದಾರರ ಸಂಖ್ಯೆಗಿಂತ ಒಂದೂವರೆ ಪಟ್ಟು ಹೆಚ್ಚು. ಐರೋಪ್ಯ ಒಕ್ಕೂಟದಲ್ಲಿರುವ ಮತದಾರರಿಗಿಂತ ಎರಡೂವರೆ ಪಟ್ಟು ಜಾಸ್ತಿ ಮತದಾರರು ನಮ್ಮ ದೇಶದಲ್ಲಿದ್ದಾರೆ’ ಎಂದರು.

ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಗಂಗಾ ಆರತಿಯಲ್ಲಿ ಭಾಗಿ:** ಸಂಜೆ ಪ್ರಧಾನಿಯವರು ದಶಾಶ್ವಮೇಧ ಘಾಟ್‌ಗೆ ಭೇಟಿ ನೀಡಿ, ಗಂಗಾ ಪೂಜೆ ನೆರವೇರಿಸಿ, ಗಂಗಾ ಆರತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.



ಉತ್ತರ ಪ್ರದೇಶದ ವಾರಾಣಸಿಯಲ್ಲಿ ಮಂಗಳವಾರ ನಡೆದ ಪಿ.ಎಂ. ಕೃಷಿ ಸಮ್ಮಾನ್ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ರೈತನ ಪ್ರತಿಕೃತಿಯನ್ನು ನೀಡಿ ಗೌರವಿಸಿದರು. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

### ಮೋದಿ ಹೇಳಿದ್ದು...

- ರೈತರು, ಮಹಿಳೆಯರು, ಯುವಜನರು ಮತ್ತು ಬಡವರು ವಿಕಸಿತ ಭಾರತದ ದೃಢವಾದ ಆಧಾರಸ್ತಂಭಗಳು ಎಂದು ನಾನು ಪರಿಗಣಿಸುತ್ತೇನೆ.
- 21ನೇ ಶತಮಾನದ ಭಾರತವನ್ನು ಜಗತ್ತಿನ ಮೂರನೇ ಆರ್ಥಿಕ ಶಕ್ತಿಯನ್ನಾಗಿ ಮಾಡುವಲ್ಲಿ ಕೃಷಿಯು ಪ್ರಮುಖ ಪಾತ್ರ ವಹಿಸಲಿದೆ.

### ‘ಮೋದಿಗೆ ಜನರ ಅವಿಶ್ವಾಸ ಮತ’

**ನವದೆಹಲಿ (ಪಿಟಿಐ):** ಈ ಬಾರಿಯ ಚುನಾವಣೆಯಲ್ಲಿ ವಾರಾಣಸಿ ಕ್ಷೇತ್ರದ ಜನರು ಪ್ರಧಾನಿ ಮೋದಿ ವಿರುದ್ಧ ಅವಿಶ್ವಾಸದ ಮತ ಹಾಕಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ.

ಲೋಕಸಭಾ ಚುನಾವಣೆಯ ಬಳಿಕ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಕ್ಷೇತ್ರ ವಾರಾಣಸಿಗೆ ಮಂಗಳವಾರ ಭೇಟಿ ನೀಡಿರುವ ಸಂದರ್ಭದಲ್ಲಿ, ಈ ಬಾರಿಯ ಮತ ಎಣಿಕೆಯ ಸಂದರ್ಭದಲ್ಲಿ ಮೋದಿ ಅವರು ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಹಲವು ಸುತ್ತುಗಳಲ್ಲಿ ಹಿನ್ನಡೆ ಅನುಭವಿಸಿದ್ದನ್ನು ಉಲ್ಲೇಖಿಸಿ ಕಾಂಗ್ರೆಸ್ ಈ ರೀತಿ ಹೇಳಿದೆ.

ಪ್ರಧಾನಿಯವರ ಭೇಟಿಗೂ ಮುನ್ನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ವಾರಾಣಸಿ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಒಂಬತ್ತು ಪ್ರಶ್ನೆಗಳನ್ನು ಮೋದಿಯವರ ಮುಂದಿಟ್ಟು, ಸಂಸದರಾಗಿ ಅವುಗಳನ್ನು ಪರಿಹರಿಸಲು ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

‘ಪ್ರಧಾನಿಯವರ ಮಹತ್ವಾಕಾಂಕ್ಷೆಯ ನಮಾಮಿ ಗಂಗೆ ಯೋಜನೆ ಯಾಕೆ ಹೀನಾಯವಾಗಿ ವಿಫಲವಾಗಿದೆ? ₹20 ಸಾವಿರ ಕೋಟಿ ವೆಚ್ಚ ಮಾಡಿದ ನಂತರವೂ ಗಂಗಾ ನದಿ ಯಾಕೆ ಮತ್ತಷ್ಟು ಕೊಳಕಾಗಿದೆ’ ಎಂದು ಪ್ರಶ್ನಿಸಿರುವ ಜೈರಾಮ್ ರಮೇಶ್, ‘ನಮಾಮಿ ಗಂಗೆ ಯೋಜನೆಯಡಿ ಗಂಗಾ ನದಿಯನ್ನು ಶುದ್ಧೀಕರಿಸುವ ಭರವಸೆಯನ್ನು ಮೋದಿ 2014ರಲ್ಲಿ ನೀಡಿದ್ದರು’ ಎಂದು ಹೇಳಿದ್ದಾರೆ.

### ₹20 ಸಾವಿರ ಕೋಟಿ ಬಿಡುಗಡೆ

ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆಯ ಅಡಿಯಲ್ಲಿ ದೇಶದಾದ್ಯಂತ 9.26 ಕೋಟಿಗೂ ಹೆಚ್ಚು ರೈತರಿಗೆ ₹20 ಸಾವಿರ ಕೋಟಿಯಷ್ಟು ಸಹಾಯಧನವನ್ನು ಪ್ರಧಾನಿ ನರೇಂದ್ರ ಮೋದಿ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

‘ಪಿ.ಎಂ. ಕಿಸಾನ್ ಸಮ್ಮಾನ್ ನಿಧಿ ಯೋಜನೆಯು ಫಲಾನುಭವಿಗಳ ಖಾತೆಗಳಿಗೆ ನೇರ ಹಣ ವರ್ಗಾವಣೆ ಮಾಡುವ ಜಗತ್ತಿನ ಅತ್ಯಂತ ದೊಡ್ಡ ಯೋಜನೆ. ಇದುವರೆಗೆ ದೇಶದ ಕೋಟ್ಯಂತರ ರೈತರ ಖಾತೆಗೆ ₹3.15 ಲಕ್ಷ ಕೋಟಿಯಷ್ಟು ಹಣ ವರ್ಗಾವಣೆ ಮಾಡಲಾಗಿದೆ’ ಎಂದು ಮೋದಿ ಹೇಳಿದರು.

### ‘ಮನ್ ಕಿ ಬಾತ್’ 30ರಿಂದ ಪುನರಾರಂಭ

**ನವದೆಹಲಿ (ಪಿಟಿಐ):** ಚುನಾವಣೆಯ ಕಾರಣದಿಂದಾಗಿ ಮೂರು ತಿಂಗಳಿಂದ ಸ್ಥಗಿತಗೊಂಡಿದ್ದ ’ಮನ್ ಕಿ ಬಾತ್‘ (ಮನದ ಮಾತು) ಕಾರ್ಯಕ್ರಮ ಈ ತಿಂಗಳ 30ರಿಂದ ಪುನರಾರಂಭಗೊಳ್ಳಲಿದ್ದು ಜನರು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ.

‘ನಿಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ನಮೋ ಆ್ಯಪ್‌ನಲ್ಲಿ ಬರೆಯಿರಿ ಅಥವಾ ನಿಮ್ಮ ಸಂದೇಶವನ್ನು 1800 11 7800 ನಲ್ಲಿ ದಾಖಲಿಸಿ’ ಎಂದು ಮೋದಿ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

### ಶ್ರೀನಗರದಲ್ಲಿ ಯೋಗ: ಪ್ರಧಾನಿ ಭಾಗಿ

**ನವದೆಹಲಿ (ಪಿಟಿಐ):** ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಈ ವರ್ಷದ ಮುಖ್ಯ ಕಾರ್ಯಕ್ರಮವು ಶ್ರೀನಗರದ ಶೇರ್–ಇ–ಕಾಶ್ಮೀರ್ ಅಂತರರಾಷ್ಟ್ರೀಯ ಸಮ್ಮೇಳನ ಕೇಂದ್ರದಲ್ಲಿ ಶುಕ್ರವಾರ ನಡೆಯಲಿದೆ.

ಮೋದಿ ಈ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ ಎಂದು ಆಯುಷ್ ಖಾತೆ ರಾಜ್ಯ ಸಚಿವ (ಸ್ವತಂತ್ರ) ಪ್ರತಾಪರಾವ್ ಜಾಧವ್ ಮಂಗಳವಾರ ತಿಳಿಸಿದರು.

# ಅರುಂಧತಿ ವಿರುದ್ಧ ಮುಂದಿನ ವಾರ ಆರೋಪ ಪಟ್ಟಿ ಸಲ್ಲಿಕೆ?



**ನವದೆಹಲಿ (ಪಿಟಿಐ):** ಪ್ರಚೋದನಕಾರಿ ಭಾಷಣ ಮಾಡಿದ್ದಕ್ಕಾಗಿ ಲೇಖಕಿ ಅರುಂಧತಿ ರಾಯ್ ಮತ್ತು ಕಾಶ್ಮೀರದ ಮಾಜಿ ಪ್ರಾಧ್ಯಾಪಕರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ದಾಖಲಾದ ಪ್ರಕರಣದಲ್ಲಿ ದೆಹಲಿ ಪೊಲೀಸರು ಮುಂದಿನ ವಾರ ಆರೋಪ ಪಟ್ಟಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

‘ಆಜಾದಿ –ದಿ ಓನ್ಲೀ ವೇ’ ವೇದಿಕೆಯಡಿ 2010ರ ಅಕ್ಟೋಬರ್ 21ರಂದು ನವದೆಹಲಿಯಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ರಾಯ್ ಮತ್ತು ಕಾಶ್ಮೀರದ ಸೆಂಟ್ರಲ್ ವಿ.ವಿಯ ಮಾಜಿ ಪ್ರಾಧ್ಯಾಪಕ ಶೇಖ್ ಶೌಕತ್ ಹುಸೇನ್ ಅವರು ದ್ವೇಷ ಭಾಷಣ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು.

ಈ ಸಂಬಂಧ ಕಾಶ್ಮೀರದ ಸಾಮಾಜಿಕ ಕಾರ್ಯಕರ್ತ ಸುಶೀಲ್ ಪಂಡಿತ್ ಅವರು 2010ರ ಅ.28ರಂದು ತಿಲಕ್‌ಮಾರ್ಗ್ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿದ್ದರು. ನಂತರ, ಹೆಚ್ಚಿನ ತನಿಖೆಗಾಗಿ ಈ ಪ್ರಕರಣವನ್ನು ದೆಹಲಿ ಪೊಲೀಸ್ ಕ್ರೈಂ ಬ್ರಾಂಚ್‌ಗೆ ವರ್ಗಾಯಿಸಲಾಗಿತ್ತು.

ಯುಎಪಿಎ ಕಲಂ 45(1)ರ ಅಡಿಯಲ್ಲಿ ಇವರಿಬ್ಬರ ವಿರುದ್ಧ ಕ್ರಮ ಜರುಗಿಸಲು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಶುಕ್ರವಾರ ಹೊಸದಾಗಿ ಅನುಮತಿ ನೀಡಿದ್ದರು.

ಕ್ರೈಂ ಬ್ರಾಂಚ್ ಅಧಿಕಾರಿಗಳು ಒಂದು ಸಾವಿರಕ್ಕೂ ಅಧಿಕ ಪುಟಗಳ ಆರೋಪ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಭಾಷಣದ ವಿಡಿಯೊಗಳು ಮತ್ತು ವಿಡಿಯೊಗಳಿಗೆ ಸಂಬಂಧಿಸಿದಂತೆ ವಿಧಿವಿಜ್ಞಾನ ಪ್ರಯೋಗಾಲಯದ ವರದಿಗಳನ್ನು ತನಿಖಾ ತಂಡವು ಪುರಾವೆಗಳಾಗಿ ನೀಡಿವೆ. ಅದೇ ರೀತಿ, ಕೆಲವು ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನೂ ತನಿಖೆಯ ಭಾಗವಾಗಿ ಒದಗಿಸಲಾಗಿದೆ ಎಂದು ಹೇಳಿವೆ.

### ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆ ಸಂಚು ಪ್ರಕರಣ

# ತಪ್ಪು ಮಾಡಿಲ್ಲ–ನಿಖಿಲ್ ಗುಪ್ತಾ

**ನ್ಯೂಯಾರ್ಕ್ (ಪಿಟಿಐ):** ಅಮೆರಿಕದಲ್ಲಿ ಸಿಖ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಅವರ ಕೊಲೆ ಸಂಚು ಪ್ರಕರಣದ ಆರೋಪಿಯಾಗಿರುವ ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಅವರು, ‘ನಾನು ಯಾವುದೇ ತಪ್ಪು ಮಾಡಿಲ್ಲ, ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಲಾಗಿದೆ’ ಎಂದು ಇಲ್ಲಿನ ಫೆಡರಲ್ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಅಮೆರಿಕದ ಮನವಿಯ ಮೇರೆಗೆ ಝೆಕ್ ಗಣರಾಜ್ಯದಲ್ಲಿ ಕಳೆದ ವರ್ಷ ಬಂಧಿಸಲಾಗಿದ್ದ ಗುಪ್ತಾ ಅವರನ್ನು, ಇತ್ತೀಚೆಗೆ ಅಮೆರಿಕಕ್ಕೆ ಹಸ್ತಾಂತರಿಸಲಾಗಿತ್ತು. ಅವರನ್ನು ಸೋಮವಾರ ಅಮೆರಿಕದ ಮ್ಯಾನ್‌ಹಟನ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು.

ಗುಪ್ತಾ ಪರ ವಕೀಲ ಜೆಫ್ರಿ ಚಾಬ್ರೋವ್ ಅವರು, ‘ಗುಪ್ತಾ ಅವರು ಯಾವುದೇ ತಪ್ಪು ಮಾಡಿಲ್ಲ’ ಎಂದು ವಾದಿಸಿದರು. ಅಲ್ಲದೆ ತಮ್ಮ ಕಕ್ಷಿದಾರರು ಸಸ್ಯಾಹಾರಿಯಾಗಿದ್ದು, ಅವರಿಗೆ ಬಂಧನದ ವೇಳೆ ಸಸ್ಯಾಹಾರವನ್ನು ಒದಗಿಸಲಾಗಿಲ್ಲ ಎಂದು ತಿಳಿಸಿದರು. ನ್ಯಾಯಾಲಯವು ವಿಚಾರಣೆಯನ್ನು ಜೂನ್ 28ಕ್ಕೆ ಮುಂದೂಡಿತು.

ಭಾರತದ ಅಧಿಕಾರಿಯೊಬ್ಬರ ನಿರ್ದೇಶನದ ಮೇರೆಗೆ ಗುಪ್ತಾ ಅವರು ಹಂತಕರನ್ನು ನೇಮಿಸಿಕೊಂಡು ಪನ್ನೂ ಅವರನ್ನು ಕೊಲ್ಲಲು ಸಂಚು ರೂಪಿಸಿದ್ದರು ಎಂಬ ಆರೋಪ ಇದೆ. ಇದು ಸಾಬೀತಾದರೆ ಅವರು ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ಎದುರಿಸಬೇಕಾಗುತ್ತದೆ.

**‘ಅಮೆರಿಕ ಸಹಿಸಲ್ಲ’:** ‘ಅಮೆರಿಕದ ನಾಗರಿಕರನ್ನು ಕೊಲ್ಲುವ ಅಥವಾ ಅವರಿಗೆ ಹಾನಿ ಮಾಡುವ ಪ್ರಯತ್ನಗಳನ್ನು ದೇಶ ಸಹಿಸುವುದಿಲ್ಲ. ಈ ವಿಚಾರವನ್ನು ಗುಪ್ತಾ ಅವರ ಹಸ್ತಾಂತರದ ವೇಳೆ ನ್ಯಾಯಾಂಗ ಇಲಾಖೆ ಸ್ಪಷ್ಟಪಡಿಸಿದೆ’ ಎಂದು ಅಮೆರಿಕದ ಅಟಾರ್ನಿ ಜನರಲ್ ಮೆರಿಕ್ ಬಿ. ಗಾರ್ಲ್ಯಾಂಡ್ ತಿಳಿಸಿದ್ದಾರೆ.

ಪನ್ನೂ ಕೊಲೆ ಸಂಚು ಪ್ರಕರಣದಲ್ಲಿ ಗುಪ್ತಾ ಅಮೆರಿಕದ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

‘ಅಮೆರಿಕದ ಪ್ರಜೆಗಳಿಗೆ ಸಾಂವಿಧಾನಿಕವಾಗಿ ದೊರೆತಿರುವ ಸ್ವಾತಂತ್ರ್ಯಗಳನ್ನು ದಮನ ಮಾಡುವ ಪ್ರಯತ್ನವನ್ನು ಎಫ್‌ಬಿಐ ಸಹಿಸುವುದಿಲ್ಲ. ನಮ್ಮ ನಾಗರಿಕರು ಮತ್ತು ಅವರ ಹಕ್ಕುಗಳ ರಕ್ಷಣೆಗೆ ನಾವು ದೇಶ ಮತ್ತು ವಿದೇಶಗಳಲ್ಲಿ ನಮ್ಮ ಪಾಲುದಾರರ ಜತೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇವೆ’ ಎಂದು ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ವ್ರೇ ಪ್ರತಿಕ್ರಿಯಿಸಿದ್ದಾರೆ.

**ಖಾಲಿಸ್ತಾನ ಧ್ವಜ ಹಾರಾಟ:** ಗುಪ್ತಾ ಅವರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ‘ಸಿಖ್ಸ್ ಫಾರ್ ಜಸ್ಟೀಸ್’ (ಎಸ್‌ಎಫ್‌ಜೆ) ಕಾರ್ಯಕರ್ತರು ನ್ಯಾಯಾಲಯದ ಮುಂದೆ ಜಮಾಯಿಸಿದರು. ಅವರಲ್ಲಿ ಒಬ್ಬರು ಖಾಲಿಸ್ತಾನದ ಧ್ವಜವನ್ನು ಹಿಡಿದಿದ್ದರು.

## ದೆಹ್ರಾದಿಂದ ಹಿಮಾಚಲ ಪ್ರದೇಶ ಸಿ.ಎಂ ಪತ್ನಿ ಕಣಕ್ಕೆ

**ನವದೆಹಲಿ:** ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರ ಪತ್ನಿ ಕಮಲೇಶ್ ಠಾಕೂರ್ ಅವರನ್ನು ಉಪಚುನಾವಣೆ ನಡೆಯಲಿರುವ ಮೂರು ವಿಧಾನಸಭಾ ಕ್ಷೇತ್ರಗಳ ಪೈಕಿ, ಒಂದು ಕ್ಷೇತ್ರದಿಂದ ಕಣಕ್ಕಿಳಿಸಲು ಕಾಂಗ್ರೆಸ್ ಮಂಗಳವಾರ ನಿರ್ಧರಿಸಿದೆ.

ಕಮಲೇಶ್ ಅವರು ದೆಹ್ರಾ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಮೂವರು ಪಕ್ಷೇತರ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ನಂತರ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ.

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಪಕ್ಷೇತರ ಶಾಸಕ ಹೋಶಿಯಾರ್ ಸಿಂಗ್ ಅವರು ದೆಹ್ರಾ ಕ್ಷೇತ್ರದಿಂದ ಈಗ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸುತ್ತಿದ್ದಾರೆ.

### ಸಂಕ್ಷಿಪ್ತ ಸುದ್ದಿ

## 41 ವಿಮಾನ ನಿಲ್ದಾಣಗಳಿಗೆ ಬಾಂಬ್ ಬೆದರಿಕೆ

**ನವದೆಹಲಿ(ಪಿಟಿಐ):** ದೇಶದ 41 ವಿಮಾನ ನಿಲ್ದಾಣಗಳಿಗೆ ಮಂಗಳವಾರ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ರವಾನೆಯಾಗಿದ್ದವು.

ಭದ್ರತಾ ಪಡೆಗಳು ವ್ಯಾಪಕ ತಪಾಸಣೆ ಕೈಗೊಂಡು, ಇವು ಹುಸಿ ಕರೆಗಳು ಎಂಬುದಾಗಿ ಘೋಷಿಸಿದ ನಂತರ ಜನರು ನಿಟ್ಟುಸಿರು ಬಿಡುವಂತಾಯಿತು ಎಂದು ಮೂಲಗಳು ಹೇಳಿವೆ.

ಮಧ್ಯಾಹ್ನ 12.40ರ ಹೊತ್ತಿಗೆ, exhumedyou888@gmail.com ಎಂಬ ಇ–ಮೇಲ್ ಐ.ಡಿಯಿಂದ ಈ ಎಲ್ಲ ವಿಮಾನನಿಲ್ದಾಣಗಳಿಗೆ ಬಾಂಬ್ ಬೆದರಿಕೆ ಸಂದೇಶಗಳು ಬಂದವು. ಕೂಡಲೇ, ಬಾಂಬ್ ಬೆದರಿಕೆ ಮೌಲ್ಯಮಾಪನ ಸಮಿತಿಯ ಶಿಫಾರಸಿನಂತೆ, ಎಲ್ಲ ಟರ್ಮಿನಲ್‌ಗಳಲ್ಲಿ ತಪಾಸಣೆ ಕೈಗೊಳ್ಳಲಾಯಿತು ಎಂದು ಹೇಳಿವೆ.

## ಒಬಿಸಿ ಅಡಿಯಲ್ಲೇ ಮೀಸಲಾತಿ: ಜರಾಂಗೆ

**ಛತ್ರಪತಿ ಸಂಭಾಜಿನಗರ (ಪಿಟಿಐ):** ಇತರೆ ಹಿಂದುಳಿದ ವರ್ಗದವರು (ಒಬಿಸಿ) ತಮ್ಮ ಕೋಟಾ ಉಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟವು ‘ಸೇಡಿನಿಂದ ಕೂಡಿದ್ದು’ ಎಂದು ಮರಾಠ ಹೋರಾಟಗಾರ ಮನೋಜ್ ಜರಾಂಗೆ ಟೀಕಿಸಿದ್ದು, ಮರಾಠರು ಒಬಿಸಿ ಅಡಿಯಲ್ಲೇ ಮೀಸಲಾತಿ ಬಯಸುತ್ತಾರೆ ಎಂದು ಪ್ರತಿಪಾದಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಒಬಿಸಿಯ ಕೆಲವು ಹೋರಾಟಗಾರರು ನಡೆಸುತ್ತಿರುವ ಪ್ರತಿಭಟನೆಯು ಮರಾಠ ಸಮುದಾಯದವರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಮೀಸಲಾತಿ ಬೇಡಿಕೆಗಾಗಿ ಒಗ್ಗಟ್ಟಿನಿಂದ ಹೋರಾಟ ಮಾಡಲು ನೆರವಾಗಲಿದೆ’ ಎಂದು ಹೇಳಿದರು.

## ರಾಧಾಕೃಷ್ಣನ್ ರಾಜೀನಾಮೆ

**ತಿರುವನಂತಪುರ (ಪಿಟಿಐ):** ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಿರುವ ಎಲ್‌ಡಿಎಫ್‌ನ ಏಕೈಕ ಅಭ್ಯರ್ಥಿ, ಸಿಪಿಎಂನ ಹಿರಿಯ ನಾಯಕ ಕೆ.ರಾಧಾಕೃಷ್ಣನ್ ಅವರು ಮಂಗಳವಾರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಆಲತ್ತೂರು ಲೋಕಸಭಾ ಕ್ಷೇತ್ರದ ಸಂಸದರಾಗಿ ಆಯ್ಕೆಯಾಗಿರುವ ಅವರು ದೇವಸ್ವಂ, ಎಸ್‌ಸಿ–ಎಸ್‌ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಸಿಪಿಎಂನ ಕೇಂದ್ರ ಸಮಿತಿ ಸದಸ್ಯರೂ ಆಗಿರುವ ರಾಧಾಕೃಷ್ಣನ್ ಅವರು ತಮ್ಮ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಸಲ್ಲಿಸಿದರು.

# ಅಮೆರಿಕ ಪೌರತ್ವ: ಹೊಸ ಯೋಜನೆ

### ಅಮೆರಿಕನ್ನರ ಸಂಗಾತಿಗಳಾದ ಸುಮಾರು 5 ಲಕ್ಷ ವಲಸಿಗರಿಗೆ ಅನುಕೂಲ



ಜೋ ಬೈಡನ್

**ನ್ಯೂಯಾರ್ಕ್ (ಎಪಿ):** ಅಮೆರಿಕದಲ್ಲಿ ಕಾನೂನಿನ ಮಾನ್ಯತೆ ಇಲ್ಲದೆ ವಾಸಿಸುತ್ತಿರುವ ಲಕ್ಷಾಂತರ ಮಂದಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಅವರಿಗೆ ಪೌರತ್ವ ನೀಡುವ ಯೋಜನೆಯನ್ನು ಶ್ವೇತಭವನ ಮಂಗಳವಾರ ಪ್ರಕಟಿಸಿದೆ.

ಅಮೆರಿಕ ಪೌರತ್ವ ಇರುವವರ ಅನೇಕ ಸಂಗಾತಿಗಳು ಕಾನೂನಾತ್ಮಕ ಸ್ಥಾನಮಾನವಿಲ್ಲದೆ ದೇಶದಲ್ಲಿ ವಾಸಿಸುತ್ತಿದ್ದಾರೆ. ಹೊಸ ಯೋಜನೆ ಮೂಲಕ ಅವರು ಶಾಶ್ವತ ವಾಸ ಮತ್ತು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು ಎಂದು ಬೈಡನ್ ಆಡಳಿತ ಮಾಹಿತಿ ನೀಡಿದೆ.

ಈ ಯೋಜನೆಯಿಂದ ಅಮೆರಿಕನ್ನರ ಸುಮಾರು 5 ಲಕ್ಷ ಸಂಗಾತಿಗಳಿಗೆ ದೇಶದ ಪೌರತ್ವ ದೊರೆಯುವ ಸಾಧ್ಯತೆ ಇದೆ. ಅಧ್ಯಕ್ಷೀಯ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಅಧ್ಯಕ್ಷ ಜೋ ಬೈಡನ್ ಅವರು ಈ ಯೋಜನೆ ಮೂಲಕ ಮಹತ್ವದ ಹೆಜ್ಜೆ ಇಟ್ಟಿದ್ದಾರೆ.

**ಯಾರು ಅರ್ಹರು?:** 2024ರ ಜೂನ್ 17ರೊಳಗೆ 10 ವರ್ಷ ಅಮೆರಿಕದಲ್ಲಿ ವಾಸಿಸಿರುವ ಮತ್ತು ಅಮೆರಿಕದ ಪ್ರಜೆಯನ್ನು ವಿವಾಹವಾಗಿರುವ ವಲಸಿಗರು ಹೊಸ ಯೋಜನೆಯ ನಿಯಮದ ಅನ್ವಯ ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆ.

ಈ ದಂಪತಿಗಳ ಮಕ್ಕಳು (ಪೋಷಕರೊಂದಿಗೆ ಇದ್ದರೆ) ಸಹ ಅದೇ ಪ್ರಕ್ರಿಯೆ ಅನ್ವಯ ಪೌರತ್ವ ಪಡೆಯಲು ಅರ್ಹತೆ ಪಡೆಯಲಿದ್ದಾರೆ. ಸುಮಾರು 50,000 ಮಕ್ಕಳಿಗೆ ಇದರಿಂದ ಅನುಕೂಲವಾಗಬಹುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ದಂಪತಿಗಳು ಮದುವೆಯಾಗಿ ಎಷ್ಟು ವರ್ಷಗಳಾಗಿವೆ ಎಂಬುದು ಮುಖ್ಯವಲ್ಲ. ಆದರೆ, 2024ರ ಜೂನ್ 17ರ ಬಳಿಕ (ಸೋಮವಾರ) ಯಾವುದೇ ಸಮಯದಲ್ಲಿ 10 ವರ್ಷಗಳ ವಾಸವನ್ನು ಪೂರೈಸುವ ವಲಸಿಗರು ಈ ಯೋಜನೆಯಡಿ ಫಲಾನುಭವಿಯಾಗಲು ಅರ್ಹರಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅರ್ಹ ವಲಸಿಗರ ಅರ್ಜಿ ಮೊದಲು ಅನುಮೋದನೆಗೊಳ್ಳಬೇಕು. ನಂತರ ‘ಗ್ರೀನ್ ಕಾರ್ಡ್’ಗೆ ಅರ್ಜಿ ಸಲ್ಲಿಸಲು ಮೂರು ವರ್ಷಗಳ ಅವಕಾಶ ದೊರೆಯುತ್ತದೆ. ಅಲ್ಲದೆ ಅವರಿಗೆ ತಾತ್ಕಾಲಿಕ ಕೆಲಸದ ಪರವಾನಗಿಯೂ ಸಿಗುತ್ತದೆ. ಜತೆಗೆ ಗಡಿಪಾರು ಕ್ರಮದಿಂದಲೂ ರಕ್ಷಣೆ ದೊರೆಯುತ್ತದೆ.

ಬೇಸಿಗೆ ಅಂತ್ಯದ ವೇಳೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ದೊರೆಯುವ ಸಾಧ್ಯತೆ ಇದೆ. ಈ ಕುರಿತು ಅರ್ಜಿ ಜತೆ ಪಾವತಿಸಬೇಕಾದ ಶುಲ್ಕವನ್ನು ಅಂತಿಮಗೊಳಿಸಲಾಗಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ರಕ್ಷಣೆ ಸಿಕ್ಕಿಂನ ಮಂಗನ್ ಜಿಲ್ಲೆಯ ಚುಂಗ್‌ತಾಂಗ್ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಸಂಕಷ್ಟಕ್ಕೆ ಸಿಲುಕಿದ್ದ ಪ್ರವಾಸಿಗರನ್ನು ರಕ್ಷಿಸಲಾಯಿತು –ಪಿಟಿಐ ಚಿತ್ರ

## ವಯನಾಡ್: ರಾಹುಲ್ ರಾಜೀನಾಮೆ

**ನವದೆಹಲಿ (ಪಿಟಿಐ):** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇರಳದ ವಯನಾಡ್ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರ ಉಳಿಸಿಕೊಂಡಿದ್ದಾರೆ ಎಂದು ಲೋಕಸಭಾ ಸಚಿವಾಲಯ ಮಂಗಳವಾರ ಹೇಳಿದೆ.

ರಾಹುಲ್ ಅವರು ವಯನಾಡ್ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡುವ ವಿಚಾರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಪ್ರಕಟಿಸಿದ್ದರು.

ವಯನಾಡ್ ಕ್ಷೇತ್ರದಲ್ಲಿ, ರಾಹುಲ್ ಅವರ ಸಹೋದರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸ್ಪರ್ಧಿಸಲಿದ್ದಾರೆ.

# ದೆಹಲಿಯಲ್ಲಿ ಬಿಸಿಗಾಳಿ; ವಿದ್ಯುತ್ ಬೇಡಿಕೆ ಗರಿಷ್ಠ ಮಟ್ಟಕ್ಕೆ

**ನವದೆಹಲಿ:** ಉತ್ತರ ಭಾರತದಲ್ಲಿ ಬಿಸಿ ಗಾಳಿ ಮುಂದುವರೆಯುತ್ತಿದ್ದು, ವಿದ್ಯುತ್ ಬೇಡಿಕೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಪೂರೈಕೆದಾರರಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಿರುವ ಇಂಧನ ಸಚಿವಾಲಯವು, ಬಲವಂತದ ವಿದ್ಯುತ್ ಕಡಿತವನ್ನು ಕನಿಷ್ಠ ಮಟ್ಟಕ್ಕಿಳಿಸುವಂತೆ ಸೂಚಿಸಿದೆ.

ಸವಾಲಿನ ಪರಿಸ್ಥಿತಿಯ ನಡುವೆಯೂ, ಉತ್ತರ ಭಾಗದ ಗರಿಷ್ಠ ಮಟ್ಟದ ಬೇಡಿಕೆಯಂತೆ 89 ಗಿಗಾ ವ್ಯಾಟ್ (ಜಿಡಬ್ಲ್ಯು) ವಿದ್ಯುತ್ ಅನ್ನು ಜೂನ್ 17, 2024ರಂದು ಪೂರೈಸಲಾಗಿದೆ ಎಂದು ಸಚಿವಾಲಯವು ತಿಳಿಸಿದೆ.

ಮಂಗಳವಾರ ದೆಹಲಿಯಲ್ಲಿ ಮಧ್ಯಾಹ್ನ 8,647 ಮೆಗಾವ್ಯಾಟ್ ಬೇಡಿಕೆ ಇದ್ದು, ಅದು ನಗರದಲ್ಲಿ ಇದುವರೆಗೆ ಗರಿಷ್ಠ ಮಟ್ಟದ ಬೇಡಿಕೆ ಆಗಿತ್ತು. ಮೇ 22, 2024ರ 8000 ಮೆಗಾವ್ಯಾಟ್ ಬೇಡಿಕೆಯೇ ಇದುವರೆಗಿನ ಗರಿಷ್ಠ ದಾಖಲೆಯಾಗಿತ್ತು. ಸೋಮವಾರ ದೆಹಲಿಯ ಹಲವೆಡೆ ವಿದ್ಯುತ್ ಕಡಿತ ಮಾಡಲಾಗಿತ್ತು.

ಮೇ 17, 2024ರಿಂದ ಉತ್ತರ ಭಾರತದಲ್ಲಿ ಬಿಸಿ ಗಾಳಿಯಿಂದಾಗಿ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ. ಜೂನ್ 20ರ ನಂತರ ಬಿಸಿ ಗಾಳಿ ಕಡಿಮೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ತಿಳಿಸಿದೆ.

### ರಾಜಕೀಯ ವಲಯದಲ್ಲಿ ಚರ್ಚೆ ಹುಟ್ಟುಹಾಕಿದ ಬೆಳವಣಿಗೆ

# ನಡೆಯದ ಯೋಗಿ–ಭಾಗವತ್ ಭೇಟಿ

ಪ್ರಜಾವಾಣಿ ವಾರ್ತೆ

**ಲಖನೌ:** ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ಆರ್‌ಎಸ್‌ಎಸ್ ಸ್ವಯಂ ಸೇವಕರ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿಯಾಗದೇ ನವದೆಹಲಿಗೆ ಹಿಂದಿರುಗಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ಎಡೆಮಾಡಿಕೊಟ್ಟಿದೆ.

ಗೋರಖ್‌ಪುರದಲ್ಲಿ ಐದು ದಿನಗಳಿಂದ ನಡೆಯುತ್ತಿದ್ದ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ ಭಾಗವತ್ ಅವರು ಸೋಮವಾರ ನವದೆಹಲಿಗೆ ವಾಪಸಾದರು. ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಹೀನಾಯ ಪ್ರದರ್ಶನದ ಬಗ್ಗೆ ಚರ್ಚಿಸಲು ಇವರಿಬ್ಬರು ಭೇಟಿಯಾಗುವರು ಎಂದು ನಿರೀಕ್ಷಿಸಲಾಗಿತ್ತು. ಭಾಗವತ್– ಯೋಗಿ ಅವರ ಸಂಭವನೀಯ ಭೇಟಿ ಬಗ್ಗೆ ಸಾಕಷ್ಟು ಊಹಾಪೋಹ ಎದ್ದಿದ್ದವು.

ಬಿಜೆಪಿಯ ಕೆಲವು ಮುಖಂಡರು ನೀಡಿದ ಹೇಳಿಕೆಗಳ ಬಗ್ಗೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆಯ ವೇಳೆ ಸಂಘದ ಸಲಹೆಯನ್ನು ನಿರ್ಲಕ್ಷ್ಯ ಮಾಡಿರುವ ಬಗ್ಗೆ ಆರ್‌ಎಸ್‌ಎಸ್ ಅಸಮಾಧಾನ ಹೊಂದಿದೆ ಎನ್ನಲಾಗಿದೆ. ಇದೀಗ, ಯೋಗಿ–ಭಾಗವತ್ ಭೇಟಿ ನಡೆಯದೇ ಇರುವುದು ಸಾಕಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿವೆ.

ಗೋರಖ್‌ಪುರದ ಮಾನೀರಾಮ್‌ನಲ್ಲಿ ನಡೆದ ಸಂಘದ ಸ್ವಯಂಸೇವಕರ ಶಿಬಿರಕ್ಕೆ ಚಾಲನೆ ನೀಡಲು ಭಾಗವತ್ ಬಂದ ಸಂದರ್ಭದಲ್ಲಿ, ಆದಿತ್ಯನಾಥ ಅವರು ವಾರಾಣಸಿಯಲ್ಲಿದ್ದರು. ಆದರೆ ಶುಕ್ರವಾರ ರಾತ್ರಿಯೇ ಅವರು ಗೋರಖ್‌ಪುರಕ್ಕೆ ವಾಪಸಾಗಿದ್ದರು.

ಮೂಲಗಳ ಪ್ರಕಾರ, ಆದಿತ್ಯನಾಥ ಅವರು ಭಾಗವತ್ ಅವರನ್ನು ಶನಿವಾರ ಭೇಟಿ ಮಾಡಲು ಎರಡು ಬಾರಿ ಸಮಯ ಕೋರಿದ್ದರಂತೆ. ಆದರೆ, ಅದಕ್ಕೆ ಭಾಗವತ್ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿರುವ ಸಂಘದ ಮುಖಂಡರೊಬ್ಬರು, ಆರ್‌ಎಸ್‌ಎಸ್ ಮುಖ್ಯಸ್ಥರ ಕಾರ್ಯಕ್ರಮಗಳು ಬಹಳ ಹಿಂದೆಯೇ ನಿಗದಿಯಾಗಿದ್ದವು. ಹೀಗಾಗಿ ಕೊನೆಯ ಗಳಿಗೆಯಲ್ಲಿ ಅದರಲ್ಲಿ ಬದಲಾವಣೆ ಮಾಡಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದರು.

ಸೂಪರ್ ಎಂಟರ ಹಂತದ ಮೊದಲ ಪಂದ್ಯ ಇಂದು: ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳಿಗೆ ಸತ್ವಪರೀಕ್ಷೆ

# ಮರ್ಕರಂ ಬಳಗಕ್ಕೆ ಅಮೆರಿಕ ಸವಾಲು



ಏಡನ್ ಮರ್ಕರಂ ಎಎಫ್‌ಪಿ ಚಿತ್ರ

ಆರನ್ ಜೋನ್ಸ್ ಎಎಫ್‌ಪಿ ಚಿತ್ರ

**ಸಮಯ: ರಾತ್ರಿ 8 ನೇರಪ್ರಸಾರ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಹಾಟ್‌ಸ್ಟಾರ್ ಆ್ಯಪ್**

ನಾರ್ತ್ ಸೌಂಡ್ (ಆ್ಯಂಟಿಗಾ), (ಪಿಟಿಐ): ಸ್ಫೂರ್ತಿಯುತ ಅಮೆರಿಕ ತಂಡವು ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಪ್ರಬಲ ದಕ್ಷಿಣ ಆಫ್ರಿಕಾ ತಂಡವನ್ನು ಬುಧವಾರ ಎದುರಿಸಲಿದೆ. ದಕ್ಷಿಣ ಆಫ್ರಿಕಾ ತಂಡದ ವಿಶ್ವದರ್ಜೆಯ ಬ್ಯಾಟರ್‌ಗಳು ಸರ್ ವಿವ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ತಮ್ಮ ನೈಜ ಸಾಮರ್ಥ್ಯವನ್ನು ಪ್ರದರ್ಶಿಸಬೇಕಾದ ಸವಾಲು ಎದುರಿಸುತ್ತಿದ್ದಾರೆ.

ಈ ಟೂರ್ನಿಯಲ್ಲಿ ಅಜೇಯವಾಗುಳಿದಿರುವ ತಂಡಗಳಲ್ಲಿ ದಕ್ಷಿಣ ಆಫ್ರಿಕಾ ತಂಡ ಒಂದಾಗಿದೆ. ಆದರೆ ಎಲ್ಲಾ ನಾಲ್ಕೂ ಪಂದ್ಯಗಳಲ್ಲಿ ಬೌಲರ್‌ಗಳ ಶ್ರಮವೇ ಗೆಲುವಿನಲ್ಲಿ ಎದ್ದುಕಂಡಿದೆ.

ಸವಾಲಾಗಿದ್ದ ನ್ಯೂಯಾರ್ಕ್‌ನ ಪಿಚ್‌ಗಳಲ್ಲಿ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡಿಲ್ಲ. ನೇಪಾಳದ ದಾಳಿಯೆದುರೂ ಅದರ ಬ್ಯಾಟರ್‌ಗಳು ಪರದಾಡಿದ್ದರು.

ಬೀಸಾಟ ಆಡುವ ಕ್ವಿಂಟನ್ ಡಿಕಾಕ್, ಹೆನ್ರಿಚ್ ಕ್ಲಾಸೆನ್, ಟ್ರಿಸ್ಟನ್ ಸ್ಟಬ್ಸ್ ಮತ್ತು ಡೇವಿಡ್ ಮಿಲ್ಲರ್ ಅಂಥ ಆಟಗಾರರಿದ್ದರೂ ತಂಡದಿಂದ ಖ್ಯಾತಿಗೆ ತಕ್ಕ ಬ್ಯಾಟಿಂಗ್ ಬಂದಿಲ್ಲ.

ಡಿಕಾಕ್, ರೀಜಾ ಹೆನ್ರಿಕ್ಸ್ ಮತ್ತು ನಾಯಕ ಏಡನ್ ಮರ್ಕರಂ ಉತ್ತಮ ಇನಿಂಗ್ಸ್ ಆಡಬೇಕಾದ ಒತ್ತಡದಲ್ಲಿದ್ದಾರೆ.

ಸೂಪರ್ ಎಂಟರಲ್ಲಿ ಎರಡನೇ ಗುಂಪಿನಲ್ಲಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ ಮುಂದಿನ ಪಂದ್ಯಗಳನ್ನು ಹಾಲಿ ಚಾಂಪಿಯನ್ ಇಂಗ್ಲೆಂಡ್, ಆತಿಥೇಯ ವೆಸ್ಟ್ ಇಂಡೀಸ್ ಎದುರು ಆಡಬೇಕಾಗಿರುವ ಕಾರಣ ಅಮೆರಿಕದ ವಿರುದ್ಧದ ಪಂದ್ಯವನ್ನು ಗೆಲುವಿನೊಡನೇ ಆರಂಭಿಸುವ ಸವಾಲು ಇದೆ.

ಬೌಲರ್‌ಗಳ ಪೈಕಿ ಆ್ಯನ್ರಿಚ್ ನಾಕಿಯಾ ಅವರ ಅಸ್ಥಿರ ಪ್ರದರ್ಶನ ಕೊಂಚ ಚಿಂತೆಗೆ ಕಾರಣವಾಗಿದೆ.

ಆದರೆ ಗುಂಪು ಹಂತದ ಎರಡು ಪಂದ್ಯಗಳಲ್ಲಿ ಅವರು ಆಕರ್ಷಕ ಬೌಲಿಂಗ್ ಪ್ರದರ್ಶಿಸಿದ್ದಾರೆ. 9 ವಿಕೆಟ್‌ಗಳೊಂದಿಗೆ ಅವರು ಎರಡನೇ ಸ್ಥಾನ ಜಂಟಿಯಾಗಿ ಹಂಚಿಕೊಂಡಿದ್ದಾರೆ. ನಾಕಿಯಾ ಮತ್ತು ಒಟ್ನೀಲ್ ಬಾರ್ಟ್‌ಮನ್ ಜೋಡಿ ಪ್ರಬಲವಾಗಿದೆ.

ಅನನುಭವಿ ಅಮೆರಿಕ ಎದುರು ಉತ್ತಮ ಪ್ರದರ್ಶನಕ್ಕೆ ಮಾರ್ಕೊ ಯಾನ್ಸೆನ್ ಮತ್ತು ಕಗಿಸೊ ರಬಾಡ ಕೂಡ ತವಕದಿಂದಿದ್ದಾರೆ.

ಭಾರತ ಮೂಲದ ಎಂಟು, ಪಾಕ್ ಮೂಲದ ಇಬ್ಬರು, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ನೆದರ್ಲೆಂಡ್ಸ್ ಮೂಲದ ತಲಾ ಒಬ್ಬರನ್ನು ಹೊಂದಿರುವ ಅಮೆರಿಕ ತನ್ನ ಮೊದಲ ಯತ್ನದಲ್ಲೇ ಸೂಪರ್ ಎಂಟಕ್ಕೆ ಲಗ್ಗೆಹಾಕಿದ್ದು, ಉತ್ಸಾಹದಿಂದಿದೆ. ಮೊನಾಂಕ್ ಪಟೇಲ್ ಸಾರಥ್ಯದ ತಂಡವು, ಆಕ್ರಮಣಕಾರಿ ಆಟದ ಬ್ರಾಂಡ್ ಪ್ರದರ್ಶಿಸಿದೆ.

ಲೀಗ್ ತಂಡದಲ್ಲಿ ಮಾಜಿ ಚಾಂಪಿಯನ್ ಪಾಕ್ ತಂಡವನ್ನು ಮಣಿಸಿದ್ದ ಅಮೆರಿಕ ನಂತರ ಎರಡು ಪಂದ್ಯ ಸೋತರೂ ಹೋರಾಟ ತೋರಿತ್ತು. ಆಫ್ರಿಕಾ ಎದುರು ಗೆಲ್ಲುವುದು ಕಠಿಣವಾದರೂ, ತಂಡ ಉತ್ಸಾಹದಿಂದ ಸಿದ್ಧವಾಗಿರುವುದಂತೂ ದಿಟ.

‘ಸೂಪರ್ ಎಂಟರ ಸವಾಲನ್ನು ಎದುರು ನೋಡುತ್ತಿದ್ದೇವೆ. ಕಳೆದ ಕೆಲ ವಾರಗಳಿಂದ ನಾವು ಉತ್ತಮ ತಂಡದ ಎದುರೂ ಆಡಬಲ್ಲೆವು ಎಂಬುದನ್ನು ಶ್ರುತಪಡಿಸಿದ್ದೇವೆ’ ಎಂದು ಉಪನಾಯಕ ಆರನ್ ಜೋನ್ಸ್ ಕಳೆದ ವಾರ ಹೇಳಿದ್ದರು.

**ತಂಡಗಳು ಇಂತಿವೆ:** ಏಡನ್ ಮರ್ಕರಂ (ನಾಯಕ), ಒಟ್ನೀಲ್ ಬಾರ್ಟ್‌ಮನ್, ಜೆರಾಲ್ಡ್ ಕೋಟ್ಝಿ, ಕ್ವಿಂಟನ್ ಡಿಕಾಕ್, ಬ್ಯೋರ್ನ್ ಫಾರ್ಟುಯಿ, ರೀಝಾ ಹೆಂಡ್ರಿಕ್ಸ್, ಮಾರ್ಕೊ ಯಾನ್ಸೆನ್, ಹೆನ್ರಿಚ್ ಕ್ಲಾಸೆನ್, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಆ್ಯನ್ರಿಚ್ ನಾಕಿಯಾ, ಕಗಿಸೊ ರಬಾಡ, ರಿಯಾನ್ ರಿಕೆಲ್ಟನ್, ತಬ್ರೇಜ್ ಶಂಸಿ, ಟ್ರಿಸ್ಟನ್ ಸ್ಟಬ್ಸ್.

**ಅಮೆರಿಕ:** ಮೊನಾಂಕ್ ಪಟೇಲ್ (ನಾಯಕ), ಆರನ್ ಜೋನ್ಸ್, ಆಂಡ್ರಿಯಸ್ ಗವುಸ್, ಕೋರಿ ಆ್ಯಂಡರ್ಸನ್, ಅಲಿ ಖಾನ್, ಹರ್ಮೀತ್ ಸಿಂಗ್, ಜೆಸ್ಸಿ ಸಿಂಗ್, ಮಿಲಿಂದ್ ಕುಮಾರ್, ನಿಸರ್ಗ್ ಪಟೇಲ್, ನಿತೀಶ್ ಕುಮಾರ್, ನಾಸ್ತುಷ್ ಕೆಂಜಿಗೆ, ಸೌರಭ್ ನೇತ್ರಾವಳ್ಕರ್, ಶಾಡ್ಲಿ ವಾನ್ ಶಾಲ್ಕ್‌ವಿಕ್, ಸ್ಟೀವನ್ ಟೇಲರ್, ಶಯನ್ ಜಹಾಂಗಿರ್.

| ಟಿ20 ವಿಶ್ವಕಪ್: ಸೂಪರ್ ಎಂಟರ ವೇಳಾಪಟ್ಟಿ | | | |
|---|---|---|---|
| ಜೂನ್ 19 | ಅಮೆರಿಕ–ದಕ್ಷಿಣ ಆಫ್ರಿಕಾ | ರಾತ್ರಿ 8 | ಆ್ಯಂಟಿಗಾ |
| ಜೂನ್ 20 | ಇಂಗ್ಲೆಂಡ್–ವೆಸ್ಟ್ ಇಂಡೀಸ್ | ಬೆಳಿಗ್ಗೆ 6 | ಸೇಂಟ್ ಲೂಸಿಯಾ |
| ಜೂನ್ 20 | ಅಫ್ಗಾನಿಸ್ತಾನ–ಭಾರತ | ರಾತ್ರಿ 8 | ಬಾರ್ಬಡೋಸ್ |
| ಜೂನ್ 21 | ಆಸ್ಟ್ರೇಲಿಯಾ–ಬಾಂಗ್ಲಾದೇಶ | ಬೆಳಿಗ್ಗೆ 6 | ಆ್ಯಂಟಿಗಾ |
| ಜೂನ್ 21 | ಇಂಗ್ಲೆಂಡ್–ದಕ್ಷಿಣ ಆಫ್ರಿಕಾ | ರಾತ್ರಿ 8 | ಸೇಂಟ್ ಲೂಸಿಯಾ |
| ಜೂನ್ 22 | ಅಮೆರಿಕ–ವೆಸ್ಟ್ ಇಂಡೀಸ್ | ಬೆಳಿಗ್ಗೆ 6 | ಬಾರ್ಬಡೋಸ್ |
| ಜೂನ್ 22 | ಭಾರತ–ಬಾಂಗ್ಲಾದೇಶ | ರಾತ್ರಿ 8 | ಆ್ಯಂಟಿಗಾ |
| ಜೂನ್ 23 | ಅಫ್ಗಾನಿಸ್ತಾನ–ಆಸ್ಟ್ರೇಲಿಯಾ | ಬೆಳಿಗ್ಗೆ 6 | ಸೇಂಟ್ ವಿನ್ಸೆಂಟ್ |
| ಜೂನ್ 23 | ಅಮೆರಿಕ–ಇಂಗ್ಲೆಂಡ್ | ರಾತ್ರಿ 8 | ಬಾರ್ಬಡೋಸ್ |
| ಜೂನ್ 24 | ವೆಸ್ಟ್ ಇಂಡೀಸ್–ದಕ್ಷಿಣ ಆಫ್ರಿಕಾ | ಬೆಳಿಗ್ಗೆ 6 | ಆ್ಯಂಟಿಗಾ |
| ಜೂನ್ 24 | ಆಸ್ಟ್ರೇಲಿಯಾ–ಭಾರತ | ರಾತ್ರಿ 8 | ಸೇಂಟ್ ಲೂಸಿಯಾ |
| ಜೂನ್ 25 | ಅಫ್ಗಾನಿಸ್ತಾನ–ಬಾಂಗ್ಲಾದೇಶ | ಬೆಳಿಗ್ಗೆ 6 | ಸೇಂಟ್ ವಿನ್ಸೆಂಟ್ |
| ಜೂನ್ 27 | ಸೆಮಿಫೈನಲ್ 1 | ಬೆಳಿಗ್ಗೆ 6 | ಟ್ರಿನಿಡಾಡ್ |
| ಜೂನ್ 27 | ಸೆಮಿಫೈನಲ್ 2 | ರಾತ್ರಿ 7.30 | ಗಯಾನಾ |
| ಜೂನ್ 29 | ಫೈನಲ್ | ರಾತ್ರಿ 8 | ಬಾರ್ಬಡೋಸ್ |

# ಪೂರನ್ ಅಬ್ಬರಕ್ಕೆ ಅಫ್ಗನ್ ಸುಸ್ತು

## ಕೊನೆಯ ಲೀಗ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ಗೆ ಜಯ



ನಿಕೋಲಸ್ ಪೂರನ್ ಬಿರುಸಿನ ಹೊಡೆತಕ್ಕೆ ಮುಂದಾದ ಕ್ಷಣ.. ಎಎಫ್‌ಪಿ ಚಿತ್ರ

ಗ್ರಾಸ್ ಐಲೆಟ್ (ಸೇಂಟ್ ಲೂಸಿಯಾ), (ಪಿಟಿಐ): ಎಡಗೈ ಬ್ಯಾಟರ್ ನಿಕೋಲಸ್ ಪೂರನ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಆತಿಥೇಯ ವೆಸ್ಟ್ ಇಂಡೀಸ್ ತಂಡ ಮಂಗಳವಾರ 104 ರನ್‌ಗಳಿಂದ ಅಫ್ಗಾನಿಸ್ತಾನ ತಂಡವನ್ನು ಅಧಿಕಾರಯುತವಾಗಿ ಸೋಲಿಸಿ ಟಿ20 ವಿಶ್ವಕಪ್ ‘ಸಿ’ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಜೊತೆಗೆ ಸೂಪರ್ ಎಂಟರ ಹಂತಕ್ಕೆ ಭರ್ಜರಿಯಾಗೇ ಸಿದ್ಧತೆ ನಡೆಸಿತು.

ಎರಡೂ ತಂಡಗಳು ಈ ಪಂದ್ಯಕ್ಕೆ ಮೊದಲೇ ಸೂಪರ್ ಎಂಟರಲ್ಲಿ ಸ್ಥಾನ ಪಡೆದಿದ್ದವು. ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತನ್ನ ಪ್ರಬಲ ಬ್ಯಾಟಿಂಗ್ ತಾಕತ್ತನ್ನು ಮೆರೆದು 5 ವಿಕೆಟ್‌ಗೆ 218 ರನ್ ಕಲೆಹಾಕಿತು. ಪೂರನ್ ಅವರು 53 ಎಸೆತಗಳ ಬಿರುಸಿನ ಇನಿಂಗ್ಸ್‌ನಲ್ಲಿ ಎಂಟು ಸಿಕ್ಸರ್, ಆರು ಬೌಂಡರಿಗಳಿದ್ದ 98 ರನ್ ಬಾಚಿದರು.

ಟಿ20 ವಿಶ್ವಕಪ್‌ನಲ್ಲಿ ಇದು ವೆಸ್ಟ್ ಇಂಡೀಸ್‌ನ ಅತ್ಯಧಿಕ ಮೊತ್ತ ಮತ್ತು ಹಾಲಿ ವಿಶ್ವಕಪ್‌ನಲ್ಲಿ ದಾಖಲಾದ ಗರಿಷ್ಠ ಮೊತ್ತ. ದೊಡ್ಡ ಮೊತ್ತದೆದುರು ಒತ್ತಡಕ್ಕೆ ಒಳಗಾದ ಅಫ್ಗಾನಿಸ್ತಾನ 16.2 ಓವರುಗಳಲ್ಲಿ 114 ರನ್‌ಗಳಿಗೆ ಕುಸಿಯಿತು.

ಟಾಸ್ ಗೆದ್ದು ಬೌಲಿಂಗ್ ಮಾಡುವ ರಶೀದ್ ಖಾನ್ ನಿರ್ಧಾರ ತಿರುಗುಬಾಣವಾಯಿತು. ಪೂರನ್ ಜೊತೆಗೆ, ಆರಂಭ ಆಟಗಾರ ಜಾನ್ಸನ್ ಚಾರ್ಲ್ಸ್ (43), ಶಾಯ್ ಹೋಪ್ (25) ಮತ್ತು ರೋವ್ಮನ್ ಪೊವೆಲ್ (26) ಅವರೂ ಉಪಯುಕ್ತ ಆಟವಾಡಿದರು. ಅಫ್ಗನ್ನರ ಪರ ಗುಲ್ಬದಿನ್ ನೈಬ್ 2 ಓವರುಗಳಲ್ಲಿ 2 ವಿಕೆಟ್ ಪಡೆದರು.

ದೊಡ್ಡ ಸವಾಲೆದುರಿಸಿದ ಅಫ್ಗಾನಿಸ್ತಾನ ಮೊದಲ ಓವರ್‌ನಲ್ಲೇ ತನ್ನ ಯಶಸ್ವಿ ಆಟಗಾರ ರಹಮಾನುಲ್ಲಾ ಗುರ್ಬಾಜ್ ಅವರ ವಿಕೆಟ್ ಕಳೆದುಕೊಂಡಿತು. ಇಬ್ರಾಹಿಂ ಜದ್ರಾನ್ (38, 28ಎ) ಮತ್ತು ಅಜ್ಮತ್‌ಉಲ್ಲಾ ಒಮರ್‌ಝೈ (23, 19ಎ) ಕೆಲಕಾಲ ಪ್ರತಿರೋಧ ತೋರಿದರು.

ಇದಕ್ಕೆ ಮೊದಲು ವೆಸ್ಟ್ ಇಂಡೀಸ್ ಬ್ರಾಂಡನ್ ಕಿಂಗ್ ಅವರನ್ನು ಬೇಗ ಕಳೆದುಕೊಂಡರೂ, ಮೊದಲ ಐದು ಮತ್ತು ಕೊನೆಯ ಐದು ಓವರ್‌ಗಳಲ್ಲಿ ರನ್ ಸೂರೆ ಮಾಡಿತು.ಅಜ್ಮತ್‌ಉಲ್ಲಾ ಒಮರ್‌ಝೈ ಅವರು ಮಾಡಿದ ಇನಿಂಗ್ಸ್‌ನ ನಾಲ್ಕನೇ ಓವರಿನಲ್ಲಿ 36 ರನ್‌ಗಳು ಹರಿದುಬಂದವು. (6, ನೋಬಾಲ್‌ನಲ್ಲಿ 5, ವೈಡ್‌ನಲ್ಲಿ5, 0, 4ಲೆಗ್‌ಬೈ, 4, 6,6). ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಇಷ್ಟೊಂದು ರನ್ ಹರಿದಿದ್ದು ಇದು ಎರಡನೇ ಸಲ. ಪೂರನ್ ಅವರೇ ಸಿಂಹಪಾಲು ರನ್ ಹೊಡೆದರು.

ಆರು ಓವರ್ ಆಗುವಷ್ಟರಲ್ಲಿ ಚಾರ್ಲ್ಸ್ ಮತ್ತು ಪೂರನ್ ಆಟದಿಂದ ವಿಂಡೀಸ್ 1 ವಿಕೆಟ್‌ಗೆ 92 ರನ್ ಪೇರಿಸಿತ್ತು. ಇದು ಟಿ20 ವಿಶ್ವಕಪ್ ಇತಿಹಾಸದಲ್ಲಿ ಪವರ್‌ಪ್ಲೇ ಒಂದರಲ್ಲಿ ದಾಖಲಾದ ಅತ್ಯಧಿಕ ಮೊತ್ತ. ರಶೀದ್ ಮಾಡಿದ ಪಂದ್ಯದ 18ನೇ ಓವರ್‌ನಲ್ಲಿ ಪೂರನ್ ಅವರು 24 ರನ್ ದೋಚಿದರು. ಆ ಹಾದಿಯಲ್ಲಿ ಪೂರನ್ ವೆಸ್ಟ್ ಇಂಡೀಸ್ ಪರ ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ್ದ ಕ್ರಿಸ್ ಗೇಲ್ (124 ಸಿಕ್ಸರ್) ಅವರನ್ನು ಹಿಂದೆಹಾಕಿದರು. ಶತಕ ಗಳಿಸುವ ಅವಸರದಲ್ಲಿ ಅವರು ಕೊನೆಯ ಓವರ್‌ನಲ್ಲಿ ರನೌಟ್ ಆದರು.

**ಸ್ಕೋರುಗಳು: ವೆಸ್ಟ್ ಇಂಡಿಸ್:** 20 ಓವರುಗಳಲ್ಲಿ 5 ವಿಕೆಟ್‌ಗೆ 218 (ಜಾನ್ಸನ್ ಚಾರ್ಲ್ಸ್ 43, ನಿಕೋಲಸ್ ಪೂರನ್ 98, ಶಾಯ್ ಹೋಪ್ 25, ರೋವ್ಮನ್ ಪೊವೆಲ್ 26; ಗುಲ್ಬದಿನ್ ನೈಬ್ 14ಕ್ಕೆ2);

**ಅಫ್ಗಾನಿಸ್ತಾನ:** 16.2 ಓವರುಗಳಲ್ಲಿ 114 (ಇಬ್ರಾಹಿಂ ಜದ್ರಾನ್ 38, ಅಜ್ಮತ್‌ಉಲ್ಲಾ ಒಮರ್‌ಝೈ 23; ಅಕೀಲ್ ಹುಸೇನ್ 21ಕ್ಕೆ2, ರಸೆಲ್ 17ಕ್ಕೆ1, ಗುಡಕೇಶ್ ಮೋತಿ 28ಕ್ಕೆ2, ಒಬೇದ್ ಮೆಕಾಯ್ 14ಕ್ಕೆ3). ಪಂದ್ಯದ ಆಟಗಾರ: ನಿಕೋಲಸ್ ಪೂರನ್.

ಭಾರತ ತಂಡದ ನಾಯಕ ರೋಹಿತ್ ಅಭಿಪ್ರಾಯ

# ಸೂಪರ್ 8 ವೇಳಾಪಟ್ಟಿ: ಬಿಡುವು ಕೊರತೆ



ರೋಹಿತ್ ಶರ್ಮಾ ಮತ್ತು ರಾಹುಲ್ ದ್ರಾವಿಡ್ –ಎಪಿ/ಪಿಟಿಐ ಚಿತ್ರ

ಬ್ರಿಜ್‌ಟೌನ್, ಬಾರ್ಬಡೊಸ್(ಪಿಟಿಐ): ವೆಸ್ಟ್ ಇಂಡೀಸ್‌ನಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8ರ ಹಂತದ ವೇಳಾಪಟ್ಟಿಯಲ್ಲಿ ಬಿಡುವಿನ ತುಸು ಕೊರತೆ ಇದೆ. ಆದರೂ ತಮ್ಮ ಬಳಗದ ಆಟಗಾರರು ಈ ಸವಾಲಿಗೆ ಸನ್ನದ್ಧರಾಗಿದ್ದಾರೆ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಭಾರತ ತಂಡವು ಇದೇ ಈ ಹಂತದಲ್ಲಿ ಮೂರು ಪಂದ್ಯಗಳನ್ನು ಆಡಲಿದೆ. ಅಫ್ಗಾನಿಸ್ತಾನ (ಜೂನ್ 20), ಬಾಂಗ್ಲಾದೇಶ (ಜೂನ್ 22) ಹಾಗೂ ಆಸ್ಟ್ರೇಲಿಯಾ (ಜೂನ್ 24) ತಂಡಗಳನ್ನು ಎದುರಿಸಲಿದೆ.

‘ಮೊದಲ ಪಂದ್ಯ ಆಡಿದ ನಂತರದ 3–4 ದಿನಗಳ ಅಂತರದಲ್ಲಿ ಮತ್ತೆರೆಡೂ ಪಂದ್ಯಗಳನ್ನು ಆಡುತ್ತೇವೆ. ಇದು ಸ್ವಲ್ಪ ದಟ್ಟಣೆಯ ವೇಳಾಪಟ್ಟಿ ಎನಿಸುತ್ತದೆ. ಪ್ರಯಾಣದ ಒತ್ತಡ ಹಾಗೂ ಆಟದ ಗುಣಮಟ್ಟಗಳೆರಡನ್ನೂ ಕಾಪಾಡಿಕೊಳ್ಳಬೇಕು. ಆದರೆ ಇದರಲ್ಲಿ ಯಾವುದೇ ರಾಜೀ ಇಲ್ಲ’ ಎಂದು ಬಿಸಿಸಿಐ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ರೋಹಿತ್ ಹೇಳಿದ್ದಾರೆ.

ರೋಹಿತ್ ಸೇರಿದಂತೆ ತಂಡದ ಎಲ್ಲ ಆಟಗಾರರೂ ಸೋಮವಾರ ಹೆಚ್ಚು ಹೊತ್ತು ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದ್ದರು.

‘ತಂಡದ ಆಟಗಾರರು ಹುರುಪಿನಲ್ಲಿದ್ದಾರೆ. ಪಂದ್ಯಗಳಲ್ಲಿ ವಿಶೇಷವಾದ ಸಾಧನೆ ಮಾಡಿ ತೋರಿಸುವ ತವಕದಲ್ಲಿದ್ದಾರೆ. ಎಲ್ಲರೂ ತಮ್ಮ ಛಾಪು ಮೂಡಿಸುವ ಛಲದಲ್ಲಿದ್ದಾರೆ. ಇದರಿಂದಾಗಿ ತಂಡದ ಬಲವರ್ಧನೆಯಾಗಿದೆ’ ಎಂದು ರೋಹಿತ್ ಹೇಳಿದ್ದಾರೆ.

ಅಮೆರಿಕದಲ್ಲಿ ನಡೆದ ಗುಂಪು ಹಂತದ ಪಂದ್ಯಗಳಲ್ಲಿ ಭಾರತದ ಬ್ಯಾಟರ್‌ಗಳು ನಿರೀಕ್ಷಿತ ಮಟ್ಟದಲ್ಲಿ ಆಡಿರಲಿಲ್ಲ. ಅಲ್ಲಿ ಬಳಸಲಾಗಿದ್ದ ಡ್ರಾಪ್ ಇನ್ ಪಿಚ್‌ಗಳಲ್ಲಿ ಆಡಿದ್ದ ಬಹುತೇಕ ಎಲ್ಲ ತಂಡಗಳ ಬ್ಯಾಟರ್‌ಗಳೂ ರನ್ ಗಳಿಸಲು ಪರದಾಡಿದ್ದರು.

‘ಕೆರೀಬಿಯನ್ ದ್ವೀಪಗಳಲ್ಲಿಯ ಪಿಚ್ ಗಳಲ್ಲಿ ನಾವು ಬಹಳಷ್ಟು ಪಂದ್ಯಗಳನ್ನು ನೋಡಿದ್ದೇವೆ. ನಾವು ಕೂಡ ಆಡಿದ್ದೇವೆ. ಒಟ್ಟಿನಲ್ಲಿ ಫಲಿತಾಂಶವನ್ನು ನಮ್ಮ ಪರವಾಗಿ ಒಲಿಸಿಕೊಳ್ಳುವುದೊಂದೇ ಗುರಿಯಾಗಿದೆ’ ಎಂದರು.

# ಸರಣಿ ಕೈವಶದತ್ತ ಹರ್ಮನ್ ಪ್ರೀತ್ ಪಡೆ ಕಣ್ಣು

## ಬೆಂಗಳೂರಿನಲ್ಲಿ ಭಾರತ –ದಕ್ಷಿಣ ಆಫ್ರಿಕಾ ನಡುವೆ ಎರಡನೇ ಏಕದಿನ ಕ್ರಿಕೆಟ್ ಪಂದ್ಯ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತ ಮಹಿಳಾ ತಂಡವು ಎರಡು ದಿನಗಳ ಹಿಂದೆ ಸ್ಮೃತಿ ಮಂದಾನ ಅವರ ಚೆಂದದ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಜಯಿಸಿತ್ತು. ಇದೀಗ ಸರಣಿ ಕೈವಶದ ಮೇಲೆ ಕಣ್ಣಿಟ್ಟಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿರುವ ಪಂದ್ಯವು ದಕ್ಷಿಣ ಆಫ್ರಿಕಾ ತಂಡಕ್ಕೆ ಸರಣಿ ಗೆಲುವಿನ ಆಸೆಯನ್ನು ಜೀವಂತವಾಗಿರಿಸಿಕೊಳ್ಳುವ ಕಡೆಯ ಅವಕಾಶವೂ ಹೌದು. ಅದಕ್ಕಾಗಿ ತನ್ನ ಬ್ಯಾಟಿಂಗ್ ವಿಭಾಗವನ್ನು ಬಲಿಷ್ಠಗೊಳಿಸಿಕೊಂಡು ಕಣಕ್ಕಿಳಿಯಬೇಕಾದ ಒತ್ತಡ ಪ್ರವಾಸಿ ತಂಡಕ್ಕಿದೆ. ತಿರುಗೇಟು ನೀಡುವ ಸಾಮರ್ಥ್ಯವೂ ನಾಯಕಿ ಲಾರಾ ವೊಲ್ವಾರ್ಡ್ಟ್, ತಂಜೀಮ್ ಬ್ರಿಟ್ಸ್, ಅನೆಕಿ ಬಾಷ್ ಹಾಗೂ ಅನುಭವಿ ಆಟಗಾರ್ತಿ ಮರಿಝೇನ್ ಕಾಪ್ ಅವರಿಗೆ ಇದೆ. ಆದರೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಬೇಕಿದೆ.

ಭಾರತ ತಂಡದ ಬ್ಯಾಟಿಂಗ್ ಬಲ ಕೂಡ ಅನಿಶ್ಚಿತತೆಯಿಂದ ಕೂಡಿದೆ. ಮೊದಲ ಪಂದ್ಯದಲ್ಲಿ ಸ್ಮೃತಿ ಬಿಟ್ಟರೆ ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಕೇವಲ 10 ರನ್ ಗಳಿಸಿದ್ದರು. ಗಾಯದಿಂದ ಚೇತರಿಸಿಕೊಂಡು ಮರಳಿರುವ ಜೆಮಿಮಾ ರಾಡ್ರಿಗಸ್, ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ, ಹಾಗೂ ದಯಾಳನ್ ಹೇಮಲತಾ ಅವರು ತಮ್ಮ ಲಯ ಕಂಡುಕೊಂಡರೆ ತಂಡದ ಬ್ಯಾಟಿಂಗ್ ಬಲಿಷ್ಠವಾಗಲಿದೆ.

ಆಲ್‌ರೌಂಡರ್ ದೀಪ್ತಿ ಶರ್ಮಾ ಮತ್ತು ಪೂಜಾ ವಸ್ತ್ರಕರ್ ಅವರು ಬ್ಯಾಟಿಂಗ್‌ನಲ್ಲಿಯೂ ಮಹತ್ವದ ಕಾಣಿಕೆ ನೀಡಿದ್ದರು. ಅದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತ್ತು. ಸ್ಪಿನ್ನರ್ ಆಶಾ ಶೋಭನಾ ಮತ್ತು ದೀಪ್ತಿ ಇಬ್ಬರೂ ಬೌಲಿಂಗ್‌ನಲ್ಲಿಯೂ ಕೈಚಳಕ ತೋರಿ ತಂಡದ ಗೆಲುವಿಗೆ ಕಾರಣರಾಗಿದ್ದರು.

ಈ ಪಂದ್ಯದಲ್ಲಿಯೂ ಅದೇ ಲಯವನ್ನು ಬೌಲರ್‌ಗಳು ಮುಂದುವರಿಸಿದರೆ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

**ಪಂದ್ಯ ಆರಂಭ: ಮಧ್ಯಾಹ್ನ 1.30. ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್**



ಭಾರತ ತಂಡದ ಆಟಗಾರ್ತಿಯರ ಅಭ್ಯಾಸ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ

# ಚೆಸ್ ಟೂರ್ನಿ: ಅರ್ಜುನ್‌ಗೆ ಪ್ರಶಸ್ತಿ

**ನವದೆಹಲಿ (ಪಿಟಿಐ):** ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ಮತ್ತೊಮ್ಮೆ ಅಮೋಘ ಆಟವಾಡಿ ಅರ್ಮೇನಿಯಾದ ಜೆರ್ಮುಕ್‌ನಲ್ಲಿ ನಡೆದ ಸ್ಟೆಪಾನ್ ಅವಗ್ಯಾನ್ ಸ್ಮಾರಕ ಚೆಸ್ ಟೂರ್ನಿಯಲ್ಲಿ ಒಂದು ಸುತ್ತು ಉಳಿದಿರುವಂತೆಯೇ ಪ್ರಶಸ್ತಿ ಗೆದ್ದುಕೊಂಡರು.

20 ವರ್ಷದ ಅರ್ಜುನ್, 9 ಸುತ್ತುಗಳ ಈ ಟೂರ್ನಿಯ ಎಂಟನೇ ಸುತ್ತಿನಲ್ಲಿ ರಷ್ಯಾದ ಗ್ರ್ಯಾಂಡ್‌ಮಾಸ್ಟರ್ ವೊಲೊಡರ್ ಮುರ್ಜಿನ್ ಅವರನ್ನು 63 ನಡೆಗಳಲ್ಲಿ ಸೋಲಿಸಿದರು. ಟೂರ್ನಿಯಲ್ಲಿ ಅಜೇಯರಾಗಿರುವ ಅವರು ನಾಲ್ಕು ಗೆಲುವು, ನಾಲ್ಕು ‘ಡ್ರಾ’ಗಳೊಂದಿಗೆ ಆರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

10 ಆಟಗಾರರ ಟೂರ್ನಿಯಲ್ಲಿ ಅವರು ಸಮೀಪದ ಸ್ಪರ್ಧಿಗಿಂತ 1.5 ಪಾಯಿಂಟ್ಸ್ ಮುನ್ನಡೆಯಲ್ಲಿದ್ದಾರೆ. ಮೂರು ಮಂದಿ ಆಟಗಾರರು ತಲಾ 4.5 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿದ್ದಾರೆ.

ಈ ಗೆಲುವಿನೊಡನೆ ಅವರು ಫಿಡೆ ಲೈವ್ ರೇಟಿಂಗ್‌ನಲ್ಲಿ ಜೀವನಶ್ರೇಷ್ಠ ನಾಲ್ಕನೇ ಸ್ಥಾನಕ್ಕೆ ಏರಿದ್ದಾರೆ. ಅವರು ಪ್ರಸ್ತುತ 2779.9 ರೇಟಿಂಗ್ ಹೊಂದಿದ್ದಾರೆ. ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್, ಅಮೆರಿಕದ ಹಿಕಾರು ನಕಾಮುರಾ ಮತ್ತು ಫ್ಯಾಬಿಯಾನೊ ಕರುವಾನಾ ಅವರು ಮೊದಲ ಮೂರು ಸ್ಥಾನದಲ್ಲಿದ್ದಾರೆ.

‘ಈ ಟೂರ್ನಿಯಲ್ಲಿ ನನ್ನಿಂದ ಅತ್ಯುತ್ತಮ ಪ್ರದರ್ಶನ ಬಂದಿದೆ. ನಾನು ಅವಕಾಶಗಳನ್ನೆಲ್ಲಾ ಬಳಸಿದೆ. ಇಂಥ ಟೂರ್ನಿಗಳಲ್ಲಿ ಉತ್ತಮ ಸಾಧನೆ ತೋರುವುದು ಕಷ್ಟ. ಪೈಪೋಟಿ ಪ್ರಬಲವಾಗಿರುತ್ತದೆ. ನಾನು ಆಡುತ್ತಿರುವ ರೀತಿಯಿಂದ ಸಂತಸವಾಗಿದೆ’ ಎಂದು ಅರ್ಜುನ್ ಹೇಳಿದರು.

ಅರ್ಜುನ್ ಈ ವರ್ಷ ಉತ್ತಮ ಸಾಧನೆ ತೋರಿದ್ದಾರೆ. ಏಪ್ರಿಲ್‌ನಲ್ಲಿ ಮೆನೊರ್ಕಾ ಓಪನ್‌ನಲ್ಲಿ ಕಿರೀಟ ಧರಿಸಿದ್ದ ಅವರು ಟೆಪೆ ಸಿಗೆಮನ್ ಚೆಸ್ ಟೂರ್ನಿಯಲ್ಲಿ ಎರಡನೇ ಸ್ಥಾನ ಮತ್ತು ಶಾರ್ಜಾ ಮಾಸ್ಟರ್ಸ್ ಓಪನ್ ಟೂರ್ನಿಯಲ್ಲಿ ಜಂಟಿ ಐದನೇ ಸ್ಥಾನ ಪಡೆದಿದ್ದಾರೆ.

ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಸಾಮ್ಯುಯೆಲ್ ಸೆವಿಯನ್ ಅವರು ಸ್ಥಳೀಯ ಗ್ರ್ಯಾಂಡ್ ಮಾಸ್ಟರ್ ಮಾನ್ಯುಯೆಲ್ ಪೆಟ್ರೊಸಿಯನ್ ಜೊತೆ ‘ಡ್ರಾ’ ಮಾಡಿಕೊಂಡ ಕಾರಣ ಅರ್ಜುನ್ ಮುನ್ನಡೆಯ ಅಂತರ 1.5 ಪಾಯಿಂಟ್ಸ್‌ಗೇರಿತು.

# ‘ಹತ್ತು ದಿನಗಳಲ್ಲಿ ಬಾಕಿ ತೀರಿಸಿ’



ಇಗೊರ್ ಸ್ಟಿಮಾಚ್

**ನವದೆಹಲಿ (ಪಿಟಿಐ):** ತಮ್ಮನ್ನು ಭಾರತ ಫುಟ್‌ಬಾಲ್ ತಂಡದ ಕೋಚ್ ಸ್ಥಾನದಿಂದ ವಜಾಗೊಳಿಸಿರುವ ನಿರ್ಧಾರ ‘ಏಕಪಕ್ಷೀಯ’ ಎಂದು ಟೀಕಿಸಿರುವ ಇಗೊರ್ ಸ್ಟಿಮಾಚ್, ತಮಗೆ ನೀಡಬೇಕಾಗಿರುವ ಬಾಕಿ ಹಣವನ್ನು 10 ದಿನಗಳ ಒಳಗೆ ನೀಡದೇ ಹೋದಲ್ಲಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ವಿರುದ್ಧ ಫಿಫಾ ನ್ಯಾಯ ಮಂಡಳಿಯಲ್ಲಿ ಮೊಕದ್ದಮೆ ಹೂಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರ ವಿರುದ್ಧ ಸಿಡಿಮಿಡಿಗೊಂಡಿರುವ ಕ್ರೊವೇಷ್ಯಾದ ಸ್ಟಿಮಾಚ್, ಅವರು ಹಲವು ಗುತ್ತಿಗೆ ಕರಾರುಗಳನ್ನು ಅವರು ಮುರಿದಿದ್ದಾರೆ ಎಂದು ದೂರಿದ್ದಾರೆ.


ಭಾರತ ತಂಡ 2026ರ ವಿಶ್ವಕಪ್ ಅರ್ಹತಾ ಸುತ್ತಿನ ಮೂರನೇ ಸುತ್ತಿಗೆ ತಲುಪಲು ವಿಫಲವಾಗಿದ್ದಕ್ಕೆ ಚೌಬೆ ಅವರೂ ಸಹ ಕಾರಣ. ಭಾರತದಲ್ಲಿ ಇದ್ದ ಅವಧಿಯಲ್ಲಿ ತಾವು ಗಂಭೀರ ಅರೋಗ್ಯ ಸಮಸ್ಯೆ ಎದುರಿಸಬೇಕಾಯಿತು. ಎಐಎಫ್‌ಎಫ್ ಜೊತೆ ಮತ್ತೆಂದೂ ಮಾತನಾಡಲು ಬಯಸುವುದಿಲ್ಲ ಎಂದೂ ಕೋಚ್ ಹೇಳಿದರು.

‘ಒಪ್ಪಂದ ಕೊನೆಗೊಳಿಸಿದ ಮೇಲೆ ನನಗೆ ಸಲ್ಲಬೇಕಾದ ಬಾಕಿ ಹಣವನ್ನು 10 ದಿನಗಳ ಒಳಗೆ ಪಾವತಿಸಬೇಕು ಎಂದು ಕೇಳುತ್ತಿದ್ದೇನೆ’ ಎಂದಿದ್ದಾರೆ.

ವಿಶ್ವಕಪ್ ಅರ್ಹತಾ ಸುತ್ತಿನ ಮೂರನೇ ಹಂತಕ್ಕೆ ಪ್ರವೇಶಿಸಲು ವಿಫಲವಾದ ಕಾರಣ, ಎಐಎಫ್‌ಎಫ್ ಸ್ಟಿಮಾಚ್ ಅವರನ್ನು ಮುಖ್ಯ ಕೋಚ್ ಸ್ಥಾನದಿಂದ ವಜಾ ಮಾಡಿತ್ತು.

ಮೊದಲ ಸುತ್ತಿನ ಪ್ರಕ್ರಿಯೆ ನಡೆಸಿದ ಸಿಎಸಿ

# ಕೋಚ್ ಸ್ಥಾನಕ್ಕೆ ಗಂಭೀರ್ ಸಂದರ್ಶನ



ಗೌತಮ್

**ನವದೆಹಲಿ (ಪಿಟಿಐ):** ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಸ್ಥಾನದ ಆಕಾಂಕ್ಷಿಯಾಗಿರುವ ಗೌತಮ್ ಗಂಭೀರ್ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಮಂಗಳವಾರ ಸಂದರ್ಶನ ನಡೆಸಿತು. ಈ ಸಭೆಯು ಝೂಮ್ ಕಾಲ್ ಮೂಲಕ ನಡೆಯಿತು. ಗಂಭೀರ್ ಮತ್ತು ಸಿಎಸಿಯ ಮುಖ್ಯಸ್ಥ ಅಶೋಕ್ ಮಲ್ಹೋತ್ರಾ ಅವರು ವರ್ಚುವಲ್ ಆಗಿ ಹಾಜರಾಗಿದ್ದರು.

‘ಹೌದು. ಗಂಭೀರ್ ಅವರು ಸಂದರ್ಶನಕ್ಕೆ ಹಾಜರಾಗಿದ್ದರು. ಒಂದು ಸುತ್ತಿನ ಚರ್ಚೆ ಇವತ್ತು ನಡೆಯಿತು. ಇನ್ನೊಂದು ಸುತ್ತಿನ ಮಾತುಕತೆ ನಡೆಯುವ ಸಾಧ್ಯತೆ ಇದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.


ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಕರೆದಾಗಿನಿಂದಲೂ ಗಂಭೀರ್ ಅವರ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಅವರ ಆಯ್ಕೆಯು ಬಹುತೇಕ ಖಚಿತ ಎಂದೂ ಹೇಳಲಾಗುತ್ತಿದೆ. ಮುಂದಿನ 48 ಗಂಟೆಗಳಲ್ಲಿ ಬಿಸಿಸಿಐ ನಿರ್ಧಾರ ಪ್ರಕಟವಾಗುವ ನಿರೀಕ್ಷೆ ಇದೆ.

ಸಿಎಸಿಯು ಎಲ್ಲ ಅಭ್ಯರ್ಥಿಗಳ ಸಂದರ್ಶನದ ನಂತರ ಸೂಕ್ತ ವ್ಯಕ್ತಿಯ ಹೆಸರನ್ನು ಬಿಸಿಸಿಐಗೆ ಶಿಫಾರಸು ಮಾಡಲಿದೆ. ಮುಂದಿನ 3 ವರ್ಷಗಳ ಅವಧಿಯಲ್ಲಿ ಭಾರತ ತಂಡದ ಭವಿಷ್ಯದ ರೂಪುರೇಷೆಯ ಕುರಿತು ಗೌತಮ್ ಅವರೊಂದಿಗೆ ಚರ್ಚೆ ನಡೆಸಲಾಯಿತು. ಅವರ ಅಭಿಪ್ರಾಯಗಳನ್ನು ಸಿಎಸಿ ಸದಸ್ಯರು ಆಲಿಸಿದರು. ಸಿಎಸಿಯು ಉತ್ತರ ವಲಯದ ಆಯ್ಕೆದಾರರ ಸ್ಥಾನಕ್ಕಾಗಿಯೂ ಕೆಲವು ಅಭ್ಯರ್ಥಿಗಳ ಸಂದರ್ಶನ ನಡೆಸಲಿದೆ.

ಗಂಭೀರ್ ಮಾರ್ಗದರ್ಶನದಲ್ಲಿ ಈಚೆಗೆ ಕೆಕೆಆರ್ ಐಪಿಎಲ್ ಟ್ರೋಫಿ ಗೆದ್ದಿತ್ತು. ಆ ತಂಡಕ್ಕೆ ಮೆಂಟರ್ ಆಗಿದ್ದರು. ಟಿ20 ವಿಶ್ವಕಪ್ ಟೂರ್ನಿಯ ನಂತರ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಕಾರ್ಯಾವಧಿ ಮುಕ್ತಾಯವಾಗಲಿದೆ.

ಯುರೋ ಕಪ್: ಆಸ್ಟ್ರಿಯಾ ತಂಡಕ್ಕೆ ಸೋಲು

# ಎಂಬಾಪೆ ಮೂಗಿಗೆ ಪೆಟ್ಟು: ಫ್ರಾನ್ಸ್‌ಗೆ ಜಯ



ಫ್ರಾನ್ಸ್ ತಂಡದ ಕಿಲಿಯನ್ ಎಂಬಾಪೆಯವರ ಮೂಗಿಗೆ ಪೆಟ್ಟು ಬಿದ್ದು ರಕ್ತಸ್ರಾವವಾದಾಗ ವೈದ್ಯರು ಚಿಕಿತ್ಸೆ ನೀಡಿದರು –ಎಎಫ್‌ಪಿ ಚಿತ್ರ

ಡಸೆಲ್‌ಡಾರ್ಫ್, ಜರ್ಮನಿ (ಎಎಫ್‌ಪಿ): ಫ್ರಾನ್ಸ್ ನಾಯಕ ಕಿಲಿಯನ್ ಎಂಬಾಪೆ ಮಂಗಳವಾರ ನಡೆದ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮೂಗು ಮುರಿದುಕೊಂಡರು. ಆದರೆ ಅವರ ತಂಡವು 1–0ಯಿಂದ ಆಸ್ಟ್ರಿಯಾ ವಿರುದ್ಧ ಜಯಭೇರಿ ಬಾರಿಸಿತು.

ಪಂದ್ಯದಲ್ಲಿ ಮೇಲಕ್ಕೆ ಚಿಮ್ಮಿದ ಚೆಂಡಿನ ಮೇಲೆ ನಿಯಂತ್ರಣದ ಸಾಧಿಸುವ ಭರದಲ್ಲಿ ಎಂಬಾಪೆಯವರು, ಆಸ್ಟ್ರೀಯಾದ ಡಿಫೆಂಡರ್ ಕೆವಿನ್ ಡೆನ್ಸೊ ಅವರಿಗೆ ಡಿಕ್ಕಿ ಹೊಡೆದರು. ಅವರ ಮೂಗಿಗೆ ಬಲವಾದ ಪೆಟ್ಟಾಗಿ ತೀವ್ರ ರಕ್ತಸ್ರಾವವಾಯಿತು. ಇದರಿಂದಾಗಿ ಪಂದ್ಯದ 90ನೇ ನಿಮಿಷದಲ್ಲಿ ಎಂಬಾಪೆ ಮೈದಾನ ತೊರೆದರು.

‘ಅವರಿಗೆ (ಎಂಬಾಪೆ) ತೀವ್ರ ಪೆಟ್ಟಾಗಿದೆ. ಅವರ ಮೂಗಿನ ಸ್ಥಿತಿ ಗಂಭೀರವಾದಂತಿದೆ. ಈ ಸಂಜೆ ನಮ್ಮ ತಂಡದ ಪಾಲಿಗೆ ಈ ಘಟನೆಯು ಅತ್ಯಂತ ದುಃಖದಾಯಕವಾಗಿದೆ’ ಎಂದು ಫ್ರಾನ್ಸ್ ಕೋಚ್ ಡಿಡೀರ್ ದೇಶ್‌ಚಾಂಪ್ಸ್ ಸುದ್ದಿಗಾರರಿಗೆ ಹೇಳಿದರು.

ಎಂಬಾಪೆ ಗಾಯಗೊಂಡಿದ್ದರೂ ಆಟ ಮುಂದುವರಿದಿತ್ತು. ಆದರೆ ಇದನ್ನು ನೋಡಿದ ಆಸ್ಟ್ರಿಯಾ ಗೋಲ್‌ಕೀಪರ್ ಪ್ಯಾಟ್ರಿಕ್ ಪೆಂಜ್ ಅವರು ರೆಫರಿಯ ಗಮನಕ್ಕೆ ತಂದರು. ಆಗ ಆಟ ಕೆಲಹೊತ್ತು ಸ್ಥಗಿತವಾಯಿತು. ಫ್ರಾನ್ಸ್ ತಂಡದ ವೈದ್ಯಕೀಯ ಸಿಬ್ಬಂದಿ ಧಾವಿಸಿ ಪ್ರಥಮ ಚಿಕಿತ್ಸೆ ನೀಡಿದರು. ಎಂಬಾಪೆಯವರ ಪೋಷಾಕು ರಕ್ತಸಿಕ್ತವಾಗಿತ್ತು. ಅವರನ್ನು ಚಿಕಿತ್ಸೆಗಾಗಿ ಹೊರಗೆ ಕರೆದೊಯ್ಯಲಾಯಿತು. ಎಂಬಾಪೆ ಬದಲಿಗೆ ಅನುಭವಿ ಆಟಗಾರ ಒಲಿವರ್ ಗಿರೋದ್ ಅವರು ಆಡಿದರು.

ಪಂದ್ಯದ ನಂತರ ಎಂಬಾಪೆಯವರ ಗಾಯದ ಕುರಿತು ಮಾಹಿತಿ ನೀಡಿದ ಫ್ರೆಂಚ್ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಫಿಲಿಪ್ ಡಿಯಾಲೊ ‘ಶಸ್ತ್ರಚಿಕಿತ್ಸೆಗೆ ಅಗತ್ಯವಿರಲಾರದು’ ಎಂದರು.

ಪಂದ್ಯವು ಬಹಳಷ್ಟು ಕುತೂಹಲ ಕೆರಳಿಸಿತ್ತು. ಮೊದಲ 37 ನಿಮಿಷಗಳಲ್ಲಿ ಉಭಯ ತಂಡಗಳ ಆಟಗಾರರು ಗೋಲು ಗಳಿಸಲು ಮಾಡಿದ ಪ್ರಯತ್ನಗಳಿಗೆ ಫಲ ಸಿಗಲಿಲ್ಲ. ಆದರೆ 38ನೇ ನಿಮಿಷದಲ್ಲಿ ಫ್ರಾನ್ಸ್ ತಂಡದ ಅದೃಷ್ಟ ಖುಲಾಯಿಸಿತು. ಆಸ್ಟ್ರಿಯಾದ ಮ್ಯಾಕ್ಸಿಮಿಲಿಯನ್ ವೋಬರ್ ಗೋಲು ‘ಉಡುಗೊರೆ’ ನೀಡಿದರು. ಇದರಿಂದಾಗಿ ಫ್ರಾನ್ಸ್ ತಂಡವು 1–0 ಮುನ್ನಡೆ ಗಳಿಸಿತು. ಇದನ್ನು ಕೊನೆಯವರೆಗೂ ಉಳಿಸಿಕೊಂಡಿತು.

## ಮುಖಗವಸು ಧರಿಸಿ ಆಡುವರೇ ಎಂಬಾಪೆ?

ಡಸೆಲ್‌ಡಾರ್ಫ್, ಜರ್ಮನಿ (ಎಪಿ): ಆಸ್ಟ್ರಿಯಾ ಎದುರಿನ ಪಂದ್ಯದಲ್ಲಿ ಎಂಬಾಪೆ ಅವರ ಮೂಗಿಗೆ ತೀವ್ರ ಗಾಯವಾಗಿದೆ. ಒಂದೊಮ್ಮೆ ಅವರು ಮುಂದಿನ ಪಂದ್ಯದಲ್ಲಿ ಆಡಬಹುದು. ಅದಕ್ಕಾಗಿ ಮುಖಗವಸು ಧರಿಸಬೇಕಾಗುತ್ತದೆ ಎಂದು ಫ್ರೆಂಚ್ ಫುಟ್‌ಬಾಲ್ ಫೆಡರೇಷನ್ ಮೂಲಗಳು ತಿಳಿಸಿವೆ.

‘ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯಕೀಯ ತಂಡವು ತೀವ್ರ ನಿಗಾ ವಹಿಸಿದೆ. ಆದಷ್ಟು ಶಸ್ತ್ರಚಿಕಿತ್ಸೆ ಮಾಡದಿರಲು ಚಿಕಿತ್ಸೆ ನೀಡಲಾಗುತ್ತಿದೆ. ಗಾಯ ಶಮನಕ್ಕೆ ಕೆಲವು ದಿನಗಳ ಸಮಯ ಬೇಕಾಗಬಹುದು. ಒಂದೊಮ್ಮೆ ಅವರು ಮುಂದಿನ ಪಂದ್ಯದಲ್ಲಿ ಆಡಬೇಕಾದರೆ, ಮತ್ತೆ ಪೆಟ್ಟಾಗದಂತೆ ಮೂಗಿಗೆ ಮಾಸ್ಕ್ ಧರಿಸಬೇಕಾಗಬಹುದು’ ಎಂದು ಫೆಡರೇಷನ್ ಮೂಲಗಳು ತಿಳಿಸಿವೆ.

## ಪಾವೊ ನೂರ್ಮಿ ಅಥ್ಲೆಟಿಕ್ ಕೂಟ: ನೀರಜ್ ಗೆ ಚಿನ್ನ

**ತುರ್ಕು (ಫಿನ್ಲೆಂಡ್) (ಪಿಟಿಐ):** ವಿಶ್ವ ಚಾಂಪಿಯನ್ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಮಂಗಳವಾರ ಇಲ್ಲಿ ನಡೆದ ಪಾವೊ ನೂರ್ಮಿ ಅಥ್ಲೆಟಿಕ್ಸ್ ಕೂಟದಲ್ಲಿ ಚೊಚ್ಚಲ ಚಿನ್ನದ ಪದಕ ಗೆದ್ದಿದ್ದಾರೆ.

2022 ರಲ್ಲಿ ಇಲ್ಲಿ ಬೆಳ್ಳಿ ಗೆದ್ದಿದ್ದ ಚೋಪ್ರಾ, ತಮ್ಮ ಮೂರನೇ ಪ್ರಯತ್ನದಲ್ಲಿ 85.97 ಮೀಟರ್ ದೂರ ಎಸೆದು ಪ್ರಥಮ ಸ್ಥಾನ ಪಡೆದರು.

ಟೋನಿ ಕೆರಾನೆನ್ 84.19 ಮೀಟರ್ ಎಸೆದು ಬೆಳ್ಳಿ ಪದಕ ಗೆದ್ದರೆ, 2022ರ ಚಿನ್ನದ ಪದಕ ವಿಜೇತ ಒಲಿವರ್ ಹೆಲಾಂಡರ್ 83.96 ಮೀಟರ್ ಎಸೆದು ಮೂರನೇ ಸ್ಥಾನ ಪಡೆದರು.

ಜರ್ಮನ್ ಪ್ರತಿಭೆ ಮ್ಯಾಕ್ಸ್ ಡ್ಲೆನಿಂಗ್ ಅವರಿಂದ ಪೈಪೋಟಿ ನಿರೀಕ್ಷಿಸಲಾಗಿತ್ತು. ಆದರೆ ಅವರಯ 79.84 ಮೀ. ದೂರ ಎಸೆದು 7ನೇ ಸ್ಥಾನ ಪಡೆದರು.

# ಬಿಟಿಸಿ: ರೇಸ್‌ಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಿಮ್ಮ ನಿಲುವು, ಯಾರೋ ಮಾಡಿದ ತಪ್ಪಿಗೆ ಇನ್ಯಾರಿಗೋ ಬರೆ ಎಳೆದಂತಿದೆ’ ಎಂದು ಸರ್ಕಾರದ ಆದೇಶಕ್ಕೆ ಅತೃಪ್ತಿ ವ್ಯಕ್ತಪಡಿಸಿರುವ ಹೈಕೋರ್ಟ್, ‘ಬೆಂಗಳೂರು ಟರ್ಫ್ ಕ್ಲಬ್’ನಲ್ಲಿ (ರೇಸ್ ಕೋರ್ಸ್–ಬಿಟಿಸಿ) ಕುದುರೆ ರೇಸ್‌ಗಳ ಆಯೋಜನೆಗೆ ಅನುಮತಿ ನೀಡಿದೆ.

ರೇಸ್ ಆಯೋಜನೆಗಾಗಿ ಕ್ಲಬ್ ಕೋರಿದ್ದ ಲೈಸೆನ್ಸ್ ನವೀಕರಣ ಮನವಿಯನ್ನು ತಿರಸ್ಕರಿಸಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ, ‘ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಕಂಪನಿ’ ಹಾಗೂ ಇತರರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ. ಇದರಿಂದಾಗಿ ಕಳೆದ ಮೂರು ತಿಂಗಳಿನಿಂದ ಸ್ಥಗಿತಗೊಂಡಿದ್ದ ರೇಸ್ ಚಟುವಟಿಕೆ ಪುನರಾರಂಭಗೊಳ್ಳಲಿವೆ.

‘ಬಿಟಿಸಿಯು, ಆನ್ ಕೋರ್ಸ್ (ಬೆಂಗಳೂರು) ಮತ್ತು ಆಫ್ ಕೋರ್ಸ್ ಬೆಟ್ಟಿಂಗ್ ಹಮ್ಮಿಕೊಳ್ಳಬಹುದಾಗಿದೆ. ಎಲ್ಲಾ ರೇಸ್‌ಗಳೂ, ಸರ್ಕಾರ ಈಗಾಗಲೇ 2024ರ ಮಾರ್ಚ್‌ನಲ್ಲಿ ನೀಡಿರುವ ಪರವಾನಗಿಗೆ ಅನುಗುಣವಾದ ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟಿರುತ್ತವೆ. ಹಾಗೆಯೇ, ಪ್ರತಿವಾದಿಗಳು ರೇಸಿಂಗ್ ಚಟುವಟಿಕೆಗಳ ಮೇಲೆ ನಿಗಾವಹಿಸಲು ಸ್ವಾತಂತ್ರ್ಯ ಹೊಂದಿದ್ದಾರೆ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಕುದುರೆ ರೇಸ್‌ಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸುಮಾರು 20 ಸಾವಿರಕ್ಕೂ ಹೆಚ್ಚು ಜನ ಅವಲಂಬಿಸಿದ್ದಾರೆ. ಪ್ರತಿ ದಿನ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತಿದೆ ಮತ್ತು ಇದು ಬೊಕ್ಕಸಕ್ಕೆ ಸೇರುತ್ತದೆ.

ರೇಸ್‌ಕೋರ್ಸ್ ಆಡಳಿತ ಮಂಡಳಿಯಲ್ಲಿ ಸರ್ಕಾರದ ಹಣಕಾಸು ಕಾರ್ಯದರ್ಶಿ, ಬೆಂಗಳೂರು ನಗರ ಪೊಲೀಸ್ ಆಯುಕ್ತರೂ ಸದಸ್ಯರಾಗಿದ್ದಾರೆ. ರೇಸ್‌ಗಳ ಆಯೋಜನೆಯ ಎಲ್ಲ ಚಟುವಟಿಕೆಗಳು ಸರ್ಕಾರದ ಮೂಗಿನಡಿಯಲ್ಲೇ ಇರುತ್ತವೆ. ಇಲ್ಲಿ ಅಕ್ರಮಗಳನ್ನು ನಡೆಸುವ ಸಾಧ್ಯತೆಗಳೇ ಇಲ್ಲ’ ಎಂದು ನ್ಯಾಯಪೀಠಕ್ಕೆ ಮನದಟ್ಟು ಮಾಡಿಕೊಟ್ಟರು.

‘ತೆರಿಗೆ ವಂಚನೆ ಮತ್ತು ಅಕ್ರಮ ಬೆಟ್ಟಿಂಗ್ ನಡೆಸಿದವರ ವಿರುದ್ಧ, ದೋಷಾರೋಪ ಹೊತ್ತ ಬುಕ್ಕಿಗಳ ಪರವಾನಗಿ ರದ್ದುಪಡಿಸಲು ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈಗಾಗಲೇ ನಿರ್ಧಾರ ಕೈಗೊಳ್ಳಲಾಗಿದೆ. ಅಷ್ಟಕ್ಕೂ, ಕುದುರೆ ರೇಸ್‌ಗಳ ಆಯೋಜನೆಯಲ್ಲಿ ಬುಕ್ಕಿ ಕಂಪನಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ. ಆದ್ದರಿಂದ, ರೇಸ್‌ಗಳ ಆಯೋಜನೆಗೆ ಅವಕಾಶ ಕಲ್ಪಿಸಬೇಕು’ ಎಂದು ಕೋರಿದ್ದರು. ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಲಾಗಿದೆ.

‘ಬೆಂಗಳೂರು ಟರ್ಫ್ ಕ್ಲಬ್’ ಪರ ಹಿರಿಯ ವಕೀಲ ಎಸ್.ಎಸ್. ನಾಗಾನಂದ, ‘ದಿ ಕರ್ನಾಟಕ ಟ್ರೇನರ್ಸ್ ಅಸೋಸಿಯೇಷನ್ಸ್’ ಪರ ರವಿ ಬಿ.ನಾಯಕ್ ಮತ್ತು ಕೆ.ಬಿ.ಮೋನೇಶ್ ಕುಮಾರ್, ‘ಕರ್ನಾಟಕ ರೇಸ್ ಕುದುರೆ ಮಾಲೀಕರ ಸಂಘದ ಅಧ್ಯಕ್ಷ ಎಸ್. ಪದ್ಮನಾಭನ್ ಮತ್ತು ಗಿರೀಶ್ ಬಾಳಿಗಾ’ ಪರ ಹಿರಿಯ ವಕೀಲ ಡಿ.ಆರ್.ರವಿಶಂಕರ್ ಹಾಗೂ ‘ಕರ್ನಾಟಕ ಜಾಕಿಗಳ ಸಂಘ’ದ ಕೆ.ಆರ್.ವಸಂತ ಕುಮಾರ್ ಸೇರಿದಂತೆ ಒಟ್ಟು ಎಂಟು ಜನರ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಮತ್ತು ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದ್ದರು.